ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 42 ಅಕ್ಟೋಬರ್ 17, 2004 ಬೆಲೆ ರೂ. 3.00




‘ಕೆಲ್ಸ ಕೊಡಿ ಕೊಡ್ರೀ ಕೆಲ್ಸ’

ಕೇಸರೀಕರಣದಿಂದ ಮುಕ್ತಿಯಾಗುವ ಬಗೆ......




ರಾಜಧಾನಿಯತ್ತ....

- ಸಾಕ್ಷರತಾ ಪ್ರೇರಕರು
- ಕೃಪಾಂಕ ನೌಕರರು
- ನಿರುದ್ಯೋಗಿಗಳು
- ಎಲ್ಲಾ ಯುವಜನರು



ಗಂಗಾವತಿ : ಆಧುನಿಕ ದುಶ್ಯಾಸನರ ಅಟ್ಟಹಾಸ



ಈಶಾನ್ಯ ಭಾರತ : ಭುಗಿಲೆದ್ದ ಭಯೋತ್ಪಾದನೆ

- ಮುಖ್ಯಮಂತ್ರಿಗಳೇ ರೈತ-ಕೂಲಿಕಾರರ ಅಹವಾಲು ಕೇಳಿತೇ?
- ಮಂಡಿಯೂರಿದ ಸಾರ್ವಕರ್-ಸೆಟೆದು ನಿಂತ ಶಿವಾ
- ಜರ್ಮನಿಯಲ್ಲಿ ‘ಸೋಮವಾರದ ರ್‍ಯಾಲಿ’ಗಳು

ತಣ್ಣಗಾಗುತ್ತಿರುವ ಸಾರ್ವಕರ್‌ನ ವೀರತನದ ವಿವಾದದ ಒಡಲಲ್ಲೇ ಸಿಡಿದುಬಂದ ಕುದಿವ ಸತ್ಯ ಸಂಗತಿಯೊಂದನ್ನು ಲೇಖಕರು ಅನಾವರಣಗೊಳಿಸಿದ್ದಾರೆ. ಕರಿನೀರಿನ ಶಿಕ್ಷೆಗೆ ಒಳಗಾಗಿ ಸಾರ್ವಕರ್ ಜೊತೆಯಲ್ಲಿದ್ದು ಬ್ರಿಟೀಷರಿಗೆ ಮಂಡಿಯೂರದ ನಿಜ ವೀರನ ಕಳೆದು ಹೋ(ಗ)ದ ಚಿತ್ರಣವಿಲ್ಲಿ...

ನೆನಪಿಡಬೇಕಾದ ಸುಬ್ರಹ್ಮಣ್ಯಂ ಶಿವಾ

ನಿಜ ವೀರನಿಗೆ ಫಲಕವಿಲ್ಲ !

ಕೆ.ಎಸ್.ರವಿಕುಮಾರ್, ಹಾಸನ

'ವೀರ ಸಾವರ್ಕರ್ ವಿವಾದ ಸಧ್ಯ ತಣ್ಣಗಾಗಿದೆ. ಈ ವಿವಾದ ಪ್ರಸ್ತುತ ಅಗತ್ಯವಿರಲಿಲ್ಲ ಎಂಬುದಂತೂ ನಿಜ. ಮತ್ತೀಗ ಈ ವಿವಾದಕ್ಕೆ ತುಪ್ಪ ಸುರಿಯುವ ಕೆಲಸ ಮಾಡಲು ನಾನು ಹೊರಟಿಲ್ಲ. ವಿವಾದದ ಹುಚ್ಚು ಹೊಳೆಯಲ್ಲಿ ಚರ್ಚೆಯಾಗದೆ ಕೊಚ್ಚಿಹೋದ ಒಂದು ಸತ್ಯವನ್ನು ನಿಮ್ಮೆದುರು ಅನಾವರಣಗೊಳಿಸಲು ಬಯಸುತ್ತೇನೆ.

ಸಾವರ್‌ಕರ್ ವಿವಾದ ಆರಂಭವಾದದ್ದು ಒಂದು ಶಿಲಾಫಲಕದಿಂದ (ಆ ಶಿಲಾಫಲಕ ಗ್ರಾನೈಟ್‌ನದೋ, ಅಮೃತಶಿಲೆಯದೋ ಎಂಬ ವಿವಾದವಂತೂ ಇಲ್ಲ). ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಸಂಘ ಪರಿವಾರದ ಅಪೇಕ್ಷೆಯ ಮೇರೆಗೆ ಈ ಶಿಲಾಫಲಕವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ನಿಲ್ಲಿಸಲಾಗಿತ್ತು. ಸಾವರ್ಕರ್‌ಗೆ ಈ ತನಕ ಸ್ವಾತಂತ್ರ್ಯ ಹೋರಾಟಗಾರನಾಗಿ ಸಿಗಬೇಕಾದ ಸ್ಥಾನಮಾನ ಸಿಕ್ಕಿಲ್ಲವೆಂದು ತೀರ್ಮಾನಿಸಿ ಅವರಿಗೆ ಆ ಸ್ಥಾನಮಾನ ದೊರಕಿಸಿ ಕೊಡುವ ಸಲುವಾಗಿ ಸದರಿ ಶಿಲಾಫಲಕದ ಮೇಲೆ 'ವಿನಾಯಕ ದಾಮೋದರ ಸಾವರ್ಕರ್ ಹಿಂದೂ ರಾಷ್ಟ್ರದ ನಿರ್ಮಾಣಕ್ಕಾಗಿ ಹೋರಾಡಿದ ಮಹಾನ್ ಹೋರಾಟಗಾರ....: ಎಂದು ಕೆತ್ತಲಾಗಿತ್ತು. ಈ ಫಲಕದ ಮೂಲಕ ವಿವಾದದ ಬೀಜ ಬಿತ್ತಿದ್ದು ಎನ್‌ಡಿಎ ಸರ್ಕಾರವೆ. 'ಹಿಂದೂ ರಾಷ್ಟ್ರದ ....' ಎಂದು ಆರಂಭಿಸುವ ಬದಲು 'ಬ್ರಿಟೀಷರ ವಿರುದ್ಧ ಹೋರಾಡಿದ ದೇಶಾಭಿಮಾನಿ ಸಾವರ್ಕರ್......' ಎಂದು ಬರೆಸಿದ್ದರೆ ಮಣಿ ಶಂಕರ್ ಅಯ್ಯರ್‌ಗೆ ವಿವಾದದ ಫಲಕವನ್ನು ತೆಗೆಸಿ ಹಾಕುವ ಪ್ರಮೇಯ ಇರುತ್ತಿರಲಿಲ್ಲವೇನೊ.

ಮೊದಲಿನಿಂದಲೂ ಸಾವರ್ಕರ್ ಅವರ ನಿಲುವು, ನಿರ್ಧಾರಗಳು ಹಲವಾರು ವಿವಾದಗಳಿಗೆ ಕಾರಣವಾಗಿರುವುದರಿಂದ ಅವರ ಕುರಿತ ಯಾವುದೇ ಚರ್ಚೆ ವಿವಾದದಲ್ಲೆ ಕೊನೆಗೊಳ್ಳುತ್ತದೆ. ಸಾವರ್ಕರ್ ಪರವಾಗಿರುವವರು ಮತ್ತು ವಿರೋಧಿಗಳಿಗೆ ತಮ್ಮ ತಮ್ಮ ವಾದಗಳನ್ನು ಸಮರ್ಥಿಸಿಕೊಳ್ಳಲು ಬೇಕಾದಷ್ಟು 'ಪುರಾವೆ'ಗಳಿರಬಹುದು (ಪರವಾಗಿ ವಾದಿಸುವವರಂತೂ ಸಾವರ್ಕರ್ ಕುರಿತ ಟೀಕೆಗಳಿಗೆ ಪ್ರತಿಯಾಗಿ ಸೇಡಿನ ಕ್ರಮವೆಂಬಂತೆ ನೆಹರೂ ಹಾಗೂ ಗಾಂಧೀ ಕುರಿತು ಕೀಳಾಗಿ ಲೇಖನಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಕೆಲವು ರಾಜ್ಯಮಟ್ಟದ ಪತ್ರಿಕೆಗಳು ಅಂತಹ ಲೇಖನಗಳನ್ನು ಪ್ರಕಟಿಸಿವೆ).

ಮೊಹಮ್ಮದ್ ಅಲಿ ಜಿನ್ನಾರಿಗಿಂತಲೂ ಮೊದಲೆ 'ದ್ವಿರಾಷ್ಟ್ರ ನೀತಿ' (Two nation theory) ಯನ್ನು ಪ್ರತಿಪಾದಿಸಿದವರು ಸಾವರ್ಕರ್. ಭಾರತೀಯತೆಯ ಜಾಗದಲ್ಲಿ 'ಹಿಂದುತ್ವ'ದ ಕಲ್ಪನೆಯನ್ನು ಚಾಲ್ತಿಗೆ ತಂದವರು ಸಾವರ್ಕರ್ ಅವರೇ, ಹಿಂದೂತ್ವ ಭಾರತೀಯನ ವ್ಯಕ್ತಿತ್ವವಾಗಬೇಕು ಎಂದು ವಾದಿಸುತ್ತಿದ್ದ ಸಾವರಕರ್ ಆರ್.ಎಸ್.ಎಸ್. ಎಂಬ ರಾಷ್ಟ್ರೀಯವಾದಿ ಸಂಘಟನೆಗೆ ಸಿದ್ಧಾಂತವೊಂದನ್ನು ದೊರಕಿಸಿ ಕೊಟ್ಟರು. ಅವರು ಕ್ರಿಯಾಶೀಲರಾಗಿದ್ದ 'ಹಿಂದೂ ಮಹಾಸಭಾ' ಸ್ವಾತಂತ್ರ್ಯ ಚಳುವಳಿಯ ಮುಖ್ಯವಾಹಿನಿಯಿಂದ ಹೊರನಿಂತು ಮುಸಲ್ಮಾನರಿಂದ ಮುಕ್ತವಾದ ಹಿಂದೂ ರಾಷ್ಟ್ರದ ಕನಸು ಕಾಣುವಂತಾಗಲು ಸಾವರ್ಕರ್ ಕೊಡುಗೆ ಗಮನಾರ್ಹವಾದುದು.

ಗಾಂಧೀಯನ್ನು ಹತ್ಯೆ ಮಾಡಿದ ನಾಥುರಾಮ್ ಗೋಡ್ಸೆ ಮತ್ತು ಸಾವರ್‌ಕರ್ ನಡುವೆ ನಿಕಟವಾದ ಗುರು ಶಿಷ್ಯ ಸಂಬಂಧವಿತ್ತು. ಸಾವರ್ಕರ್ ಗೋಡ್ಸೆಯ ವಿಶ್ವಸನೀಯ ಸಲಹೆಗಾರ(Mentor) ರಾಗಿದ್ದರು. ಗಾಂಧೀ ಹತ್ಯೆಯ ನಂತರ ಸಾವರ್ಕರ್ ಬಂಧನಕ್ಕೊಳಗಾದರೂ ಹತ್ಯೆಯ ಪಿತೂರಿಯಲ್ಲಿ ಅವರ ಕೈವಾಡ ಸಾಬೀತುಪಡಿಸುವ ಸೂಕ್ತ ಪುರಾವೆ ದಕ್ಕದೇ ಹೋಗಿದ್ದರಿಂದ ಅವರು ದೋಷ ಮುಕ್ತರಾದರು. ಈ ವಿಚಾರದಲ್ಲಿ ಇವತ್ತಿಗೂ ಸಾವರ್ಕರ್ ಅವರ ಪಾತ್ರ ವಿವಾದಾಸ್ಪದವಾಗಿಯೇ ಉಳಿದಿದೆ.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ 1900-1930ರ ಅವಧಿ ಶಸ್ತ್ರಹಿಡಿದ ಕ್ರಾಂತಿಕಾರಿಗಳು ಕ್ರಿಯಾಶೀಲರಾಗಿದ್ದ ಅವಧಿ. ಅವರು ಬ್ರಿಟೀಷ್ ಆಳರಸರನ್ನು ದುಸ್ವಪ್ನವಾಗಿ ಕಾಡಿದ ಅವಧಿ. ಈ ಹೊತ್ತಿಗಾಗಲೇ ಕಾಂಗ್ರೆಸ್ ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಎಂದು ಇಬ್ಭಾಗವಾಗಿ ತಾನೇ ಕವಲು ದಾರಿಯಲ್ಲಿ ಬಂದು ನಿಂತಿತ್ತು. ಬಿಸಿರಕ್ತದ ಯುವಕ, ಯುವತಿಯರಿಗೆ ಕಾಂಗ್ರೆಸ್ಸಿನ ಸ್ಫೂರ್ತಿಗಿಂತ ಕ್ರಾಂತಿಯ ಸ್ಫೂರ್ತಿ ಹೆಚ್ಚು ಅರ್ಥಪೂರ್ಣವಾಗಿ ಕಂಡಿತ್ತು. ನೇಣಿಗೇರಿದ ಚಾಪೇಕರ್ ಸಹೋದರರಿಂದ ಪ್ರಭಾವಿತರಾದ ಯುವ ಸಾವರ್‌ಕರ್ ಕೂಡ ಬಂದೂಕಿನಿಂದಲೇ ಬ್ರಿಟೀಷರನ್ನು ತೊಲಗಿಸಬೇಕು ಎಂಬ ತೀರ್ಮಾನಕ್ಕೆ ಬಂದಿದ್ದರು. ಮದನ್‌ಲಾಲ್ ಧಿಂಗ್ರಾನಿಂದ ಕೊಲೆಯಾದ ಬ್ರಿಟೀಷ್ ಅಧಿಕಾರಿ ವಿಲಿಯಮ್ ಕರ್ಜನ್ ಮತ್ತು ನಾಸಿಕ್ ಜಿಲ್ಲೆಯ ಕಲೆಕ್ಟರ್‌ನ ಹತ್ಯೆಯ ಪಿತೂರಿಯಲ್ಲಿ ಸಾವರ್ಕರ್ ಕೈವಾಡವಿದೆಯೆಂದು ಬ್ರಿಟೀಷರು ಶಂಕಿಸಿ ಅವರನ್ನು ಅಂಡಮಾನಿನ ಜೈಲಿನಲ್ಲಿರಿಸಿದರು. ಇಲ್ಲಿಯವರೆಗೂ ಕ್ರಾಂತಿಕಾರಿಯಾಗಿದ್ದ ಸಾಹಸೀ ಪ್ರವೃತ್ತಿಯ ಸಾವರ್ಕರ್ ಸೆಲ್ಯುಲಾರ್ ಜೈಲಿನಲ್ಲಿ ಬಹಳ ಬದಲಾದರು. ಅಲ್ಲಿ ನೀಡುತ್ತಿದ್ದ ಬಹಳ ತ್ರಾಸದಾಯಕ ಶಿಕ್ಷೆಗಳು ಅವರನ್ನು ಹೈರಾಣಾಗಿಸಿರಬೇಕು. ಬಂಧಿತರಾದ ಒಂದೇ ವರ್ಷದಲ್ಲಿ ಬ್ರಿಟೀಷ್ ಸರ್ಕಾರಕ್ಕೆ ಕ್ಷಮಾಧಾನ ಬೇಡಿ ದೀರ್ಘ ಅರ್ಜಿಯೊಂದನ್ನು ಬರೆದರು. ಈ ಅರ್ಜಿಯನ್ನು ಸರ್ಕಾರ ತಿರಸ್ಕರಿಸಿತು. ಆದರೆ ಸರ್ಕಾರ ಅಂಡಮಾನಿನ ಖೈದಿಗಳಿಗೆ ತಾವಿನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದಿಲ್ಲ ಎಂಬ ಮುಚ್ಚಳಿಕೆ ಬರೆದುಕೊಟ್ಟರೆ ಬಿಡುಗಡೆಯ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿತು. ವೀರ ಸಾವರ್ಕರ್ ಕೂಡಲೇ ದಯಾಭಿಕ್ಷೆ ಕೋರಿ ಮುಚ್ಚಳಿಕೆ ಬರೆದುಕೊಟ್ಟರು. ಸ್ಥಳಾಭಾವದಿಂದ ಈ ಮುಚ್ಚಳಿಕೆಯ ಮುಖ್ಯ ಅಂಶಗಳನ್ನು ಮಾತ್ರ ಸಂಗ್ರಹಿಸಿರುವೆ.

ಅದು ಹೀಗೆ ಸಾಗುತ್ತದೆ. '......... ಭಾರತ ಮತ್ತು ಮನುಕುಲದ ಒಳಿತು ಬಯಸುವ ಯಾವನೂ ಈ ಮುಳ್ಳಿನ ಹಾದಿ(ಅಂದರೆ ಸ್ವಾತಂತ್ರ್ಯ ಚಳುವಳಿ) ಯಲ್ಲಿ ಕುರುಡಾಗಿ ಸಾಗುವುದಿಲ್ಲ. 1906-07 ರಲ್ಲಿದ್ದ ಭಾರತದ ನಿರಾಶಾದಾಯಕ ಸ್ಥಿತಿಯಲ್ಲಿ ಶಾಂತಿ ಮತ್ತು ಪ್ರಗತಿಯ ಹಾದಿಯಿಂದ ನಾವು ದಾರಿ ತಪ್ಪಿದೆವು. ಆದ್ದರಿಂದ ಸರ್ಕಾರ ದೊಡ್ಡ ಮನಸ್ಸು ಮಾಡಿ, ದಯೆ ತೋರಿಸಿ, ನನ್ನನ್ನು ಬಿಡುಗಡೆ ಮಾಡಿದರೆ, ಇಂಗ್ಲೀಷ್ ಸರ್ಕಾರಕ್ಕೆ ನಾನು ಯವತ್ತೂ ವಿಧೇಯನಾಗಿರುತ್ತೇನೆ. ಇಂಗ್ಲೀಷ್ ಸರ್ಕಾರದ ಅಡಿಯಲ್ಲಿ ಶಾಂತಿ ಮತ್ತು ಸಂವೈಧಾನಿಕ ಪ್ರಗತಿಯ ಪ್ರತಿಪಾದಕನಾಗಿ ಅದರ ಮುಂದುವರಿಕೆಗೆ ದುಡಿಯುತ್ತೇನೆ....... ನನಗೆ ಸರಿಯಾದ ವಿಚಾರಣೆ ಮತ್ತು ನ್ಯಾಯಯುತ ಶಿಕ್ಷೆಯಾಗಿದೆ. ಈ ಹಿಂದೆ ನಾನು ಅನುಸರಿಸಿದ ಹಿಂಸಾತ್ಮಕ (ಅಂದರೆ ಕ್ರಾಂತಿಕಾರಿಯ ಮಾರ್ಗ) ಕ್ರಮಗಳನ್ನು ಬಿಟ್ಟು ಬಿಡುತ್ತೇನೆ. ಬ್ರಿಟೀಷ್ ಕಾನೂನು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯಲು ನಾನು ಶಕ್ತಿ ಮೀರಿ ದುಡಿಯುತ್ತೇನೆ.....'. ಈ ಮುಚ್ಚಳಿಕೆಯ ಅಂಶಗಳನ್ನು ಒಂದೊಂದಾಗಿ ನಾನಿಲ್ಲಿ ಚರ್ಚಿಸುವುದಿಲ್ಲ. ಅವು ಸ್ವಯಂ ವೇದ್ಯವಾಗಿದೆ.

ಸಾವರ್ಕರ್ ಅವರ ಕ್ರಾಂತಿಕಾರಿ ಧೋರಣೆಗಳು ಗುಲಾಮೀ ಧೋರಣೆಯಾಗಿ ಬದಲಾದದ್ದು ಹೇಗೆ? ಏಕೆ? ಅಂಡಮಾನ್ ಜೈಲಿನ ಕ್ರೂರ ಶಿಕ್ಷೆಗಳು ಅವರನ್ನು ಈ ನಿಲುವು ತಳೆಯುವಂತೆ ಪ್ರೇರೇಪಿಸಿದವೆ? ಅಥವಾ ಅಷ್ಟು ಹೊತ್ತಿಗೆ ಹಿಂದುತ್ವದ ಹೊಸ ಆಲೋಚನೆ ಭಾರತದ ಮುಕ್ತಿಗೆ ಪರ್ಯಾಯ ಎಂದೆನಿಸ ತೊಡಗಿತ್ತೆ? ಈ ಪ್ರಶ್ನೆಗಳಿಗೆ ಸಾವರ್ಕರ್ ಎಲ್ಲೂ ಉತ್ತರ ಕೊಟ್ಟಿಲ್ಲ.



ಗಾಂಧೀಜಿ ಹತ್ಯೆಯಲ್ಲಿ ಆರೋಪಿಯಾಗಿರುವ ಸಾರ್ವಕರ್ ಮರೆಯಲ್ಲಿ. ಕೆಂಪು ಕೋಟೆಯ ಕಟಕಟೆಯಲ್ಲಿ ನಾಥೂರಾಂ ಗೋಡ್ಸೆ ಮತ್ತಿತರರು

ಸಾವರ್ಕರ್ ಅವರಂತೆ ಅಂಡಮಾನಿನ ಜೈಲಿನಲ್ಲಿ ಅಮಾನುಷ ಶಿಕ್ಷೆ ಅನುಭವಿಸು ತ್ತಿದ್ದ ನೂರಾರು ತರುಣರಿದ್ದರು. ಅವರಲ್ಲಿ ಸುಬ್ರಮಣ್ಯಮ್ ಶಿವಾ ಒಬ್ಬರು. ಈತನಿಗೆ ಜೈಲಿನಲ್ಲಿದ್ದಾಗಲೇ ಕುಷ್ಠರೋಗ ಅಂಟಿಕೊಂಡಿದ್ದಲ್ಲದೆ ಉಲ್ಬಣಾವಸ್ಥೆಗೆ ತಲುಪಿತ್ತು. ಬ್ರಿಟೀಷ್ ಸರ್ಕಾರ ಮುಚ್ಚಳಿಕೆ ನೀಡಲು ಅವಕಾಶ ಕಲ್ಪಿಸಿದಾಗ ಇತರ ಖೈದಿಗಳು ಕುಷ್ಠರೋಗದ ನೆಪ ಮುಂದೆ ಮಾಡಿ ಬಿಡುಗಡೆಗೆ ಕೋರಿ ಮುಚ್ಚಳಿಕೆ ಬರೆದುಕೊಡಲು ಸಲಹೆ ನೀಡಿದರು. ಆದರೆ ಸುಬ್ರಮಣ್ಯಮ್ ಈ ಸಲಹೆಯನ್ನು ಸಾರಾಸಗಟಾಗಿ ನಿರಾಕರಿಸಿದ್ದಲ್ಲದೆ ತಾನು ಜೈಲಿನಲ್ಲೆ ಸತ್ತರೂ ಪರವಾಗಿಲ್ಲ, ಬಿಡುಗಡೆಗಾಗಿ ಬ್ರಿಟೀಷರನ್ನು ಅಂಗಲಾಚುವುದಿಲ್ಲ ಎಂಬ ಕಠಿಣ ನಿಲುವು ತಳೆದರು. ಏಕಕಾಲಕ್ಕೆ ಕುಷ್ಠರೋಗ ಮತ್ತು ಬ್ರಿಟೀಷ್ ದಬ್ಬಾಳಿಕೆ ಎರಡನ್ನೂ ಎದುರಿಸಿದ ಸುಬ್ರಮಣ್ಯಮ್ ತಮ್ಮ ಚಳುವಳಿಯ ಕಾಳಜಿ ನೈಜವಾದುದು ಎಂದು ಸಾಬೀತು ಪಡಿಸಿದರು. ದುರಂತವೆಂದರೆ ಯಾವ ಇತಿಹಾಸದ ಪಠ್ಯಪುಸ್ತಕದಲ್ಲೂ ಈ ತ್ಯಾಗಜೀವಿಯ ಪ್ರಸ್ತಾಪವಿಲ್ಲ. ಈತನನ್ನು ಪ್ರಶಂಸಿಸುವ ಒಂದೇ ಒಂದು ಫಲಕ ಭಾರತದ ಯಾವ ಭಾಗದಲ್ಲೂ ಇಲ್ಲ. ಸುಬ್ರಮಣ್ಯಮ್ ರವರಂತಹ ಅಸಂಖ್ಯ ಶ್ರೀ ಸಾಮಾನ್ಯ ದೇಶಾಭಿಮಾನಿಗಳ ಮುಂದೆ ಸಾವರ್ಕರ್ ಅಂತಹವರು ಪೇಲವವಾಗಿ ಕಾಣುತ್ತಾರೆ.

'ವೀರ' ಸಾವರ್ಕರ್ ಬ್ರಿಟೀಷರಿಗೆ ತಲೆಬಾಗಿ ನಿಷ್ಕ್ರಿಯರಾಗದೆ ಹೋಗಿದ್ದರೆ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಅವರು ವಿವಾದಾತೀತ ಹೋರಾಟ ಗಾರರಾಗಿ ಉಳಿಯುತ್ತಿದ್ದರೇನೊ ಎಂಬ ನನ್ನ ವಾದ ಹೊಸ. ವಿವಾದಕ್ಕೆ ದಾರಿ ಮಾಡಿಕೊಡದಿದ್ದರೆ ಸಾಕು. ಏಕೆಂದರೆ ಇಂತಹ ನಿಷ್ಫಲ ವಿವಾದಗಳಲ್ಲಿ ಸುಬ್ರಮಣ್ಯಮ್ ಅಂತಹವರು ಮತ್ತೆ ಮತ್ತೆ ವಿಸ್ಮೃತಿಗೆ ಸರಿದು ಹೋಗಿಬಿಡುವ ಅಪಾಯವಿರುತ್ತದೆ.

(ಪ್ರಸಿದ್ಧ ಇತಿಹಾಸಕಾರ ಆರ್.ಸಿ.ಮಜುಮ್‌ದಾರ್ ಬರೆದಿರುವ 'ಹಿಸ್ಟರಿ ಆಫ್ ಪೀನಲ್ ಸೆಟ್ಲಮೆಂಟ್' ಕೃತಿಯಲ್ಲಿ ಸಾವರಕರ್ ಬ್ರಿಟೀಷರಿಗೆ ದಯಾಭಿಕ್ಷೆ ಬೇಡಿದ ಮುಚ್ಚಳಿಕೆಯ ಪೂರ್ಣಪಾಠವನ್ನು ನೀಡಲಾಗಿದೆ. ನವದೆಹಲಿಯ ರಾಷ್ಟ್ರೀಯ ಪತ್ರಾಗಾರದಲ್ಲೂ ಈ ಮುಚ್ಚಳಿಕೆಯ ಅರ್ಜಿ ಲಭ್ಯವಿದೆ).

○

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಅಕ್ಟೋಬರ್ 15,2004**
  ನಿರುದ್ಯೋಗ ಭತ್ಯೆ, ಖಾಲಿ ಇರುವ ಹುದ್ದೆಗಳ ಭರ್ತಿ, ಕೃಪಾಂಕ ನೌಕರರಿಗೆ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿ
  ಯುವಜನರ ವಿಧಾನಸೌಧ ಚಲೋ
- **ಅಕ್ಟೋಬರ್ 16 ಮತ್ತು 17,2004**
  ಪಲ್ಲವಿ ಸಾಂಸ್ಕೃತಿಕ ವೇದಿಕೆ ಟ್ರಸ್ಟ್ ವತಿಯಿಂದ ಮಕ್ಕಳ ಕವಿಗೋಷ್ಠಿ, ವಿಚಾರ ಸಂಕಿರಣ, ಸುಗಮಸಂಗೀತ, ಯಕ್ಷಗಾನ ಇತ್ಯಾದಿ
  ಕುವೆಂಪು ಕಲಾಕ್ಷೇತ್ರ, ಬೆಂಗಳೂರು.
- **ಅಕ್ಟೋಬರ್ 18,2004**
  ನಗರಸಭೆಗಳಿಂದ ವಂತಿಗೆ ಸಂಗ್ರಹ ವಿರೋಧಿಸಿ ಮುಖ್ಯಮಂತ್ರಿ ಮನೆ ಮುಂದೆ ಧರಣಿ ಬೆಳಿಗ್ಗೆ 11.00 ಗಂಟೆಗೆ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ
- **ನವೆಂಬರ್ 2,3 ಮತ್ತು 4,2004**
  ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ
- **ಅಕ್ಟೋಬರ್ 29, 2004**
  ರೇಷನ್ ಕಾರ್ಡ್ ಸಂಖ್ಯೆ ಕಡಿತದ ವಿರುದ್ಧ ಕಾರ್ಡ್ ಇಲ್ಲದವರಿಗೆ ನೀಡಲು ಒತ್ತಾಯಿಸಿ ತಾಲ್ಲೂಕು ಕಚೇರಿಗಳ ಮುತ್ತಿಗೆ. ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ಕರೆ
  ಮಂಗಳೂರಿನಲ್ಲಿ, ನವೆಂಬರ್ 4 ರಂದು ಬೃಹತ್ ರ‍್ಯಾಲಿ
  ಮುಖ್ಯ ಅತಿಥಿ : ಕಾಂ.ಮಹಮ್ಮದ್ ಅಮಿನ್, ಪಶ್ಚಿಮ ಬಂಗಾಳ ಸಾರಿಗೆ ಸಚಿವರು
- **ನವೆಂಬರ್ 3,2004**
  'ಭಾರತೀಯ ಕೋಮುವಾದ ಮತ್ತು ಸಾಮ್ರಾಜ್ಯವಾದದೊಂದಿಗಿನ ಸಂಬಂಧ ವಿಚಾರಸಂಕಿರಣ - ಮಂಗಳೂರು ಪುರಭವನ ಸಂಜೆ 5 ಗಂಟೆಗೆ
  ಭಾಗವಹಿಸುವವರು : ಪ್ರಕಾಶ್ ಕಾರಟ್, ಚಿತ್ತಬ್ರತ ಮಜುಂದಾರ್
  ಡಾ.ಪಿ.ಹೆಚ್.ಧರ್ಮ
- **ನವೆಂಬರ್ 3,2004**
  ಡಿವೈಎಫ್‌ಐ ಬೆಳ್ಳಿಹಬ್ಬದ ಅಂಗವಾಗಿ 2 ಕೋಟಿ ಸಹಿ ಸಂಗ್ರಹದೊಂದಿಗೆ ದೆಹಲಿ ಚಲೊ
  ಸರ್ವರಿಗೂ ಶಿಕ್ಷಣ- ಸರ್ವರಿಗೂ ಉದ್ಯೋಗ, ಸಮಗ್ರ ಭೂಸುಧಾರಣೆ ಇತ್ಯಾದಿಗಳಿಗೆ ಒತ್ತಾಯಿಸಿ

ಗಂಗಾವತಿ ತಾಲೂಕಿನಲ್ಲಿ


ಆಧುನಿಕ ದುಶ್ಯಾಸನರ ಅಟ್ಟಹಾಸ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಶ್ರೀಮಂತ ಭೂಮಾಲಕರು ಆಧುನಿಕ ದುಶ್ಯಾಸನರಾಗಿಬಿಟ್ಟಿದ್ದಾರೆ. ಇವರ ದೌರ್ಜನ್ಯಕ್ಕೆ ಬಲಿಯಾದ ದಲಿತ ಕೃಷಿ ಕೂಲಿಕಾರ ಮಹಿಳೆಯರು ನ್ಯಾಯಕ್ಕಾಗಿ ಹೋರಾಡುತ್ತಿದ್ದಾರೆ. ಅನ್ಯಾಯವನ್ನು ತಡೆಗಟ್ಟಬೇಕಾದ ಪೊಲೀಸರು ಅಪರಾಧಿಗಳ ಸಲಹೆಗಾರರಾಗಿ ವರ್ತಿಸುತ್ತಿದ್ದಾರೆ. ಗಂಗಾವತಿ ತಾಲ್ಲೂಕಿನಲ್ಲಿ ತೀವ್ರಗೊಳ್ಳುತ್ತಿರುವ ವರ್ಗ ಸಂಘರ್ಷದ ವಿವರಗಳಿಗಾಗಿ ಮುಂದೆ ಓದಿ.

ನಿತ್ಯಾನಂದಸ್ವಾಮಿ

ಸೆಪ್ಟೆಂಬರ್ ತಿಂಗಳ 24 ನೇ ದಿನ. ಶುಕ್ರವಾರ ಸಂಜೆ ಸುಮಾರು 7 ಗಂಟೆ ಗಂಗಾವತಿ ಕಡೆಯಿಂದ ಎರಡು ಆಟೋರಿಕ್ಷಾಗಳಲ್ಲಿ ಆಗಮಿಸಿದ ಏಳೆಂಟು ಜನ ದಾಂಡಿಗರು ಗೋನಾಳ ಕ್ಯಾಂಪಿನ ಗುಡಿಸಲೊಂದರ ಎದುರು ಬಂದು ನಿಲ್ಲುತ್ತಾರೆ. ಗುಡಿಸಲಿನ ಎದುರು ತನ್ನ ಕೂಸನ್ನು ಎತ್ತಿಕೊಂಡು ನಿಂತಿದ್ದ ದಲಿತ ಕೃಷಿ ಕೂಲಿಕಾರ ಮಹಿಳೆ ದುರುಗಮ್ಮ ಯಾಕೆ, ಏನು ಎಂದು ಕೇಳುವಷ್ಟರಲ್ಲಿ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಆ ದಾಂಡಿಗರು ಗುಡಿಸಲನ್ನು ಕೆಡವಿ ಹಾಕಲು ತೊಡಗುತ್ತಾರೆ. ಅದನ್ನು ತಡೆಯಲು ಬಂದ ದುರುಗಮ್ಮನನ್ನು ಎಳೆದಾಡಿ, ಅವಳ ಬಗಲಲ್ಲಿದ್ದ ಕೂಸನ್ನು ಎತ್ತಿ ಪಕ್ಕದಲ್ಲಿದ್ದ ತಿಪ್ಪೆಗೆ ಎಸೆಯುತ್ತಾರೆ. ದುರುಗಮ್ಮ ತೊಟ್ಟ ಸೀರೆಯನ್ನು ಎಳೆದು, ಮೈಮೇಲಿನ ಕುಬಸವನ್ನು ಹರಿದು ಹಲ್ಲೆ ಮಾಡುತ್ತಾರೆ. ಗಾಯಗೊಂಡ ದುರುಗಮ್ಮ ಕುಸಿದು ಬೀಳುತ್ತಾಳೆ. ಸುದ್ದಿ ತಿಳಿದು ದಾವಿಸಿ ಬಂದ ಆಕೆಯ ಗಂಡ ಹುಲುಗಪ್ಪನನ್ನು ಮನಬಂದಂತೆ ಥಳಿಸುತ್ತಾರೆ. ದುರುಗಮ್ಮನ ಮಾನರಕ್ಷಣೆ ಮಾಡಲು ಓಡಿಬಂದ ಬೀಬಿಜಾನ್ ಎಂಬ ಮುಸ್ಲಿಂ ಮಹಿಳೆಯ ಸೊಂಟಕ್ಕೆ ಒದ್ದು ನೆಲಕ್ಕೆ ಕೆಡವುತ್ತಾರೆ. ಇದನ್ನು ನೋಡಿದ ಸುತ್ತಲಿನ ಮಹಿಳೆಯರು ಸಹಾಯಕ್ಕಾಗಿ ಕೂಗಲಾರಂಭಿಸಿದಾಗ ಹಲ್ಲೆಕೋರರು ಪರಾರಿಯಾಗುತ್ತಾರೆ.

ಹಿನ್ನೆಲೆ : ಗಂಗಾವತಿ ತಾಲ್ಲೂಕು ಬಹುತೇಕವಾಗಿ ನೀರಾವರಿ ಪ್ರದೇಶವಾಗಿದೆ. ಇಲ್ಲಿ ಸಹಜವಾಗಿಯೇ ಕೃಷಿ ಕೂಲಿಕಾರರ ಸಂಖ್ಯೆ ಗಣನೀಯವಾಗಿದೆ. ಇವರೆಲ್ಲರೂ ಹೆಚ್ಚಾಗಿ ವಿವಿಧ




ಹಲವು ಬಾರಿ ದಾಳಿಗೀಡಾದ ಕೂಲಿಕಾರರ ಸಂಘದ ನಾಯಕ ಬಾಳಪ್ಪ

ದಲಿತ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಭೂಮಾಲಿಕರ ಹೊಲಗದ್ದೆಗಳಲ್ಲಿ ದೊರೆಯುವ ಕೆಲಸವನ್ನೇ ಅವಲಂಭಿಸಿ ಬದುಕುವ ಈ ಜನಗಳಿಗೆ ವಾಸಕ್ಕೆ ಸ್ವಂತ ಮನೆಗಳು ಇರುವುದಿಲ್ಲ. ಅಲ್ಲಲ್ಲಿ ಲಭ್ಯವಿದ್ದ ಸರ್ಕಾರಿ ಜಮೀನುಗಳಲ್ಲಿ ಗುಡಿಸಲು ಕಟ್ಟಿಕೊಂಡು ಇವರು ವಾಸ ಮಾಡುತ್ತಿರುತ್ತಾರೆ. ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಅತ್ಯಂತ ಅಸಹಾಯಕರಾಗಿರುವ ಈ ಜನಗಳ ಮೇಲೆ ಸ್ಥಳೀಯ ಭೂಮಾಲಿಕರ ದೌರ್ಜನ್ಯ ದಬ್ಬಾಳಿಕೆ ನಿರಂತರವಾಗಿ ನಡೆಯುತ್ತಾ ಬಂದಿದೆ.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಕಳೆದ ಹತ್ತಾರು ವರ್ಷಗಳಿಂದ ಗಂಗಾವತಿ ತಾಲ್ಲೂಕಿನ ಕೃಷಿ ಕೂಲಿಕಾರರನ್ನು ಸಂಘಟಿಸುತ್ತಾ ಸರ್ಕಾರದಿಂದ ಅವರಿಗೆ ಸಿಗಬೇಕಾದ ಸೌಲಭ್ಯಗಳಿಗಾಗಿ ಕಾನೂನುಬದ್ಧ ಹೋರಾಟಗಳನ್ನು ನಡೆಸುತ್ತಾ ಕೃಷಿ ಕೂಲಿಕಾರರ ವಿಶ್ವಾಸಕ್ಕೆ ಪಾತ್ರವಾಗಿದೆ. ಇವರ ಮುಖಂಡರಾಗಿ ಬೆಳೆದು ಬಂದಿರುವ ಕೆ.ಬಾಳಪ್ಪ ಸ್ವತಃ ದಲಿತರಾಗಿದ್ದು ಚಿಕ್ಕ ವಯಸ್ಸಿನಿಂದ ಜೀತದಾಳಾಗಿ ದುಡಿದವರು. ಕೃಷಿ ಕೂಲಿಕಾರರಲ್ಲಿ ಮೂಡಿಬರುತ್ತಿರುವ ಜಾಗೃತಿಯಿಂದಾಗಿ ಭೂಮಾಲಿಕ ವರ್ಗದಲ್ಲಿ ತೀವ್ರ ಅಸಹನೆಯುಂಟಾಗಿದೆ. ಇದುವರೆಗೆ ಅವರು ನಡೆಸಿಕೊಂಡು ಬಂದ ಮೋಸ, ವಂಚನೆ ಬಯಲಿಗೆ ಬರುವ ಭೀತಿ ಅವರ ನಿದ್ದೆಗೆಡಿಸಿದೆ.

ಸರ್ಕಾರಿ ಅಧಿಕಾರಿಗಳನ್ನು ಮತ್ತು ಪೊಲೀಸ್ ಇಲಾಖೆಯವರನ್ನು ಖರೀದಿ ಮಾಡಿಕೊಂಡು ಆಧುನಿಕ ದುಶ್ಯಾಸನರಾಗಿ ವರ್ತಿಸತೊಡಗಿದ್ದಾರೆ.



ಥಳಿ ಎಸಗಿದವರ ವಿರುದ್ಧ ಕ್ರಮವಹಿಸದ, ನ್ಯಾಯ ನೀಡದ ಆಡಳಿತದ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟನೆ

ಗೋನಾಳ ಕ್ಯಾಂಪಿಗೂ ಕೂಲಿಕಾರರ ಸಂಘವು ಪ್ರವೇಶವಾಗಿರುವುದನ್ನು ಕಂಡು ಭೂಮಾಲಿಕರು ಬೆಚ್ಚಿಬಿದ್ದರು. 30 ವರ್ಷಗಳಿಂದ ತಾವು ಅಕ್ರಮವಾಗಿ ಉಪಭೋಗಿಸುತ್ತಾ ಬಂದಿರುವ ಆ ಭೂಮಿ ಈಗ ತಮ್ಮ ಕೈತಪ್ಪಿ ಹೋಗುವುದನ್ನು ತಡೆಯಲು ಕುತಂತ್ರವನ್ನು ರೂಪಿಸತೊಡಗಿದರು. ಮಲ್ಲನಗೌಡ ವೀರಭದ್ರಗೌಡ ಗೋನಾಳ ಮತ್ತು ಅಮರೇಶಪ್ಪ ಶಿವಪ್ಪ ಗೋನಾಳ ಈ ಕುತಂತ್ರದ ಮುಖ್ಯ ರೂವಾರಿಗಳು.

ಕೂಲಿಕಾರರನ್ನು ಬೆದರಿಸಲಾರಂಭಿಸಿದರು. 'ಭೂಮಾಲಿಕ ಗೌಡರ ಹತ್ತಿರ ಯಾವ ದಾಖಲೆಗಳಿವೆ' ಎಂದು ಕೂಲಿಕಾರರು ಮರು ಪ್ರಶ್ನೆ ಹಾಕಿದಾಗ ಮುಖಭಂಗಕ್ಕೆ ಒಳಗಾದ ಪಿ.ಎಸ್.ಐ. ಗಣೇಶನ ಹಬ್ಬ ಮುಗಿದ ಮೇಲೆ ಸಮಸ್ಯೆಯನ್ನು ಇತ್ಯರ್ಥ ಪಡಿಸುವುದಾಗಿ ಹೇಳಿಹೋದರು.

ಆದರೆ ಸೆಪ್ಟೆಂಬರ್ 24 ರಂದು ಶುಕ್ರವಾರ ಸಂಜೆ ಇದೇ ಭೂಮಾಲಿಕರು ಪಟ್ಟಣದಿಂದ

ಗೋನಾಳ ಪ್ರಕರಣ : ಗೋನಾಳ ಗ್ರಾಮದ 3,4,36,37 ಮೊದಲಾದ ವಿವಿಧ ಸರ್ವೆ ನಂಬರುಗಳ ಅಡಿಯಲ್ಲಿ ಇರುವ ಸುಮಾರು 30 ಎಕರೆ ಜಮೀನು ಸರ್ಕಾರಿ ಭೂಮಿ ಆಗಿತ್ತು. ಸುಮಾರು 30 ವರ್ಷಗಳ ಹಿಂದೆ ಈ ಭೂಮಿಯನ್ನು ಗೋನಾಳದ ಕೆಲವು ಭೂಹೀನ ದಲಿತರಿಗೆ ವಿತರಣೆ ಮಾಡಿತ್ತು. ಆದರೆ ನೀರಾವರಿಗೆ ಒಳಪಟ್ಟ ಭೂಮಿಯ ಸುತ್ತಲೂ ಭೂಮಿಯನ್ನು ಹೊಂದಿದ್ದ ಗೋನಾಳದ ಭೂಮಾಲೀಕರು ಆ ಸರ್ಕಾರಿ ಭೂಮಿಯನ್ನು ಕಬಳಿಸಲು ಸಂಚು ಹೂಡಿದರು. ದಲಿತರಿಗೆ ಮಂಜೂರಾದ ಆ ಭೂಮಿಯಲ್ಲಿ ಅವರು ಕಾಲು ಸಹ ಇಡದಂತೆ ತಡೆದರು. ದಾಖಲೆಗಳಲ್ಲಿ ದಲಿತ ಫಲಾನುಭವಿಗಳ ಹೆಸರುಗಳಿದ್ದರೂ ಭೂಮಿ ಮಾತ್ರ ಭೂಮಾಲಿಕರ ಕಬ್ಜಾ ವಹಿವಾಟಿಗೆ ಒಳಗಾಯಿತು. ಸದರಿ ಸರ್ಕಾರಿ ಭೂಮಿಯ ಕೆಲಭಾಗವನ್ನು ಸಾಗುವಳಿ ಮಾಡುತ್ತಾ ಬಂದ ಭೂಮಾಲಿಕರು ಇನ್ನು ಕೆಲವು ಭಾಗಗಳಲ್ಲಿ ಕಟ್ಟಡಗಳನ್ನು ಕಟ್ಟಿಕೊಂಡರು. ಇವರ ಗದ್ದೆಗಳಲ್ಲಿ ಕೂಲಿ ಕೆಲಸಕ್ಕೆ ಬರುತ್ತಿದ್ದ ಕೂಲಿಕಾರರಿಂದ ಸಾವಿರಾರು ರೂಪಾಯಿಗಳನ್ನು ಪಡೆದು ಅದೇ ಭೂಮಿಯಲ್ಲಿ ಗುಡಿಸಲು ಹಾಕಿಕೊಂಡು ವಾಸ ಮಾಡಲು ಅನುಮತಿ ನೀಡಿದರು. ಹೀಗೆ ಸುಮಾರು 30 ವರ್ಷಗಳಿಂದ ಗೋನಾಳ ಕ್ಯಾಂಪ್ ಎಂಬ ಜನವಸತಿಯೊಂದು ತಲೆ ಎತ್ತುವಂತಾಯಿತು. ಭೂಮಾಲಿಕರ ಈ ದುರಾಸೆಯನ್ನು ಕಣ್ಣಾರೆ ಕಂಡಿದ್ದರೂ ಅಸಹಾಯಕರಾದ ಕೂಲಿಕಾರ ಕುಟುಂಬಗಳು ಇದೆಲ್ಲವನ್ನು ಸಹಿಸಿಕೊಂಡು ದಿನ ಕಳೆಯುತ್ತಿದ್ದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ತಾಲೂಕಿನಲ್ಲಿ ಭೂಹೀನ ಬಡವರಿಗೆ ಸರ್ಕಾರದಿಂದ ಭೂಮಿ, ಮನೆನಿವೇಶನಗಳನ್ನು ಮಂಜೂರು ಮಾಡಿಕೊಡಲು ನಡೆಸುತ್ತಿದ್ದ ಹೋರಾಟದ ವರದಿಗಳಿಂದ ಪ್ರಭಾವಿತರಾದ ಗೋನಾಳ ಕ್ಯಾಂಪಿನ ಕೂಲಿಕಾರರು ಸಂಘದ ಮುಖಂಡರನ್ನು ಕರೆಯಿಸಿಕೊಂಡು ತಮ್ಮ ಸಮಸ್ಯೆಯನ್ನು ಅವರ ಮುಂದಿಟ್ಟರು. ಕಳೆದ 30 ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ಕಟ್ಟಿಕೊಂಡಿರುವ ಗುಡಿಸಲು ನಿವೇಶನಗಳನ್ನು ಸಕ್ರಮಗೊಳಿಸಿ ಹಕ್ಕುಪತ್ರ ನೀಡುವಂತೆ ಸರ್ಕಾರವನ್ನು ಒತ್ತಾಯಿಸಲು ಸಂಘಟಿತರಾಗಿ ಹೋರಾಡಲು ನಿರ್ಧರಿಸಿದರು.

30 ವರ್ಷಗಳ ಹಿಂದೆ ಭೂ ಮಂಜೂರಾತಿ ಪಡೆದಿದ್ದ ದಲಿತರನ್ನು ಬಳಸಿಕೊಳ್ಳಲಾಯಿತು. ರಾತ್ರೋರಾತ್ರಿ ಎಂಬಂತೆ ಅವರಿಂದ ಸದರಿ ಭೂಮಿಯನ್ನು ಖರೀದಿ ಮಾಡಿಕೊಂಡ ದಾಖಲೆಗಳನ್ನು ಸೃಷ್ಟಿಸಲಾಯಿತು. ತಮಗೆ ಮಂಜೂರಾಗಿದ್ದ ಭೂಮಿಯ ಮೇಲಿನ ಆಸೆಯನ್ನು ಎಂದೋ ಕೈಬಿಟ್ಟಿದ್ದ ದಲಿತರನ್ನು ಮುಂದಿಟ್ಟುಕೊಂಡು ಅಲ್ಲಿ 30 ವರ್ಷಗಳಿಂದ



ಭೂಮಾಲೀಕರಿಂದ ದೌರ್ಜನ್ಯಕ್ಕೀಡಾದ ದಲಿತ ಮಹಿಳೆಯರು

ನೆಲೆಸಿರುವ ದಲಿತ ಕೂಲಿಕಾರರ ಹಕ್ಕುಗಳನ್ನು ಕಿತ್ತುಕೊಳ್ಳುವ ಭೂಮಾಲಿಕರ ಕುತಂತ್ರ ಗಮನಕ್ಕೆ ಬಂದ ತಕ್ಷಣ ಗೋನಾಳ ಕ್ಯಾಂಪಿನ ಕೂಲಿಕಾರರು ಕಾರ್ಯಪ್ರವೃತ್ತರಾದರು. ಖಾಲಿ ಇದ್ದ ಜಾಗೆಯಲ್ಲಿ ತಮ್ಮೊಳಗೆ ಗುಡಿಸಲು ಇಲ್ಲದ ಕುಟುಂಬಗಳಿಗಾಗಿ ಗುಡಿಸಲುಗಳನ್ನು ನಿರ್ಮಿಸಲಾರಂಭಿಸಿದರು. ಭೂಮಾಲಿಕರ ಕಡೆಯಿಂದ ಬೆದರಿಕೆಗಳು ಬಂದರೂ ಕೂಲಿಕಾರರು ಗುಡಿಸಲು ನಿರ್ಮಾಣ ಕಾರ್ಯವನ್ನು ನಿಲ್ಲಿಸಲಿಲ್ಲ. ಆಗ ಭೂಮಾಲಿಕ ಮಲ್ಲನಗೌಡ ಗಂಗಾವತಿಯಲ್ಲಿರುವ ಕೂಲಿಕಾರರ ಸಂಘದ ಆಫೀಸಿಗೆ ಬಂದು ವಿವಾದವನ್ನು ಮಾತುಕತೆಯ ಮೂಲಕ ಇತ್ಯರ್ಥಪಡಿಸುವ ಭರವಸೆ ನೀಡಿದರು.

ಸಂಘದ ತೀರ್ಮಾನದ ಮೇರೆಗೆ ಗುಡಿಸಲು ಕಟ್ಟುವುದನ್ನು ನಿಲ್ಲಿಸಲಾಯಿತು. ಆದರೆ ಒಂದೆರೆಡು ತಾಸುಗಳಲ್ಲಿ ಇಬ್ಬರು ಪೊಲೀಸರು ಸ್ಥಳಕ್ಕೆ ಆಗಮಿಸಿ ಭೂಮಾಲಿಕ ಗೌಡರು ಕೂಲಿಕಾರರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲು ಮಾಡಿದ್ದಾರೆ ಎಂದು ತಿಳಿಸಿದರು. ಸ್ವಲ್ಪ ಸಮಯದ ನಂತರ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ. ಗುರುಬಸವರಾಜಪ್ಪ ಸ್ಥಳಕ್ಕೆ ಬಂದು 'ನಿಮ್ಮ ಹತ್ತಿರ ಏನು ದಾಖಲೆ ಇದೆ?' ಎಂದು

ದಲಿತರ ಗುಂಪೊಂದನ್ನು ಬಾಡಿಗೆಗೆ ನೇಮಿಸಿ ಗೋನಾಳ ಗ್ರಾಮಕ್ಕೆ ನುಗ್ಗಿಸಿ ಕೂಲಿಕಾರರ ಗುಡಿಸಲುಗಳನ್ನು ಧ್ವಂಸ ಮಾಡಿಸಿದರಲ್ಲದೆ ಅದನ್ನು ವಿರೋಧಿಸಿದ ದುರುಗಮ್ಮ ಎಂಬ ಮಹಿಳೆಯನ್ನು ಮನಬಂದಂತೆ ಥಳಿಸಿದರು. ಅವಳ ರಕ್ಷಣೆಗೆ ಬಂದ ಆಕೆಯ ಗಂಡ ಹುಲುಗಪ್ಪ ಮತ್ತು ದುರುಗಪ್ಪ ಎಂಬ ಕೂಲಿಕಾರರು ಹಾಗೂ ಬಿಬಿಜಾನ್ ಎಂಬ ಮಹಿಳೆಯ ಮೇಲೆ ಹಲ್ಲೆ ನಡೆಸಿ ಆಟೋರಿಕ್ಷಾ ಹತ್ತಿ ಓಡಿಹೋದರು. ಹಲ್ಲೆಗೊಳಗಾದ ಮಹಿಳೆ ಗ್ರಾಮದ ನೂರಾರು ಕೂಲಿಕಾರರೊಂದಿಗೆ ಪೊಲೀಸ್ ಸ್ಟೇಷನ್ ಎದುರು ರಾತ್ರಿ 11.00 ಗಂಟೆವರೆಗೆ ಕಾದುಕುಳಿತ ನಂತರವಷ್ಟೇ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡರು. ಆದರೆ ಆರೋಪಿಗಳನ್ನು ಇದುವರೆವಿಗೂ ಬಂಧಿಸಿಲ್ಲ. ದಲಿತರ ವಿರುದ್ಧ ಹಲ್ಲೆ ಮಾಡಲು ದಲಿತರನ್ನೇ ಬಳಸುವ ಮೂಲಕ ಕಾನೂನಿನ ಕಣ್ಣಿನಿಂದ ತಪ್ಪಿಸಿಕೊಳ್ಳಲು ಭೂಮಾಲೀಕರು ಹೊಸ ಉಪಾಯವನ್ನು ಹುಡುಕಿಕೊಂಡಿದ್ದಾರೆ.

ಪೊಲೀಸರ ಕುಮ್ಮಕ್ಕು : ಗೋನಾಳದ ಈ ಪ್ರಕರಣದಲ್ಲಿ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ. ಗುರುಬಸವರಾಜಪ್ಪ ಸ್ಥಳೀಯ ಭೂಮಾಲಿಕರ ಸಲಹೆಗಾರ ಹಾಗೂ ಮಾರ್ಗದರ್ಶಕರಾಗಿ ಕೆಲಸ ಮಾಡಿದ್ದಾರೆ. ಸದರಿ ಗುರುಬಸವರಾಜಪ್ಪನವರು ಭೂಮಾಲಿಕರಿಗೆ ಆ ಜಾಗೆಯ ಬಗ್ಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಲು ಸಲಹೆ ನೀಡಿ, ಆ ದಾಖಲೆಗಳು ಸೃಷ್ಟಿಯಾದ ನಂತರ ಅಲ್ಲಿನ ಕೂಲಿಕಾರರ ಗುಡಿಸಲುಗಳನ್ನು ಕಿತ್ತುಹಾಕಲು ಸಲಹೆ ನೀಡಿದ್ದಾರೆ. ಆ ದಿನ ಸ್ವತಃ ತನ್ನ ಜೀಪಿನಲ್ಲಿ ಆರೋಪಿಗಳನ್ನು ಕರೆದೊಯ್ದು ದೌರ್ಜನ್ಯ ನಡೆದ ಸ್ಥಳದ ಹತ್ತಿರದಲ್ಲಿ ಬಿಟ್ಟುಹೋಗಿದ್ದಾನೆ.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ರಾಮಪ್ಪನವರು ಸ್ಥಳಕ್ಕೆ ಭೇಟಿ ಕೊಟ್ಟಾಗಲೂ ಪಿ.ಎಸ್.ಐ. ಗುರುಬಸವರಾಜಪ್ಪ ಮತ್ತು ಸಿ.ಪಿ.ಐ. ಪ್ರಭಾಕರಪ್ಪ ಹಲ್ಲೆಗೊಳಗಾದವರನ್ನು ಬೆದರಿಸಿ ಅವರ್‍ಯಾರೂ ತಮ್ಮ ಹೇಳಿಕೆಗಳನ್ನು ನೀಡದಂತೆ ತಡೆದಿದ್ದಾರೆ. ಕೇವಲ ಭೂಮಾಲಿಕರ ಪರವಾಗಿ ಮಾತನಾಡಲು ಬಂದವರಿಂದ ಹೇಳಿಕೆ

ಪುಟ 5 ಕ್ಕೆ

ಅರಿವಿನ ಆಳ ಹೆಚ್ಚಿಸಿದ ತರಬೇತಿ ಶಿಬಿರ

ಸಿಐಟಿಯು ರಾಜ್ಯಮಟ್ಟದ ತರಬೇತಿ ಶಿಬಿರವು ಸೆಪ್ಟೆಂಬರ್ 24 ರಿಂದ 27ರವರೆಗೆ ತುಮಕೂರಿನ ದೇವರಾಯನದುರ್ಗದಲ್ಲಿ ನಡೆಯಿತು. ರಾಜ್ಯದ ಎಲ್ಲಾ ಜಿಲ್ಲೆಗಳಿಂದ 89 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಡಾ.ಎಂ.ಕೆ.ಪಂಧೆಯವರು ಜಾಗತಿಕ ಬಂಡವಾಳಶಾಹಿ ಪ್ರಸಕ್ತ ಹಂತ ಇದರ ಬಗ್ಗೆ ಉಪನ್ಯಾಸ ನೀಡಿದರು.

ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ಬಿ.ಮಾಧವರವರು ಕೋಮುವಾದ ಜಾತಿವಾದದ ಉಪನ್ಯಾಸ ನೀಡಿದರು.

ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರಾದ ಹಾಗೂ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ವಿ.ಜೆ.ಕೆ. ನಾಯರ್‌ರವರು ಕಾರ್ಮಿಕ ಕಾನೂನುಗಳ ಉಗಮ-ಉಪಯೋಗದ ಬಗ್ಗೆ ಉಪನ್ಯಾಸ ನೀಡಿದರು.

ಸಿಐಟಿಯು ಆಂಧ್ರಪ್ರದೇಶದ ಪ್ರಧಾನ ಕಾರ್ಯದರ್ಶಿ ಕಾಂ.ವೀರಯ್ಯನವರು ಕಾರ್ಮಿಕ ಸಂಘಟನೆಗಳಲ್ಲಿ ಕ್ರಾಂತಿಕಾರಿ ಹಾಗೂ ಸುಧಾರಣವಾದಿ ಕಾರ್ಯವಿಧಾನದ ಬಗ್ಗೆ ಉಪನ್ಯಾಸ ನೀಡಿದರು.


ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ಉಪಾಧ್ಯಕ್ಷರಾದ ಕಾಂ.ಜಿ.ಎನ್.ನಾಗರಾಜ್‌ರವರು ಕೃಷಿ ರಂಗದ ಬಿಕ್ಕಟ್ಟು ಇದರ ಬಗ್ಗೆ ಉಪನ್ಯಾಸ ನೀಡಿದರು.

ಸಿಐಟಿಯು ರಾಜ್ಯ ಖಜಾಂಚಿ ಕಾಂ.ಮೀನಾಕ್ಷಿ ಸುಂದರಂರವರು ಕಾರ್ಮಿಕ ಚಳುವಳಿಯ ಇತಿಹಾಸ ಇದರ ಬಗ್ಗೆ ಉಪನ್ಯಾಸ ನೀಡಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ಅಂಗನವಾಡಿ ನೌಕರರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕಾಂ.ಎಸ್.ವರಲಕ್ಷ್ಮಿಯವರು ದುಡಿಯುವ ಮಹಿಳೆಯರ ನಡುವೆ ಸಂಘಟನೆ ಬಗ್ಗೆ ಉಪನ್ಯಾಸ ನೀಡಿದರು.

ಐಕ್ಯರಂಗ ಪತ್ರಿಕೆಯ ಸಂಪಾದಕರಾದ ಕಾಂ.ಎಸ್.ವೈ.ಗುರುಶಾಂತ್‌ರವರು ರಾಜಕೀಯ ಪರಿಸ್ಥಿತಿಯ ಬಗ್ಗೆ ಉಪನ್ಯಾಸ ನೀಡಿದರು.

ತುಮಕೂರಿನ ಜಿಲ್ಲಾ ಸಮಿತಿಯು ಅತ್ಯಂತ ಯಶಸ್ವಿಯಾಗಿ ತರಬೇತಿ ಶಿಬಿರವನ್ನು ನಡೆಸಿಕೊಟ್ಟಿದೆ. ಉತ್ತಮ ವಸತಿ, ಆಹಾರ, ಸಾರಿಗೆ ವ್ಯವಸ್ಥೆಯನ್ನು ಮಾಡಿದೆ. ಸಂಗಾತಿಗಳು ಹಗಲು ರಾತ್ರಿ ಶ್ರದ್ಧೆಯಿಂದ ಶಿಬಿರಾರ್ಥಿಗಳಿಗೆ ಉತ್ತಮ ಅನುಕೂಲವನ್ನು ಮಾಡಿಕೊಟ್ಟರು.



ಡಾ. ಪಂಧೆಯವರಿಂದ ಉದ್ಘಾಟನೆ. ವೇದಿಕೆಯಲ್ಲಿ ವಿಜೆಕೆ

ವಿಶ್ವಬ್ಯಾಂಕ್ ನೀತಿಗಳಿಂದ ಸಣ್ಣ ಕೈಗಾರಿಕೆಗಳ ಅವನತಿ

ವಿಶ್ವಬ್ಯಾಂಕ್, ಐಎಂಎಫ್ ನೀತಿಗಳಿಂದ ಸಣ್ಣ ಕೈಗಾರಿಕೆಗಳು ಮತ್ತು ದೇಶೀಯ ಕೈಗಾರಿಕೆಗಳು ಲಾಭದಾಯಕ ಉದ್ದಿಮೆಗಳು ಮುಚ್ಚುತ್ತಿವೆ ಎಂದು ಸಿಐಟಿಯು ರಾಷ್ಟ್ರೀಯ ಅಧ್ಯಕ್ಷ ಡಾ.ಎಂ.ಕೆ.ಪಂಧೆ ಟೀಕಾ ಪ್ರಹಾರವ ಮಾಡಿದರು.

ಅವರು ತುಮಕೂರು ನಗರದ ಉಡ್‌ಲ್ಯಾಂಡ್ಸ್ ಹೋಟೆಲ್ ಸಭಾಂಗಣದಲ್ಲಿ ಸಿಐಟಿಯು ರಾಜ್ಯಮಟ್ಟದ ನಾಲ್ಕು ದಿನಗಳ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ ಈ ವಿಶ್ವಬ್ಯಾಂಕ್ ನೀತಿಗಳನ್ನು ಕಳೆದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಹಾಗೂ ಇಂದಿನ ಯುಪಿಎ ಸರಕಾರ ಜಾರಿಗೊಳಿಸುತ್ತಿರುವುದನ್ನು ಆರೋಪಿಸಿದರು.

ಲಾಭಕೋರತನದಿಂದ ಇಂದು ಕಾರ್ಮಿಕ ಹಾಗೂ ಜನವಿರೋಧಿ ನೀತಿಯನ್ನು ಅನುಸರಿಸುತ್ತಿದ್ದು ಅಂತಹ ನೀತಿಗಳ ವಿರುದ್ಧ ವಿಶಾಲ ತಳಹದಿಯಲ್ಲಿ ಹೋರಾಟ ರೂಪಿಸಬೇಕೆಂದು ಕರೆ ನೀಡಿದರು. ಮತ್ತು ಕಾರ್ಮಿಕರು ಆರ್ಥಿಕ ಬೇಡಿಕೆಗಳಲ್ಲದೆ ಸರಕಾರದ ವಿರುದ್ಧ ಹೋರಾಟ ಮಾಡಬೇಕೆಂದು ಕರೆ ನೀಡಿದರು.

ಸೈದ್ಧಾಂತಿಕ ನೆಲೆಯಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಮಹಿಳೆಯರು ಒಂದೇ ವೇದಿಕೆಯಡಿಯಲ್ಲಿ ಆರ್ಥಿಕ ನೀತಿಗಳ ವಿರುದ್ಧ ಹೋರಾಡಲು ಅಗತ್ಯವಿದೆ ಹಾಗೂ ವಿಶ್ವಬ್ಯಾಂಕ್ ನೀತಿಗಳನ್ನು ಅನುಸರಿಸುತ್ತಿದ್ದ ಪಕ್ಷಗಳು ಇಂದು ನೆಲಕಚ್ಚಿವೆ ಎಂದು ಹೇಳಿದರು.

ಹಳದಿ ಪಡಿತರ ಚೀಟಿ ಕಡಿತ ಮಾಡಿರುವುದನ್ನು ವಿರೋಧಿಸಿ ಪ್ರಬಲ ಪ್ರತಿಭಟನೆ

ರಾಜ್ಯದ ಹಿಂದಿನ ಎಸ್.ಎಂ.ಕೃಷ್ಣ ಸರ್ಕಾರ ಅನುಸರಿಸಿದ ಜನವಿರೋಧಿ ನೀತಿಗೆ ರಾಜ್ಯದ ಜನತೆ ಸರಿಯಾದ ಪಾಠ ಕಲಿಸಿದರು. ಆದರೆ ಇವರ ನೀತಿಗಳನ್ನು ವಿರೋಧಿಸುತ್ತಿದ್ದ ಜಾತ್ಯಾತೀತ ಜನತಾದಳ ಸರ್ಕಾರ ಜನಪರ ಆಡಳಿತ ನಡೆಸಲು ನಮಗೆ ಅವಕಾಶ ಕೊಡಿ ಬಡವರಿಗೆ 3 ರೂ.ದರದಲ್ಲಿ ಅಕ್ಕಿ ನೀಡುತ್ತೇವೆ ಕಡುಬಡವರಿಗೆ ಹಳದಿ ಪಡಿತರ ಚೀಟಿ ಕೊಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರ ರಾಜ್ಯದಲ್ಲಿ ಸುಮಾರು 20 ಲಕ್ಷದಷ್ಟು (77 ಲಕ್ಷ ಹಿಂದೆ ಇದ್ದವರಲ್ಲಿ) ಮಂಡ್ಯ ಜಿಲ್ಲೆಯಲ್ಲಿ 1 ಲಕ್ಷಕ್ಕೂ ಹೆಚ್ಚು ಹಾಗೂ ಮಳವಳ್ಳಿ ತಾಲೂಕಿನಲ್ಲಿ ಹಿಂದೆ ಇದ್ದ 31640 ರಲ್ಲಿ 19235 ಕಾರ್ಡುಗಳನ್ನು ಕಡಿತ ಮಾಡಲು ಆದೇಶಿಸಿದೆ. ಅಲ್ಲದೆ 28 ಕೆಜಿ ಅಕ್ಕಿ ನೀಡುವ ಬದಲಾಗಿ 20 ಕೆ.ಜಿ ನೀಡುವುದು ಹಾಗೂ ಹಳೆ ಸ್ಕೂಟರ್, ಹಳೆ ಕಲರ್ ಟಿ.ವಿ, ಹೊಂದಿರುವವರು, ಕಮಿಶನ್ ಏಜೆಂಟರು, ಸಣ್ಣ ವ್ಯಾಪಾರಸ್ಥರು, ಎ.ಪಿ.ಎಂ.ಸಿ ಕೂಲಿಕಾರರು ಬಿ.ಪಿ.ಎಲ್ ಪಟ್ಟಿಗೆ ಸೇರುವುದಿಲ್ಲ ಎಂಬ ಅವೈಜ್ಞಾನಿಕ ನೀತಿಯನ್ನು ಅನುಸರಿಸುತ್ತಿದೆ. ಮತ್ತೊಂದೆಡೆ ಇದೆ ಸರ್ಕಾರ 1 ಎಕರೆಗೆ ಎರಡು ಬೆಳೆ ಬೆಳೆಯುವ ತರಿ ಜಮೀನು, 2 ಎಕರೆ ಅರೆ ನೀರಾವರಿ, 5 ಎಕರೆ ಖುಷ್ಕಿ ಜಮೀನು ಹೊಂದಿದವರು ಬಡತನ ರೇಖೆಗೆ ಒಳಪಡುತ್ತಾರೆ ಎಂದು ಹೇಳುತ್ತದೆ. ಅದರಂತೆ ನಡೆದರೆ ಇನ್ನು ಲಕ್ಷಾಂತರ ಬಡವರಿಗೆ ಕಾರ್ಡು ಕೊಡಬೇಕಾಗುತ್ತದೆ. ಆದರೆ ರಾಜ್ಯದ ಸಮ್ಮಿಶ್ರ ಸರ್ಕಾರ ರಚನೆಯಾಗಿ 4 ತಿಂಗಳಾದರೂ 3 ರೂ.ಗೆ ಅಕ್ಕಿ ಕೊಡದಿರುವುದು, ಹಳದಿ ಪಡಿತರ ಚೀಟಿಯನ್ನು ಕಡಿತ ಮಾಡಿ ಬಡವರಿಗೆ ಬರೆ ಹಾಕುತ್ತಿರುವುದು ಹಾಗೂ ಸರ್ಕಾರದ ಅವೈಜ್ಞಾನಿಕ ನೀತಿಯನ್ನು ವಿರೋಧಿಸಿ ಮಳವಳ್ಳಿ ತಾಲೂಕು ಜನವಾದಿ ಮಹಿಳಾ ಸಂಘಟನೆ ಮತ್ತು ಡಿವೈಎಫ್ಐ ಸಂಘಟನೆಗಳು ದಿನಾಂಕ 28.09.2004 ರಂದು 800 ಜನಕ್ಕೂ ಹೆಚ್ಚು ಮಂದಿ ಮಳವಳ್ಳಿಯ ಪುರಸಭೆಯಿಂದ ಮೆರವಣಿಗೆ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಹಶೀಲ್ದಾರ ಕಛೇರಿ ಮುಂದೆ ಧರಣಿ ನಡೆಸಿದರು. ಈ ಧರಣಿಕಾರರನ್ನು ಉದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ವಿಮಲಾ, ಡಿವೈಎಫ್ಐ ತಾಲೂಕು ಅಧ್ಯಕ್ಷ ಎಂ.ಲಿಂಗರಾಜ್, ಜೆ.ಎಂ.ಎಸ್ ತಾಲ್ಲೂಕು ಅಧ್ಯಕ್ಷೆ ದೇವಿ ಮುಂತಾದವರು ಮಾತನಾಡಿದರು. ಈ ಪ್ರತಿಭಟನೆಯಲ್ಲಿ ಡಿವೈಎಫ್ಐ ರಾಜ್ಯ ಸಹಕಾರ್ಯದರ್ಶಿ ಎನ್.ಎಲ್. ಭರತರಾಜ್, ತಾಲೂಕು ಕಾರ್ಯದರ್ಶಿ ಆರ್.ಕೃಷ್ಣ, ಸುಜಾತ, ರಶ್ಮಿ ಹಾಗೂ ಜನವಾದಿ ಮಹಿಳಾ ಸಂಘಟನೆಯ ತಾಲ್ಲೂಕು ಕಾರ್ಯದರ್ಶಿ ಪದ್ಮ ಗೌರಮ್ಮ ರತ್ನಮ್ಮ ಮಹಾದೇವಮ್ಮ ಎಸ್‌ಎಫ್‌ಐನ ಟಿ.ಎಲ್. ಕೃಷ್ಣೇಗೌಡ ರವರು ಭಾಗವಹಿಸಿದ್ದ ಪ್ರಮುಖರು.

ಕುಂದಾಪುರದಲ್ಲಿ: ಸೆಪ್ಟೆಂಬರ್ 15 ರಂದು ಸಿಪಿಐ(ಎಂ) ಪಕ್ಷದ ಕುಂದಾಪುರ ತಾಲೂಕು ಸಮಿತಿಯ ನೇತೃತ್ವದಲ್ಲಿ ತಲ್ಲೂರು, ಹಟ್ಟಿಯಂಗಡಿ ಮತ್ತು ಕೋಣಿ ಪಂಚಾಯತ್ ಕಛೇರಿಗಳ ಮುಂದೆ ಪ್ರತಿಭಟನಾ ಮತ ಪ್ರದರ್ಶನ ನಡೆಯಿತು. ಎಲ್ಲಾ ಬಡವರಿಗೂ ಹಳದಿ ಕಾರ್ಡು ಕೊಡಬೇಕು. ಅಕ್ಕಿ, ಗೋಧಿ ಕೆ.ಜಿ. ಒಂದಕ್ಕೆ ರೂ.3.00 ದರದಂತೆ ಹಾಗೂ ಇತರ ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಗೆ ಒದಗಿಸಬೇಕೆಂದು; ಆಸ್ತಿ ತೆರಿಗೆ ರದ್ದು ಮಾಡಿ, ಈ ಹಿಂದಿನಂತೆ ಮನೆ ತೆರಿಗೆ ಸಂಗ್ರಹ ಮಾಡಬೇಕೆಂದು ಒತ್ತಾಯಿಸಿ ಮನವಿಯೊಂದನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಪಂಚಾಯತ್ ಕಾರ್ಯದರ್ಶಿಯವರ ಮುಖಾಂತರ ಕೊಡಲಾಯಿತು.

ಸಿಪಿಐ(ಎಂ)ನ ಜಿಲ್ಲಾ ಸಮಿತಿಯ ಸದಸ್ಯರಾದ ಯು.ದಾಸ ಭಂಡಾರಿ, ಕುಂದಾಪುರ ತಾಲೂಕು ಸಮಿತಿ ಸದಸ್ಯರಾದ ಮುತ್ತಯ್ಯ ಕನ್ಯಾಣರವರ ನೇತೃತ್ವದಲ್ಲಿ ತಲ್ಲೂರು ಮತ್ತು ಹಟ್ಟಿಯಂಗಡಿಯಲ್ಲಿ ಮತಪ್ರದರ್ಶನ ನಡೆಯಿತು. ಯು.ದಾಸ ಭಂಡಾರಿಯವರು, ರಾಮ ಮತ್ತು ಚಂದ್ರ ಇವರ ನೇತೃತ್ವದಲ್ಲಿ ಕೋಣಿ ಪಂಚಾಯತ್‌ನಲ್ಲಿ ಮತ ಪ್ರದರ್ಶನ ನಡೆದು ಮನವಿ ಅರ್ಪಿಸಲಾಯಿತು. ಕಾರ್ಮಿಕರು, ಬಡ ರೈತರು ಹಾಗೂ ಸ್ಥಳೀಯವಾಗಿ ಕೃಷಿ ಕೂಲಿಕಾರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲುಗೊಂಡಿದ್ದರು.

ಮೈಕೊ ಸಹಕಾರ ಸಂಘದ ಚುನಾವಣೆಯಲ್ಲಿ ಸಿಐಟಿಯು ಜಯಭೇರಿ

ಸೆಪ್ಟೆಂಬರ್ 12 ರಂದು ಮೈಕೊ ಕೋ ಆಪರೇಟಿವ್ ಸೊಸೈಟಿಯ ನಿರ್ದೇಶಕ ಮಂಡಳಿಗೆ ನಡೆದ ಚುನಾವಣೆಯಲ್ಲಿ ಸಿಐಟಿಯು ಬೆಂಬಲಿತ 'ಆನೆತಂಡ'ದ ಎಲ್ಲಾ ಅಭ್ಯರ್ಥಿಗಳು ಸ್ಪಷ್ಟ ಬಹುಮತದಿಂದ ವಿಜೇತರಾಗಿದ್ದಾರೆ. ಸಾಮಾನ್ಯ ಸ್ಥಾನದಲ್ಲಿ ಕಾಳೇಗೌಡ.ಕೆ.ಎನ್, ನಾರಾಯಣಸ್ವಾಮಿ.ಎಂ, ಪ್ರಕಾಶ್.ಆರ್.ಎಂ, ರಮೇಶ್.ಬಿ, ವಿಠ್ಠಲ್ ಸಾರ್‌ವಾಡ್, ವಿನೋದ್ ಬಿ. ಕುರಬೇಟ, ವೇಣುಗೋಪಾಲ ರಾವ್.ವಿ, ಪರಿಶಿಷ್ಟ ಜಾತಿ/ಪಂಗಡ ಮೀಸಲು ಸ್ಥಾನದಲ್ಲಿ ವೆಂಕಟರಮಣಪ್ಪ ವಿಜಯಿಯಾಗಿದ್ದಾರೆ.

ಕರ್ನಾಟಕದಲ್ಲೇ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಲ್ಲಿ ದಿ ಮೈಕೊ ಕೋ ಆಪರೇಟಿವ್ ಸೊಸೈಟಿಯು ಸ ಹ ಒಂದು ಎಂಬುದನ್ನು ತಿಳಿಸಲು ಸಿಐಟಿಯು ಬೆಂಬಲಿತ ಆನೆ ತಂಡ ಹರ್ಷಿಸುತ್ತದೆ.

ಬೀದರ್: 'ಶರಣರ ಕ್ರಾಂತಿ ನಾಡಿನಿಂದ ಕೋಮುವಾದಿಗಳನ್ನು ತೊಲಗಿಸಲು ಸಕಾಲ'

ಬೀದರ್ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸಲು ಸಿಪಿಐ(ಎಂ) ಪ್ರಚಾರ ಮಾಡಲಿದೆ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ತಿಳಿಸಿದರು.

ಸುದ್ದಿಗಾರರೊಂದಿಗೆ ಗುಲಬರ್ಗಾದಲ್ಲಿ ಅಕ್ಟೋಬರ್ 4 ರಂದು ಮಾತನಾಡಿದ ಅವರು, ಸದ್ಯಕ್ಕೆ ಬಿಜೆಪಿಯನ್ನು ಸೋಲಿಸುವ ಗುರಿ ಮಾತ್ರ ಹೊಂದಲಾಗಿದ್ದು, ಈ ದಿಸೆಯಲ್ಲಿ ಆ ಪಕ್ಷದ ಕೋಮುವಾದದ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸುವ ಕಾರ್ಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸದ್ಯ ಬಿಜೆಪಿಯನ್ನು ಸೋಲಿಸಲು ಮಾತ್ರ ನಿರ್ಧರಿಸಲಾಗಿದ್ದು, ಈ ಬಗ್ಗೆಯಷ್ಟೇ ಪ್ರಚಾರ ಮಾಡಲಾಗುವುದು. ಮತದಾನ ಯಾರಿಗೆ ಎಂಬುದರ ಬಗ್ಗೆ ಇನ್ನೂ ಅಂತಿಮ ನಿರ್ಧಾರ ಕೈಗೊಳ್ಳಲಾಗಿಲ್ಲ. ಅದನ್ನು ಮತದಾರರ ವಿವೇಚನೆಗೆ ಬಿಡಲಾಗುವುದು. ಅಂತಿಮ ಕ್ಷಣದಲ್ಲಿ ಈ ಎರಡು ಪಕ್ಷಗಳ ಪೈಕಿ ಬಿಜೆಪಿಯನ್ನು ಸೋಲಿಸಬಲ್ಲ ಗೆಲುವಿನ ಸಾಧ್ಯತೆಯಿರುವ ಪಕ್ಷಕ್ಕೆ ಮತ ಚಲಾಯಿಸುವಂತೆ ಕೋರಲಾಗುವುದು ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಸ್ಪಷ್ಟಪಡಿಸಿದರು.

ಬೀದರ ಕ್ಷೇತ್ರದಲ್ಲಿ ಸತತವಾಗಿ ಐದು ಬಾರಿ ಗೆಲ್ಲುವ ಮೂಲಕ ಬಿ.ಜೆ.ಪಿ ಶರಣರ ಕ್ರಾಂತಿ ಭೂಮಿಯನ್ನು ಕೋಮುವಾದಿಗಳ ಮನೆಯನ್ನಾಗಿಸಿದೆ. ಅಲ್ಲದೇ ಈ ಭಾಗದೆಲ್ಲೆಡೆ ಬೇರು ಬಿಟ್ಟು ಜನರಲ್ಲಿ ಅಲ್ಪಸ್ವಲ್ಪ ಪ್ರಭಾವ ಹೊಂದಿದೆ. ಬೀದರ್, ಆಳಂದಾ, ಹುಮ್ನಾಬಾದ್ ಮುಂತಾದೆಡೆ ಕೋಮುಗಲಭೆ ಹುಟ್ಟುಹಾಕಿದೆ. ಪ್ರಚಾರ ಸಂದರ್ಭದಲ್ಲಿ ಇದನ್ನು ತೊಲಗಿಸುವಂತೆ ಜನರಲ್ಲಿ ಮನವಿ ಮಾಡಲಾಗುವುದು. ಬಿ.ಜೆ.ಪಿಯನ್ನು ಸೋಲಿಸಲು ಇದೀಗ ಕಾಲ ಕೂಡಿ ಬಂದಿದ್ದು, ಈ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವಂತೆ ಮತದಾರರಿಗೆ ತಿಳಿಸಲಾಗುವುದು ಎಂದು ಅವರು ಹೇಳಿದರು.

ಕಳೆದ ಲೋಕಸಭೆ ಚುನಾವಣೆ ನಂತರ ಬಿಜೆಪಿ ಅನುಚಿತವಾಗಿ ವರ್ತಿಸುತ್ತಿದ್ದು, ಮತ್ತೆ ಹಿಂದುತ್ವಕ್ಕೆ ಮರಳುವುದಾಗಿ ಹೇಳುತ್ತ ಜನರಲ್ಲಿ ಕೋಮು ಭಾವನೆ ಕೆರಳಿಸುತ್ತಿದೆ. ಈ ರೀತಿಯ ಕೋಮುವಾದವನ್ನು ಕರ್ನಾಟಕದ ಜನ ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ಬೀದರ್ ಕ್ಷೇತ್ರದ ಮತದಾರರ ಮೂಲಕ ತಿಳಿಸಿ ಆ ಪಕ್ಷವನ್ನು ಹಿಮ್ಮೆಟ್ಟಿಸಲಾಗುವುದು ಎಂದು ಅವರು ಹೇಳಿದರು.

ಲೋಕಸಭೆಯಲ್ಲಿ ರಾಜ್ಯದ 18 ಬಿಜೆಪಿ ಸದಸ್ಯರಿದ್ದರೂ ಒಂದು ದಿನವೂ ಒಬ್ಬರೂ ರಾಜ್ಯದ ಸಮಸ್ಯೆಗಳನ್ನು ಪ್ರಸ್ತಾಪಿಸಿಲ್ಲ. ಬದಲಾಗಿ ಸಂಸತ್ತಿನ ಕಲಾಪಗಳಿಗೆ ಅಡ್ಡಿಪಡಿಸಿ ವೃಥಾ ಕಾಲಹರಣ ಮಾಡಿದರು. ಹೀಗಾಗಿ ಆ ಪಕ್ಷ ಸೋಲುವುದು ಅಗತ್ಯ. ಈ ಹಿಂದೆ ಬಿಜೆಪಿಗೆ ಮತ ನೀಡಿದವರು ಪುನರ್ ಪರಿಶೀಲಿಸಿಕೊಳ್ಳಬೇಕು. ಆ ಪಕ್ಷಕ್ಕೆ ಮತ ನೀಡುವುದು ವ್ಯರ್ಥ ಎಂದು ಅವರು ತಿಳಿಸಿದರು.

ಜಾತ್ಯಾತೀತ ಜನತಾದಳ ಹಾಗೂ ಕಾಂಗ್ರೆಸ್‌ಗಳೆರಡೂ ಕೂಡಿಕೊಂಡೇ ಬಿಜೆಪಿಯನ್ನು ದೂರವಿಡಲು ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ರಚಿಸಿರುವುದರಿಂದ ಈ ಚುನಾವಣೆಯಲ್ಲೂ ಹೊಂದಾಣಿಕೆ ಮಾಡಿಕೊಂಡು ಒಂದೇ ಪಕ್ಷದ ಅಭ್ಯರ್ಥಿ ಸ್ಪರ್ಧಿಸಿದ್ದರೆ ಬಿ.ಜೆ.ಪಿ. ಸೋಲು ನಿಚ್ಚಳವಾಗುತ್ತಿತ್ತು. ಅಲ್ಲದೇ ಸರ್ಕಾರದ ವರ್ಚಸ್ಸು ಹೆಚ್ಚುತ್ತಿತ್ತು ಎಂದು ನಾಗರಾಜ ಅಭಿಪ್ರಾಯಪಟ್ಟರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಹಾಗೂ ಎಸ್.ವೈ.ಗುರುಶಾಂತ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಹಲವಾರು ವರುಷಗಳಿಂದ ಕಾರ್ಯಪ್ರವೃತ್ತರಾಗಿರುವ ಭಯೋತ್ಪಾದಕ ಸಂಘಟನೆಗಳು ಮತ್ತೆ ಹಿಂಸಾಕಾಂಡದಲ್ಲಿ ತೊಡಗಿವೆ. ಈ ಶಕ್ತಿಗಳನ್ನು ಸ್ಪಷ್ಟವಾಗಿ ದಮನಿಸಬೇಕು ಮಾತ್ರವಲ್ಲ, ರಾಜಕೀಯವಾಗಿಯೂ ಹಲವು ಕ್ರಮ ಕೈಗೊಳ್ಳಬೇಕಿದೆ.

ಈಶಾನ್ಯ ಭಾರತ ಭುಗಿಲೆದ್ದ ಭಯೋತ್ಪಾದನೆ

ಈಶಾನ್ಯ ಭಾರತದಲ್ಲಿ ಮತ್ತೊಮ್ಮೆ ಭಯೋತ್ಪಾದನೆ ಭುಗಿಲೆದ್ದಿದೆ. ಸತತವಾಗಿ ಒಂದು ವಾರದ ಕಾಲ ಭಯೋತ್ಪಾದಕ ಧಾಳಿಗಳು ನಡೆಯುತ್ತಿದ್ದು ನೂರಕ್ಕೂ ಹೆಚ್ಚು ಜನ ಸತ್ತಿದ್ದು, ನೂರಾರು ಜನರು ಗಾಯಗೊಂಡಿದ್ದಾರೆ.

ಈ ಧಾಳಿಗಳಿಗೆ ತಾವೇ ಕಾರಣರೆಂದು ನ್ಯಾಶನಲ್ ಡೆಮೊಕ್ರಟಿಕ್ ಫ್ರಂಟ್ ಆಫ್ ಬೊಡೆಲ್ಯಾಂಡ್/ NDFB) ಮತ್ತು ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಆಸ್ಸಾಂ (ULFA) ಹೇಳಿಕೊಂಡಿವೆ. ಇಡೀ ಈಶಾನ್ಯ ಭಾರತದಲ್ಲಿ ಭಯೋತ್ಪಾದನೆಯನ್ನು ಸೃಷ್ಟಿಸಲು ಈ ಎರಡು ಸಂಘಟನೆಗಳು ಕೂಡ ಕೆಲಸ ಮಾಡುತ್ತಿವೆ ಎಂಬುದು ಸ್ಪಷ್ಟ. ಉಲ್ಫಾದಂತೆ ಎನ್‌ಡಿಎಫ್‌ಬಿ ಕೂಡಾ ಸ್ವತಂತ್ರ ದೇಶದ ಬೇಡಿಕೆಯನ್ನು ಮುಂದಿಟ್ಟಿದ್ದು, ಯಾವುದೇ ಮಾತುಕತೆಗೆ ಒಪ್ಪುತ್ತಿಲ್ಲ. ಮಾತ್ರವಲ್ಲ, ಆಸ್ಸಾಂನ ಮುಖ್ಯಮಂತ್ರಿ ಕರೆದ ಮಾತುಕತೆಗೆ ಬದಲಾಗಿ ಬಾಂಬ್ ಸ್ಫೋಟವೇ ನಮ್ಮ ಉತ್ತರ ಎಂದು ಉಲ್ಫಾ ಹೇಳಿಕೊಂಡಿದೆ. ಭೂತಾನ್‌ನಲ್ಲಿರುವ ಭಯೋತ್ಪಾದಕರ ಕ್ಯಾಂಪ್‌ಗಳ ಮೇಲೆ ಭೂತಾನ್ ಸರಕಾರ ಮತ್ತು ಭಾರತದ ಭದ್ರತಾ ಪಡೆಗಳು ನಡೆಸಿದ ಮೂಲೋತ್ಪಾಟನೆ ಕಾರ್ಯಗಳಿಂದಾಗಿ ತತ್ತರಿಸಿದ್ದ ಈ ಸಂಘಟನೆಗಳು ತಾವು ಸೋಲಿನಿಂದ ಹೊರಬಂದಿರುವುದಾಗಿ ತೋರಿಸಿಕೊಳ್ಳಲು ಹೀಗೆ ಮಾಡುತ್ತಿವೆ.

ಇಂತಹ ಸಂದರ್ಭದಲ್ಲಿ ಈಗ ನಡೆದಿರುವ ಹೀನ ಕೃತ್ಯಗಳ ಪುನರಾವರ್ತನೆಯಾಗದಂತೆ ತಡೆಯಬೇಕಾಗಿದೆ. ಮೊದಲನೆಯದಾಗಿ ಭಾರತದ ಭದ್ರತಾ ಪಡೆಗಳು ಎಲ್ಲಾ ಈಶಾನ್ಯ ರಾಜ್ಯಗಳ ನಡುವೆ ಉನ್ನತ ಮಟ್ಟದ ಹೊಂದಾಣಿಕೆ ನಡೆಸಿ, ಕಾರ್ಯಾಚರಣೆ



ನಡೆಸುವುದು. ಎರಡನೆಯದಾಗಿ, ಭಯೋತ್ಪಾದಕ ಶಕ್ತಿಗಳು ನೆರೆಯ ದೇಶಗಳಲ್ಲಿ ಅಡಗಿ ತಮ್ಮ ಕೃತ್ಯಗಳನ್ನು ನಡೆಸುತ್ತಿರುವುದರಿಂದ ಬಾಂಗ್ಲಾದೇಶ ಮತ್ತು ಮ್ಯಾನ್‌ಮಾರ್ (ಹಿಂದಿನ ಬರ್ಮಾ) ದೇಶಗಳ ನೆರವನ್ನು ಪಡೆದುಕೊಳ್ಳಬೇಕು. ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ತ್ರಿಪುರದ ಮುಖ್ಯ ಮಂತ್ರಿಗಳು, ಭಯೋತ್ಪಾದಕರು ನೆರೆಯ ದೇಶಗಳಿಂದ ಕಾರ್ಯಾಚರಣೆಯನ್ನು ನಡೆಸುತ್ತಿರುವುದನ್ನು ಕೇಂದ್ರ ಸರಕಾರದ ಗಮನಕ್ಕೆ ತಂದಿದ್ದರೂ ಕೂಡ ಈವರೆಗೆ ಸೂಕ್ತ ಕ್ರಮ ಕೈಗೊಂಡಿರಲಿಲ್ಲ. ಈಗಲಾದರೂ ಕೇಂದ್ರ ಸರಕಾರ ಈ ಕುರಿತು ಗಂಭೀರ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ. ಇಲ್ಲವಾದರೆ, ಪರಿಸ್ಥಿತಿ ಕೈ ಮೀರುತ್ತದೆ.

ಭಯೋತ್ಪಾದಕ ಶಕ್ತಿಗಳ ವಿರುದ್ಧ ಯಾವುದೇ ಕಾಳಜಿ ಇಲ್ಲದೆ ಕಾರ್ಯಾಚರಣೆ ನಡೆಸುವಾಗಲೇ ರಾಜಕೀಯ ಪರಿಹಾರ ಕಂಡುಕೊಳ್ಳಲು ಕೇಂದ್ರ ಸರಕಾರ ಪ್ರಯತ್ನಿಸಬೇಕು. ಇಂತಹ ಪರಿಸ್ಥಿತಿಯನ್ನು ನಿಭಾಯಿಸಲು ಆಸ್ಸಾಂ ಸರಕಾರ ಪರಿಪಕ್ವವಾಗಿರುವಂತೆ ಕಾಣುವುದಿಲ್ಲ. ಈಶಾನ್ಯ ರಾಜ್ಯಗಳಲ್ಲಿರುವ ಚುನಾಯಿತ ಸರಕಾರವೂ, ತ್ರಿಪುರ ಸರಕಾರವು ಕೈಗೊಂಡಂತೆ, ಸಾರ್ವಜನಿಕ ಅಭಿಪ್ರಾಯಗಳನ್ನು ಸದೃಢಗೊಳಿಸಲು ರಾಜಕೀಯ ಮುತುವರ್ಜಿ ಕೈಗೊಳ್ಳಬೇಕು ಹಾಗೂ ಭಯೋತ್ಪಾದಕ ಶಕ್ತಿಗಳನ್ನು ಜನರಿಂದ ದೂರ ಮಾಡಬೇಕು. ಹಿಂಸೆ ಮತ್ತು ಭಯೋತ್ಪಾದಕತೆಯನ್ನು ತಡೆಗಟ್ಟಲು ಈಶಾನ್ಯ ರಾಜ್ಯಗಳ ಎಲ್ಲಾ ಚುನಾಯಿತ ಸರಕಾರಗಳು ಕೇಂದ್ರ ಸರಾಕಾರಕ್ಕೆ ಸಹಾಯ ಹಸ್ತವನ್ನು ಚಾಚಬೇಕು.

....ಆಧುನಿಕ ದುಶ್ಯಾಸನರ ಅಟ್ಟಹಾಸ

ಪುಟ 3 ರಿಂದ

ಪಡೆದಿದ್ದಾರೆ. ಹೀಗಾಗಿ ನೊಂದ ಮಹಿಳೆ ಮತ್ತು ಆಕೆಯ ಕುಟುಂಬದ ಸದಸ್ಯರು ತಮಗಾದ ಅನ್ಯಾಯವನ್ನು ವಿವರಿಸುತ್ತಿದ್ದಾಗ, ಪೂರ್ವಾಗ್ರಹಪೀಡಿತರಾದ ಹೆಚ್ಚುವರಿ ಎಸ್.ಪಿ. ಅದನ್ನು ಕೇಳಿಸಿಕೊಳ್ಳುವ ಸೌಜನ್ಯವನ್ನು ತೋರಿಸಲಿಲ್ಲ ಮಾತ್ರವಲ್ಲ ಪ್ರಕರಣದ ಕುರಿತು ಸುಳ್ಳು ದೂರು ನೀಡಲಾಗಿದೆ ಎಂದು ಕೂಲಿಕಾರರ ಸಂಘದ ಮುಖಂಡರ ವಿರುದ್ಧವೇ ಕ್ರಮ ಜರುಗಿಸಲಾಗುವುದು ಎಂದು ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದಾರೆ. ಪೊಲೀಸರ ಕುಮ್ಮಕ್ಕಿನಿಂದ ಹಿಗ್ಗಿರುವ ಭೂಮಾಲಿಕರು ದಲಿತ ಸಂಘಟನೆಯ ಹೆಸರಿನಲ್ಲಿ ಕೆಲವರನ್ನು ಎತ್ತಿಕಟ್ಟಿ ದಲಿತ ಮುಖಂಡ ಕೆ.ಬಾಳಪ್ಪ ವಿರುದ್ಧ ಕ್ರಮ ಜರುಗಿಸಲು ಒತ್ತಾಯಿಸುವಂತೆ ಪ್ರಚೋದನೆ ನೀಡುತ್ತಿದ್ದಾರೆ.

ಇತ್ತ ಕಳೆದ ಹತ್ತಾರು ವರ್ಷಗಳಿಂದ ಭೂಮಾಲಿಕರ ಮನೆಗಳಲ್ಲಿ ಕೆಲಸಕ್ಕಿದ್ದ ಬಸವರಾಜ, ಲಿಂಬಣ್ಣ, ದುರ್ಗೇಶ್ ಎಂಬ ದಲಿತರನ್ನು ಅವರು ಕೂಲಿಕಾರರ ಸಂಘಕ್ಕೆ ಒಲವು ಇರುವವರು ಎನ್ನುವ ಕಾರಣಕ್ಕಾಗಿ ಕೆಲಸದಿಂದ ಬಿಡಿಸಿದ್ದಾರೆ.

ಹೇರೂರು ಪ್ರಕರಣ : ಕೃಷಿಕೂಲಿಕಾರರ ಮೇಲೆ ಭೂಮಾಲಿಕರಿಂದ ನಡೆಯುತ್ತಿರುವ ದೌರ್ಜನ್ಯ ಮತ್ತು ಪೊಲೀಸರಿಂದ ಅವರಿಗೆ ದೊರೆಯುತ್ತಿರುವ ಕುಮ್ಮಕ್ಕಿಗೆ ಇದೇ ಮೊದಲ ಉದಾಹರಣೆಯಲ್ಲ. ಇಂತಹ ಅನೇಕ ಪ್ರಕರಣಗಳು ಇಲ್ಲಿ ನಡೆಯುತ್ತಲೇ ಇವೆ.

ಕೇವಲ ಎರಡು ತಿಂಗಳ ಹಿಂದೆ ಹೇರೂರು ಗ್ರಾಮದ ಕೃಷಿ ಕೂಲಿಕಾರರ ಮಹಿಳೆಯರು ಭೂಮಾಲಿಕರ ಗದ್ದೆಗಳಲ್ಲಿ ಪುಕ್ಕಟೆಯಾಗಿ ಭತ್ತ ನಾಟಿ ಮಾಡಲು ಒಪ್ಪದಿದ್ದಾಗ ಹೇರೂರು ಗ್ರಾಮದ ಭೂಮಾಲಿಕ ಬಸಪ್ಪ ಶಿವಬಸಪ್ಪ ಬಯ್ಯಾಪುರ ಮತ್ತು ಇತರರು ಅವರ ಮೇಲೆ ಹಲ್ಲೆ ನಡೆಸಿದ್ದರು. ಹಲ್ಲೆಗೊಳಗಾದ ಹುಲಿಗೆಮ್ಮ ಗಂಡ ಯಮುನಪ್ಪ ಮತ್ತು ಲಕ್ಷ್ಮಮ್ಮ ಗಂಡ ಧರ್ಮಪ್ಪ ಅವರು ಪೊಲೀಸರಿಗೆ ದೂರು ನೀಡಲು ಹೋದಾಗ ಅವರ ಸಂಗಡ ಪೊಲೀಸ್ ಠಾಣೆಗೆ ಹೋಗಿದ್ದ ಗ್ರಾಮದ ವಾಲ್ಮೀಕಿ ಜನಾಂಗದ ಮಹಿಳೆಯರ ಮನೆಗಳಿಗೆ ಅದೇ ರಾತ್ರಿ ನುಗ್ಗಿ ಮಹಿಳೆಯರನ್ನೂ, ಮಕ್ಕಳನ್ನೂ ಹೊರಗೆಳೆದು ಥಳಿಸಲಾಗಿತ್ತು. ಪೊಲೀಸರ ಸಹಕಾರದಿಂದಾಗಿ ಆರೋಪಿಗಳು ತಲೆಮರೆಸಿಕೊಂಡು ಆನಂತರ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡರು.

ಹೀಗೆ ಭೂಮಾಲಿಕ ಶಕ್ತಿಗಳೊಂದಿಗೆ ಸ್ಥಳೀಯ ಪೊಲೀಸರು ಕೈಜೋಡಿಸಿ ಕೊಂಡಿರುವುದರಿಂದ ತಾಲೂಕಿನಲ್ಲಿ ದಲಿತ ಕೂಲಿಕಾರರಿಗೆ ವಿಶೇಷವಾಗಿ ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ಗ್ರಾಮೀಣ ಹೋಟೆಲುಗಳಲ್ಲಿ ಅಸ್ಪೃಶ್ಯತೆ ವ್ಯಾಪಕವಾಗಿ ಆಚರಿಸಲ್ಪಡುತ್ತಿದ್ದರೂ ಪೊಲೀಸರು ಕಣ್ಣುಮುಚ್ಚಿಕೊಂಡಿದ್ದಾರೆ. ಪರಿಸ್ಥಿತಿಯನ್ನು ರಾಜ್ಯದ ಮುಖ್ಯ ಮಂತ್ರಿಗಳ ಗಮನಕ್ಕೆ ತರಲು ನಿರ್ಧರಿಸಿ ನಾಳೆ 9.10.2004 ರಂದು ಗಂಗಾವತಿ ತಾಲೂಕಿನ ನೂರಾರು ಕೃಷಿಕೂಲಿಕಾರರ ಮಹಿಳೆಯರು ಮುಖ್ಯ ಮಂತ್ರಿ ಮನೆಯ ಮುಂದೆ ಸತ್ಯಾಗ್ರಹ ನಡೆಸಿ ಮನವಿ ಸಲ್ಲಿಸಿದ್ದಾರೆ. ದೌರ್ಜನ್ಯಕ್ಕೆ ಒಳಗಾದ ಈ ದಲಿತ ಮಹಿಳೆಯರ ಪ್ರಶ್ನೆಯನ್ನು ರಾಷ್ಟ್ರೀಯ ಮಹಿಳಾ ಆಯೋಗದ ಮುಂದೆ ಕೊಂಡೊಯ್ಯಲು ನಿರ್ಧರಿಸಲಾಗಿದೆ. ಗಂಗಾವತಿ ತಾಲೂಕಿನ ದಲಿತ ಮಹಿಳೆಯರ ಈ ಹೋರಾಟಕ್ಕೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಹಕ್ಕೊತ್ತಾಯಗಳು

1. ಗೋನಾಳ ಗ್ರಾಮದ ದಲಿತ ಮಹಿಳೆಯರ ಮೇಲೆ ಹಲ್ಲೆ ಮಾಡಿಸಿ, ಅವರ ಬಟ್ಟೆ ಹರಿದು ಅವಮಾನ ಮಾಡಿಸಿದ ಭೂಮಾಲಿಕರಾದ 1) ಅಮರೇಶಪ್ಪ ಶಿವಪ್ಪ ಗೋನಾಳ, 2) ಮಲ್ಲನಗೌಡ ವೀರಭದ್ರಗೌಡ ಗೋನಾಳ, 3) ಹನುಮನಗೌಡ ಬಸಪ್ಪ ವಗರನಾಳ, 4) ಸೊಸೈಟಿ ವಿರೂಪಣ್ಣ, 5) ಸಿದ್ಧನಗೌಡ ಜೇಕಿನ್, 6) ಮಲ್ಲಪ್ಪ ವಗರನಾಳ, 7) ಶೇಖರಗೌಡ ಷಣ್ಮುಖಪ್ಪ ಶರಣ ಬಸವೇಶ್ವರ ಕ್ಯಾಂಪ ಮತ್ತು 8) ಹನುಮನಗೌಡ ವೀರಭದ್ರಗೌಡ ಹೇರೂರ್ ಹಾಗೂ ಅವರ ಬಾಡಿಗೆ ಗುಂಡಾಗಳ ವಿರುದ್ಧ ದಲಿತ ಮಹಿಳೆಯರ ಮೇಲೆ ಹಲ್ಲೆ ಮಾಡಿದ ಆರೋಪವನ್ನು ದಾಖಲು ಮಾಡಿ, ಅವರನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಬೇಕು.

2. ಹೇರೂರು ಗ್ರಾಮದ ದಲಿತರ ಮನೆಗಳಿಗೆ ನುಗ್ಗಿ, ದಲಿತ ಮಹಿಳೆಯರನ್ನು ಹೊರಗೆಳೆದು, ಹಲ್ಲೆ ಮಾಡಿ, ಅತ್ಯಾಚಾರವೆಸಗಲು ಪ್ರಯತ್ನಪಟ್ಟ ಬಸಪ್ಪ ಶಿವಬಸಪ್ಪ ಬಯ್ಯಾಪುರ, ಮೇಟಿ ವೀರನಗೌಡ ಬಸವರಾಜಪ್ಪ, ಮೇಟಿ ವೆಂಕಟೇಶ ಮಲ್ಲಿಕಾರ್ಜುನ, ಶರಣಪ್ಪ ವಿರುಪಾಕ್ಷಗೌಡ ಮೂಲೆಮನಿ, ಅಶೋಕ ಚೆನ್ನಪ್ಪ ಬಯ್ಯಾಪುರು ಮತ್ತು ಇತರರ ಮೇಲೆ ದಲಿತ ಮಹಿಳೆಯರ ಮೇಲೆ ಹಲ್ಲೆ ಮಾಡಿದ ಆರೋಪ ದಾಖಲು ಮಾಡಿ ಅವರನ್ನು ಬಂಧಿಸಬೇಕು.

3. ಮೇಲಿನ ಎರಡೂ ಪ್ರಕರಣಗಳಲ್ಲಿ ಆರೋಪಿಗಳಿಗೆ ಕುಮ್ಮಕ್ಕು ನೀಡಿದ ಸ್ಥಳೀಯ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ. ಗುರುಬಸವರಾಜಪ್ಪ ಮತ್ತು ಸಿ.ಪಿ.ಐ. ಪ್ರಭಾಕರಪ್ಪ ಅವರನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆಗೆ ಒಳಪಡಿಸಬೇಕು.

4. ಕಾನೂನು ಬದ್ಧವಾಗಿ ಕೃಷಿ ಕೂಲಿಕಾರರನ್ನು ಸಂಘಟಿಸುತ್ತಿರುವ ಸಂಘದ ಮುಖಂಡರಿಗೇ ಬೆದರಿಕೆ ಹಾಕುತ್ತಿರುವ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ರಾಮಪ್ಪ ಅವರನ್ನು ಅಲ್ಲಿಂದ ಬೇರೆಡೆಗೆ ವರ್ಗಾಯಿಸಬೇಕು.

5. ಗೋನಾಳ ಗ್ರಾಮದಲ್ಲಿ ಸರ್ವೇ ನಂಬರ್ 3, 4, 36, 37 ಮೊದಲಾದ ವಿವಿಧ ಸರ್ವೇ ನಂಬರುಗಳ ಅಡಿಯಲ್ಲಿ ಇರುವ ಸುಮಾರು 30 ಎಕರೆ ಸರ್ಕಾರಿ ಜಮೀನು ಈಗ ಯಾರ ವಶದಲ್ಲಿದೆ ಎಂಬುದರ ಸಮಗ್ರ ತನಿಖೆಯಾಗಬೇಕು. ಶ್ರೀಮಂತ ಭೂಮಾಲಿಕರು ಕಬಳಿಸಿರುವ ಆ ಭೂಮಿಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಅದನ್ನು ಭೂಹೀನ ಕೃಷಿ ಕೂಲಿಕಾರರಿಗೆ ವಿತರಣೆ ಮಾಡಬೇಕು.

6. ಭೂಮಾಲೀಕರ ಪರವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಲು ನೆರವಾದ ಅಧಿಕಾರಗಳನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆಗೆ ಒಳಪಡಿಸಬೇಕು.

7. ಸರ್ಕಾರಿ ಭೂಮಿಯನ್ನು ತಮ್ಮ ಭೂಮಿ ಎಂದು ಮೋಸ ಮಾಡಿ ಅದನ್ನು ಮಾರಾಟ ಮಾಡುವ ವ್ಯವಹಾರಗಳಲ್ಲಿ ಬಡ ಕೂಲಿಕಾರರಿಂದ ಭೂಮಾಲೀಕರು ಸಂಗ್ರಹಿಸಿದ ಹಣವನ್ನು ಅವರಿಗೆ ವಾಪಸ್ ಕೊಡಿಸಬೇಕು.

8. ಗೋನಾಳ ಕ್ಯಾಂಪಿನಲ್ಲಿ ಕಳೆದ 40 ವರ್ಷಗಳಿಂದ ವಾಸವಿರುವ ಭೂಹೀನ ಕೃಷಿ ಕೂಲಿಕಾರರ ಮನೆ ನಿವೇಶನಗಳನ್ನು ಸಕ್ರಮಗೊಳಿಸಿ ಅವರಿಗೆ ಪಟ್ಟಾ ನೀಡಬೇಕು.

ಕೇಸರೀಕರಣದಿಂದ ಮುಕ್ತರಾಗುವ ಬಗೆ

ಶಿಕ್ಷಣ-ಸಂಸ್ಕೃತಿ ಮತ್ತು ಆಡಳಿತದ ವಿವಿಧ ಹಂತಗಳಲ್ಲಿ ನುಸುಳಿ ಪ್ರತಿಷ್ಠಾಪಿತಗೊಂಡಿರುವ 'ಕರಸೇವಕ'ರನ್ನು ಹೊರಹಾಕಲು,ಈ ಸಂಸ್ಥೆಗಳ ನರನಾಡಿಗಳಲ್ಲಿ ಸೇರಿರುವ ಕೋಮುವಾದಿ ವಿಷವನ್ನು ತೆಗೆಯುವ ಕೆಲಸ ಆರಂಭಗೊಂಡಿದೆ. ಯುಪಿಎ ಸರ್ಕಾರ ಈ ಅಪಾಯವನ್ನು ಎದುರಿಸಲು ಗಂಭೀರವಾದ ದೃಢ ಹೆಜ್ಜೆ ಇಡಬೇಕು. ಇಲ್ಲವಾದಲ್ಲಿ ಅಪಾಯ ಅಧಿಕ. ಆದ್ದರಿಂದ ದೃಢತೆಯಿಂದ ಕಾರ್ಯಪ್ರವೃತ್ತರಾಗಬೇಕು ಎನ್ನುತ್ತಾರೆ ಲೇಖಕರು. ಸನ್ನಿವೇಶದ ಸೂಕ್ಷ್ಮ ಎಳೆಗಳನ್ನು ಬಿಚ್ಚಿಡುತ್ತಾ......

ಹರ್ಕಿಷನ್ ಸಿಂಗ್ ಸುರ್ಜಿತ್

ಈ ವರ್ಷದ ಮೇ ತಿಂಗಳಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಗತಿಪರ ಮೈತ್ರಿಕೂಟ(ಯುಪಿಎ) ಅಧಿಕಾರ ವಹಿಸಿಕೊಂಡಾಗ ಅದರ ನೀತಿಗಳನ್ನು ಪ್ರತಿಪಾದಿಸಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ "ಯುಪಿಎ ಸರ್ಕಾರ ಕಳೆದ ಐದು ವರ್ಷಗಳಲ್ಲಿ ನೆಲೆಗೊಂಡಿರುವ ಶಿಕ್ಷಣದ ಕೋಮುವಾದೀಕರಣದ ಪ್ರವೃತ್ತಿಯನ್ನು ಬದಲಿಸಲು ತಕ್ಷಣ ಕ್ರಮಗಳನ್ನು ಕೈಗೊಳ್ಳುವುದು" ಎಂದಿತ್ತು. ಈ ಪ್ರಕ್ರಿಯೆಯನ್ನು ಸೂಚಿಸಲು ಮಾಧ್ಯಮಗಳು 'DETOXIFICATION' ಅಂದರೆ ನಿರ್ವಿಷೀಕರಣ ಎಂಬ ಪದವನ್ನು ಸೃಷ್ಟಿಸಿದವು. ಈ ಪ್ರಕ್ರಿಯೆಯ ಮುಖ್ಯ ಭಾಗವಾಗಿ ವಿವಿಧ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಪೀಠಗಳಲ್ಲಿ ಬಿಜೆಪಿ ನೇತೃತ್ವದ ಆಡಳಿತ ಕೂರಿಸಿದ ವ್ಯಕ್ತಿಗಳನ್ನು ತೆಗೆದುಹಾಕಲಾಗುವುದು ಎಂಬ ಭರವಸೆ ನೀಡಲಾಗಿತ್ತು. ಈ ವ್ಯಕ್ತಿಗಳನ್ನು ಬಹುಪಾಲು ಇಂತಹ ನೇಮಕಗಳ ನೀತಿ-ನಿಯಮಗಳನ್ನು ಉಲ್ಲಂಘಿಸಲು ನೇಮಿಸಲಾಗಿತ್ತು.

ಮಾಧ್ಯಮಗಳಲ್ಲಿನ ಕೆಲವು ಬರಹಗಾರರು ಈ ಪ್ರಕ್ರಿಯೆಯನ್ನು ವರ್ಣಿಸಲು ಸೇಡು ಎಂಬಿತ್ಯಾದಿ ಪದಗಳನ್ನು ಬಳಸಿದ್ದಾರೆ. ಈ ಮಂದಿಯೇ ಬಿಜೆಪಿ ನೇತೃತ್ವದ ಸರ್ಕಾರ ಕಟ್ಟಾ ಆರ್‌ಎಸ್‌ಎಸ್ ಕೋಮುವಾದಿ ವ್ಯಕ್ತಿಗಳನ್ನು ಕೂರಿಸಲು ಈ ಸಂಸ್ಥೆಗಳಲ್ಲಿನ ಪ್ರಖ್ಯಾತ ಬುದ್ಧಿಜೀವಿಗಳನ್ನು ತೆಗೆದುಹಾಕಿ ಹಿಂದುತ್ವ-ಪರ ಕೂಟಸ್ಥಾನವನ್ನು ತುಂಬಿಸುತ್ತಿರುವಾಗ ಮೌನವಾಗಿದ್ದರು ಅಥವಾ ಹರ್ಷಿತರಾಗಿದ್ದರು ಎಂಬುದು ಬೇರೆ ಮಾತು. ಈಗ ಕುರುಡು ಕೋಪದಿಂದ ನ್ಯಾಯ ಒದಗಿಸಬೇಕು ಎಂದು ಕಿರಿಚಾಡುವ ಈ ಮಂದಿ ಕಳೆದ ಆರು ವರ್ಷಗಳಲ್ಲಿ ಹಲವಾರು ಬುದ್ಧಿಜೀವಿಗಳಿಗೆ ಅವರು ಆರ್‌ಎಸ್‌ಎಸ್ ನ ಕೋಮುವಾದಿ ಫ್ಯಾಸಿಸ್ಟ್ ಮಾದರಿಯ ದಾರಿಯನ್ನು ಒಪ್ಪಲಿಲ್ಲ ಎಂಬ ಏಕೈಕ ಕಾರಣಕ್ಕಾಗಿ ಮಾಡಿದ ಅನ್ಯಾಯವನ್ನು ಮರೆತಿದ್ದಾರೆ.

ಒಂದು ಉದಾಹರಣೆ

ಇದಕ್ಕೆ ಉದಾಹರಣೆಗಳು ಹಲವು. ಇಲ್ಲಿ ಒಂದು ಉದಾಹರಣೆಯನ್ನಷ್ಟೇ ನೋಡೋಣ. ಮಾರ್ಚ್ 1998 ರಲ್ಲಿ ವಾಜಪೇಯಿ ಸರ್ಕಾರ ಅಧಿಕಾರಕ್ಕೆ ಬಂದಾಗ ಅದು ಕೈಗೊಂಡ ಆರಂಭದ ಕ್ರಮಗಳಲ್ಲಿ ಒಂದೆಂದರೆ ಇನ್ನೂ ಪೂರ್ಣ ಸ್ವಾಯತ್ತತೆ ಪಡೆದಿರದ ಇಲೆಕ್ಟ್ರಾನಿಕ್ ಮಾಧ್ಯಮ ನಿಗಮದ ಪ್ರಸಾರ ಭಾರತಿಯ ಮಂಡಳಿಯಿಂದ ಕೆಲವು ಪ್ರಸಿದ್ಧ ಬುದ್ಧಿಜೀವಿಗಳನ್ನು ಕಿತ್ತುಹಾಕಿದ್ದು. ಖ್ಯಾತ ಇತಿಹಾಸಜ್ಞೆ ಪ್ರೊ. ರೊಮಿಲ್ಲಾ ಥಾಪರ್ ಮತ್ತು ಹಿಂದೀ ಲೇಖಕ ರಾಜೇಂದ್ರ ಯಾದವ್ ಹೀಗೆ ತೆಗೆದುಹಾಕಲ್ಪಟ್ಟವರಲ್ಲಿ ಪ್ರಮುಖರು. ಇವರು 'ಎಡಪಂಥೀಯರು' ಎಂದು ಹಲವು ವೇದಿಕೆಗಳಿಂದ ಅನಧಿಕೃತವಾಗಿ ತರ್ಕಿಸಲಾಯಿತು.

ಇದು ಒಂದು ಖೋಟಾ ತರ್ಕ ಎಂದೇ ಹೇಳಬೇಕು. ಮೊದಲನೆಯದಾಗಿ, ತಾವು ಎಡಪಂಥೀಯರೆಂದು ಈ ಇಬ್ಬರು ಬುದ್ಧಿಜೀವಿಗಳು ಎಂದೂ ಹೇಳಿಕೊಂಡಿಲ್ಲ. ಇರಲಿ, ಅವರು ಎಡಪಂಥೀಯರೆಂದೇ ಒಪ್ಪಿಕೊಳ್ಳೋಣ ಅವರಿಗೆ ಒಪ್ಪಿಸಿದ ಕೆಲಸಕ್ಕೆ ಅವರು ಅನರ್ಹರಾಗಿದ್ದರೇ? ಈ ಪ್ರಶ್ನೆಗೆ ಕೋಮುವಾದಿ ಕೂಟ ಉತ್ತರಿಸಬೇಕಾಗಿತ್ತು. ಪ್ರೊ. ರೊಮಿಲಾ ಥಾಪರ್ ಹೆಸರಾಗಿರುವುದು ಅವರೊಬ್ಬ ಉನ್ನತ ಪ್ರತಿಭೆಯ ಇತಿಹಾಸಕಾರರು ಎಂದೇ ಹೊರತು, ಅವರು ಎಡಪಂಥೀಯರೆಂದಲ್ಲ. ಇದುವರೆಗೂ ಯಾರೂ ಅವರ ಈ ಸ್ಥಾನಮಾನವನ್ನು ಪ್ರಶ್ನಿಸುವ ಧೈರ್ಯ ಮಾಡಿಲ್ಲ. ಆದ್ದರಿಂದ ಅವರೊಂದು ವೇಳೆ ಎಡಪಂಥೀರಾಗಿದ್ದರೂ ಪ್ರಸಾರ ಭಾರತಿ ಮಂಡಳಿಯಂತಹ ಕಾವಲು ಸಂಸ್ಥೆಯಲ್ಲಿ ಇರಲು ಅನರ್ಹರಾಗಿದ್ದರೇ? ನಿಜ ಸಂಗತಿಯೆಂದರೆ ಆರ್‌ಎಸ್‌ಎಸ್ ಹತೋಟಿಯ ವಾಜಪೇಯಿ ಆಡಳಿತ ಬಿಟ್ಟು ಬೇರೆ ಯಾವುದೇ ಆಡಳಿತಕ್ಕೆ ಪ್ರೊ. ರೊಮಿಲಾ ಥಾಪರ್ ಹಾಗೂ ರಾಜೇಂದ್ರ ಯಾದವ್‌ರಂತಹ ಪ್ರಖ್ಯಾತ ವ್ಯಕ್ತಿಗಳನ್ನು ಪ್ರಸಾರ ಭಾರತಿ ಅಥವಾ ಇನ್ಯಾವುದೇ ಸಂಸ್ಥೆಯಲ್ಲಿ ಹೊಂದಿರುವುದು ಒಂದು ಸಂತೋಷದ ಸಂಗತಿಯಾಗಿರುತ್ತಿತ್ತು. ಆದರೆ ವಾಜಪೇಯಿ ಸರ್ಕಾರಕ್ಕೆ ಹಾಗಲ್ಲ. ಈ ಬುದ್ಧಿಜೀವಿಗಳು ಎಷ್ಟು ಸ್ವತಂತ್ರರು, ಜಾತ್ಯತೀತರು ಹಾಗೂ ಪ್ರಜಾಪ್ರಭುತ್ವವಾದಿಗಳೆಂದರೆ ಆರ್‌ಎಸ್‌ಎಸ್ ನ ಕೋಮುವಾದಿ ದಾರಿಯನ್ನು ಅನುಸರಿಸುವುದು ಸಾಧ್ಯವಿರಲಿಲ್ಲ.

ಆದ್ದರಿಂದ ಈಗ ಕಿರಿಚಾಡುವವರು ಮೊದಲು ನಮ್ಮ ನೇರ ಪ್ರಶ್ನೆಯನ್ನು ಉತ್ತರಿಸಬೇಕು - ಈ ಬುದ್ಧಿಜೀವಿಗಳು ಎಡಪಂಥೀಯರು ಎಂಬ ಕಾರಣಕ್ಕೆ (ಅದು ಕಾರಣವೇ ಅಲ್ಲ) ಅವರನ್ನು ಕೈಬಿಟ್ಟಿದ್ದು ಅತ್ಯಂತ ತುಚ್ಛ ಮಾದರಿಯ ಬೇಟೆಯಲ್ಲವೇ?

ನಿಜವಾದ ಪ್ರಶ್ನೆ

ಇಲ್ಲಿರುವ ನಿಜವಾದ ಪ್ರಶ್ನೆ ಯಾವುದೇ ಸೇಡು ತೀರಿಸುವುದಲ್ಲ. ಅದು ಇನ್ನೂ ಬಹಳ ಗಹನ ಪ್ರಶ್ನೆ. ಕೇಂದ್ರ ಸರ್ಕಾರದಿಂದ ನೇರ ಅಥವಾ ಪರೋಕ್ಷವಾಗಿ ಹಣ ಸಹಾಯ ಪಡೆಯುವ ಯಾವುದೇ ಸಂಸ್ಥೆಯನ್ನು ಬಿಜೆಪಿ ಆಡಳಿತ ಬಿಟ್ಟಿಲ್ಲ ಎಂಬುದು ನಮಗೆಲ್ಲಾ ಗೊತ್ತು. ತನ್ನ ಕೋಮುವಾದೀ ಅಜೆಂಡಾವನ್ನು ಕರ್ಕಶ ರೀತಿಯಲ್ಲಿ ಮುಂದೊತ್ತಲು ಈ ಎಲ್ಲಾ ಸಂಸ್ಥೆಗಳಲ್ಲಿ ಅವರ ಜನಗಳನ್ನು ತುಂಬಲಾಯಿತು. ಬಿಜೆಪಿ ತನ್ನ ಕೋಮುವಾದಿ ಪ್ರಚಾರ ನಡೆಸದೇ ಬಿಟ್ಟ ವಲಯವೇ ಇಲ್ಲ. ಎಷ್ಟೆಂದರೆ ಆರ್‌ಎಸ್‌ಎಸ್ ನ ಮಾಧ್ಯಮ ಕೋಶ ಖಾಸಗಿ ವಲಯದ ಹತೋಟಿಯ ಪತ್ರಿಕೆ ಮತ್ತು ಇತರ ಮಾಧ್ಯಮಗಳಲ್ಲೂ ತನ್ನ ಜನಗಳನ್ನು ಇಟ್ಟಿತು. ಆದರೆ ಶಿಕ್ಷಣ ಮತ್ತು ಸಂಸ್ಕೃತಿಯನ್ನು ವಿಶೇಷ



ಗಮನಕ್ಕೆ ಆರಿಸಲಾಯಿತು. ಒಂದು ಉದಾಹರಣೆ ಕೊಡುವುದಾದರೆ, ದೀಪಕ್ ಚೌರಾಸಿಯ ಎಂಬ ಆರ್‌ಎಸ್‌ಎಸ್ ಪರ ವ್ಯಕ್ತಿಯನ್ನು ಒಬ್ಬ ಸಲಹಾಗಾರನಾಗಿ ದೂರದರ್ಶನದಿಂದ ತಿಂಗಳಿಗೆ 3 ಲಕ್ಷ ರೂ.ನೀಡಿ ನೇಮಿಸಿಕೊಳ್ಳಲಾಯಿತು.

ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳೂ ರಾಜ್ಯಮಟ್ಟದಲ್ಲಿ ಅದನ್ನೇ ಮಾಡಿದವು. ಗುಜರಾತ್‌ನಲ್ಲಿ ಈಗ ನಡೆಯುತ್ತಿರುವ ಪಠ್ಯಪುಸ್ತಕ ವಿವಾದ ಇದನ್ನೇ ಎತ್ತಿ ತೋರಿದೆ. ಅಷ್ಟೇ ಅಲ್ಲ, ಇಡೀ ಆಡಳಿತ ವ್ಯವಸ್ಥೆಯನ್ನೇ ಕೋಮುಗ್ರಸ್ತಗೊಳಿಸಿದ ರಾಜ್ಯ ಎಂಬ ಕುಖ್ಯಾತಿ ಪಡೆದಿದೆ. ಇದನ್ನು ದೇಶದ ಸರ್ವೋಚ್ಛ ನ್ಯಾಯಾಲಯವೂ ತೀಕ್ಷ್ಣವಾಗಿ ಟೀಕಿಸುವಂತೆ ಮಾಡಿದೆ.

ಈ ಆರ್‌ಎಸ್‌ಎಸ್ ಪರ ಜನ ತಮ್ಮನ್ನು ಕೂಡಿಸಿದ ಮಹತ್ವದ ಸ್ಥಾನಗಳಲ್ಲಿ ಮಾಡಿದ್ದಾದರೂ ಏನು? ದೇಶದ ಶಿಕ್ಷಣ ಕ್ಷೇತ್ರದ ಪುರಾಣ ಸಂಸ್ಥೆ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ)ಯ ಉದಾಹರಣೆ ಕಣ್ಣು ತೆರೆಸುವಂತದ್ದು. ಬಿಜೆಪಿ ಆಡಳಿತ ಈ ಮಂಡಳಿಯ ನಿರ್ದೇಶಕರಾಗಿ ಪ್ರೊ. ಜೆ.ಎಸ್.ರಾಜಪೂತ್ ಎಂಬುವರನ್ನು ನೇಮಿಸಿತು. ಈ ವ್ಯಕ್ತಿ ಶಾಲಾ ಪಠ್ಯ ಪುಸ್ತಕಗಳನ್ನೇ ಕೇಸರೀಕರಿಸ ಹೊರಟರು. ಈ ಪ್ರಯತ್ನ ಎಷ್ಟು ಬಹಿರಂಗವಾಗಿ ನಡೆಯಿತೆಂದರೆ ಕಳೆದ ಐದು ವರ್ಷಗಳಲ್ಲಿ ದೇಶಾದ್ಯಂತ ಈ ಪ್ರಶ್ನೆಯ ಮೇಲೆ ಚರ್ಚೆ, ಪ್ರತಿಭಟನೆಗಳು ನಡೆದಿವೆ. ಅದೇ ರೀತಿ ಪ್ರೊ. ಗೋಪಿಚಂದ್ ನಾರಂಗ್‌ರನ್ನು ದಿಲ್ಲಿ ಸರ್ಕಾರ ದಿಲ್ಲಿ ಉರ್ದು ಅಕಾಡೆಮಿಯ ಉಪಾಧ್ಯಕ್ಷರ ಸ್ಥಾನದಿಂದ ತೆಗೆದುಹಾಕಿದರೂ ಆಗಿನ ಕೇಸರೀ ಮಾನವ ಸಂಪನ್ಮೂಲ ಮಂತ್ರಿ ಡಾ. ಮುರುಳಿ ಮನೋಹರಜೋಷಿ ಅವರನ್ನು ರಾಷ್ಟ್ರೀಯ ಉರ್ದು ಭಾಷಾ ಪ್ರೋತ್ಸಾಹ ಮಂಡಳಿಯ ಉಪಾಧ್ಯಕ್ಷರಾಗಿ ಉಳಿಸಿಕೊಂಡರು. ಅಲ್ಲಿ ಅವರು ಬಿಜೆಪಿ ಅಜೆಂಡಾವನ್ನು ಮುಂದೊತ್ತಲು ಪ್ರಯತ್ನಿಸುತ್ತಲೇ ಇದ್ದರು.

ಆದ್ದರಿಂದ ಇಲ್ಲಿರುವ ಪ್ರಶ್ನೆ ಶೈಕ್ಷಣಿಕ ಪ್ರತಿಭೆ ಅಥವಾ ವೃತ್ತಿ ಸಾಮರ್ಥ್ಯ ಅಲ್ಲ. ಅದಾಗಿದ್ದರೆ ಪ್ರೊ. ರಜಪೂತ್, ಪ್ರೊ. ನಾರಂಗ್ ರಷ್ಟು ಪ್ರತಿಭೆಯ, ವೃತ್ತಿ ಪರಿಣತಿಯ ಜನ ಬೇಕಾದಷ್ಟು ಸಿಗುತ್ತಿದ್ದರು. ನಿಜ ಸಂಗತಿಯೆಂದರೆ ಈ ವ್ಯಕ್ತಿಗಳನ್ನು ಈ ಸ್ಥಾನಗಳಿಗೆ ನೇಮಿಸಿದ್ದೇ ಕೇಸರೀ ಅಜೆಂಡಾವನ್ನು ಮುಂದೊತ್ತಲು. ಪ್ರೊ. ನಾರಂಗ್‌ರವರ ಭಟ್ಟಂಗಿತನದ ಒಂದು ಉದಾಹರಣೆ ನೋಡಿ. ಡಾ. ಜೋಷಿಯವರನ್ನು 'ಮುಜಾಹಿದ್-ಎ-ಉರ್ದು' ಅಂದರೆ ಉರ್ದು ಸೇನಾನಿ ಎಂದು ಉರ್ದು ಭಾಷಿಕ ಜನರ ಮುಂದೆ ಪ್ರಸ್ತುತಪಡಿಸುವ ಮಟ್ಟಕ್ಕೂ ಹೋದರು.

ಇನ್ನೂ ಪ್ರಮುಖ ಸ್ಥಾನಗಳಲ್ಲಿ

ಈಗಲೂ ಎಂತಹ ಬೇಸರ ತರಿಸುವ ಸಂಗತಿಯೆಂದರೆ ರಾಜಪೂತ್, ನಾರಂಗ್ ಮತ್ತಿತರ ಕೆಲವು ಆರ್‌ಎಸ್‌ಎಸ್ ವ್ಯಕ್ತಿಗಳನ್ನು ಅವರ ಸ್ಥಾನಗಳಿಂದ ಆಚೆಗೆ ಕಳಿಸಿದರೂ, ಇನ್ನೂ ಹಲವು ಆರ್‌ಎಸ್‌ಎಸ್ ಮಂದಿ ವಿವಿಧ ಸಂಸ್ಥೆಗಳಲ್ಲಿ ಇದ್ದಾರೆ, ತೆರೆಮರೆಯ ಕೆಲಸದಲ್ಲಿ ತೊಡಗಿದ್ದಾರೆ. ರಾಜಪೂತ್ ಪತ್ರಿಕೆಗಳಲ್ಲಿ ಆರ್‌ಎಸ್‌ಎಸ್ ಅಜೆಂಡಾದ ಬಗ್ಗೆ ಬರೆಯುವಲ್ಲಿ ನಿರತರಾಗಿದ್ದಾರೆ. ಇಲ್ಲೊಂದು ಸಣ್ಣ ಪಟ್ಟಿ ಕೊಡುತ್ತಿದ್ದೇವೆ. ಇದು ಸಂಪೂರ್ಣ ಪಟ್ಟಿಯೇನಲ್ಲ.

1. ಎಲ್.ಎಂ.ಸಿಂಘ್ವಿ ಸಂಸತ್ ಸದಸ್ಯ. ಅವರಿನ್ನೂ ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದಂತಹ ಪ್ರಸಿದ್ಧ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಮುಖ್ಯಸ್ಥರು.

2. ತರುಣ್ ವಿಜಯ್ ಆರ್‌ಎಸ್‌ಎಸ್‌ನ ಹಿಂದೀ ಮುಖಪತ್ರಿಕೆ 'ಪಾಂಚಜನ್ಯ'ದ ಸಂಪಾದಕರು. ಅವರು ಭಾರತೀಯ ಸಾಮೂಹಿಕ ಸಂಪರ್ಕ ಸಂಸ್ಥೆಯ ಪರಾಮರ್ಶೆ ಸಮಿತಿ ಮತ್ತು ಕಾರ್ಯಕಾರಿ ಮಂಡಳಿ ಸದಸ್ಯರು.

3. ಎಂ.ವಿ.ಕಾಮತ್ ಆರ್‌ಎಸ್‌ಎಸ್ ನ ಇಂಗ್ಲೀಷ್ ಮುಖಪತ್ರಿಕೆ 'ಆರ್ಗನೈಸರ್' ನ ಒಬ್ಬ ಅಂಕಣಕಾರ. ಅವರಿನ್ನೂ ಪ್ರಸಾರ ಭಾರತಿ ಮಂಡಳಿಯಲ್ಲಿ ಇದ್ದಾರೆ.

4. ಕಳೆದ ಸಂಸದೀಯ ಚುನಾವಣೆಗಳಲ್ಲಿ ಬಿಜೆಪಿ ಪರ ಪ್ರಚಾರ ಮಾಡಿದ ಸೋನಾಲ್ ಮಾನ್‌ಸಿಂಗ್ ಲಲಿತ ಕಲಾ ಅಕಾಡೆಮಿಯ ತನ್ನ ಸ್ಥಾನದಲ್ಲಿ ಮುಂದುರೆದಿದ್ದಾರೆ.

5. ಸುಧಾಕರ ಶರ್ಮಾ ಈ ಅಕಾಡೆಮಿಯ ಕಾರ್ಯದರ್ಶಿಯಾಗಿ ಮುಂದುವರೆದಿದ್ದಾರೆ. ಆರ್‌ಎಸ್‌ಎಸ್-ಪರ 'ಇತಿಹಾಸಕಾರ' ಎಸ್.ಪಿ.ಗುಪ್ತಾರ ಶಿಫಾರಸಿನ ಮೇಲೆ ಈತನನ್ನು ನೇಮಿಸಲಾಗಿತ್ತು. ಈ ಎಸ್.ಪಿ.ಗುಪ್ತಾ ಬಾಬ್ರಿ ಮಸೀದಿ ಸಂಬಂಧಿಸಿದ ಐತಿಹಾಸಿಕ ಸಂಗತಿಗಳನ್ನು ಅದರ ಧ್ವಂಸದ ಮೊದಲೂ ಮತ್ತು ನಂತರವೂ ತಪ್ಪಾಗಿ ನಿರೂಪಿಸುತ್ತಿದ್ದ ವ್ಯಕ್ತಿ.

6. ಅನುಪಮ್ ಖೇರ್ ಈಗಲೂ ಫಿಲ್ಮ್ ಸೆನ್ಸಾರ್ ಮಂಡಳಿಯ ಅಧ್ಯಕ್ಷನಾಗಿ ಮುಂದುವರೆಯುತ್ತಿದ್ದಾರೆ.

7. ಬಿಜೆಪಿ ಆಡಳಿತ ಶ್ರೀಮತಿ ಸರಿತಾ ಪ್ರಸಾದ್‌ರನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಹೆಚ್ಚುವರಿ ಕಾರ್ಯದರ್ಶಿಯಾಗಿ ನೇಮಿಸಿತ್ತು. ಮಾಜಿ ಗೃಹಮಂತ್ರಿ ಮತ್ತು ಉಪಪ್ರಧಾನಿ ಎಲ್.ಕೆ.ಅಡ್ವಾಣಿಯವರಿಂದಾಗಿ ಈ ನೇಮಕವಾಯಿತು. ಏಕೆಂದರೆ ಆಕೆಯ ಪತಿ ಅಜಯ್ ಪ್ರಸಾದ್ ಅಡ್ವಾಣಿಯವರ ಒಎಸ್‌ಡಿ(ವಿಶೇಷ ಕರ್ತವ್ಯ ಅಧಿಕಾರಿ)ಯಾಗಿದ್ದರು. ಆಶ್ಚರ್ಯದ ಸಂಗತಿಯೆಂದರೆ ಯುಪಿಎ ಸರ್ಕಾರ ಆಕೆಯನ್ನು ಅದೇ ಇಲಾಖೆಯಲ್ಲಿ ಕಾರ್ಯದರ್ಶಿ ಸ್ಥಾನಕ್ಕೆ ಏರಿಸಿತು.

8. ಮಾಜಿ ಮಂತ್ರಿ ಸತ್ಯನಾರಾಯಣ ಜಾಟಿಯಾರವರು ಪಿ.ಕೆ.ಜಜೋರಿಯಾರನ್ನು ಅದೇ ಇಲಾಖೆಯಲ್ಲಿ ನಿರ್ದೇಶಕರಾಗಿ ನೇಮಿಸಲಾಯಿತು. ಈ ವ್ಯಕ್ತಿ ಆರ್‌ಎಸ್‌ಎಸ್-ಬಿಜೆಪಿಗೆ ನಿಕಟವಾಗಿರುವಾತ.

9. ಇನ್ನೊಬ್ಬ ಬಿಜೆಪಿ - ಆರ್‌ಎಸ್‌ಎಸ್ ಮನುಷ್ಯ ಕಿರೀಲ್ ಪಾರೇಖ್ ಭಾರತೀಯ ತತ್ವಶಾಸ್ತ್ರ ಸಂಶೋಧನಾ ಮಂಡಳಿಯಲ್ಲಿ ಈಗಲೂ ಪ್ರಮುಖ ಸ್ಥಾನದಲ್ಲಿ ಮುಂದುವರೆಯುತ್ತಿದ್ದಾರೆ.

ಈ ವ್ಯಕ್ತಿಗಳಲ್ಲದೆ ಯುಜಿಸಿ, ಎಲ್‌ಸಿಇಆರ್‌ಟಿ, ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ, ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ, ಪ್ರಸಾರ ಭಾರತಿ, ರಾಷ್ಟ್ರೀಯ ನಾಟಕ ಶಾಲೆ, ಸಂಗೀತ-ನಾಟಕ ಅಕಾಡೆಮಿ, ಪ್ರಕಟಣಾ ವಿಭಾಗ, ಪತ್ರಿಕಾ ಮಾಹಿತಿ ಕಚೇರಿ, ಭಾರತ ಪುರಾತತ್ವ ಸರ್ವೆ, ಕೇಂದ್ರ ಹಿಂದೀ ನಿರ್ದೇಶನಾಲಯ, ರಾಷ್ಟ್ರೀಯ ಮ್ಯೂಸಿಯಂ, ನೆಹರೂ ಸ್ಮಾರಕ ಮ್ಯೂಸಿಯಂ ಮತ್ತು ಲೈಬ್ರರಿ, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ, ಭಾರತೀಯ ಉನ್ನತ ಅಧ್ಯಯನ ಸಂಸ್ಥೆ(ಶಿಮ್ಲಾ), ಹಲವಾರು ವಿಶ್ವವಿದ್ಯಾಲಯಗಳು ಮತ್ತು ಪ್ರಮುಖ ಸಂಸ್ಥೆಗಳಲ್ಲಿ ಹಲವಾರು ಮಂದಿ ಈಗಲೂ

ಪುಟ 10ಕ್ಕೆ

ಬದಲಾವಣೆ ಬಯಸಿ ಮತ ನೀಡಿದ ಯುವಜನರು ತಮ್ಮ ಬವಣೆಗಳನ್ನು ಬಗೆಹಲಿಸಬೇಕೆಂದು ರಾಜಧಾನಿಗೆ ಧಾವಿಸುತ್ತಿದ್ದಾರೆ. ನಿರುದ್ಯೋಗಿಗಳು, ಅರೆ ಉದ್ಯೋಗಿಗಳು, ಸಾಕ್ಷರತಾ ಪ್ರೇರಕರು, ಕೃಪಾಂಕ ನೌಕರರು, ಶಿಕ್ಷಕರು...... ಹೀಗೆ ಅವರ ಜ್ವಲಂತ ಸಮಸ್ಯೆಗಳತ್ತ ಒಂದು ನೋಟ. ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(DYFI) ನ ಅಧ್ಯಕ್ಷರಾದ ಕೆ.ಎಸ್.ಉಮೇಶ್‌ರವರಿಂದ



'ಕೆಲ್ಸಕೊಡಿ, ಕೊಡ್ರೀ ಕೆಲ್ಸ'

ನಿರುದ್ಯೋಗಿ ಯುವಜನರ - ಸಾಕ್ಷರತಾ ಪ್ರೇರಕರ - ಕೃಪಾಂಕ ನೌಕರರ

ಬೃಹತ್ ವಿಧಾನಸೌಧ ಚಲೋ

ಯುವಜನ ಚಳುವಳಿಯ ಧ್ರುವತಾರೆ ಡಿವೈಎಫ್‌ಐ, ತನ್ನ ಬೆಳ್ಳಿಹಬ್ಬಕ್ಕೆ ಕಾಲಿರಿಸುತ್ತಿದೆ. 2004'ರ ನವೆಂಬರ್ 3 ರಿಂದ ಡಿವೈಎಫ್‌ಐ ಬೆಳ್ಳಿಹಬ್ಬದ ಆಚರಣೆ ಆರಂಭವಾಗಲಿದೆ. ನವೆಂಬರ್ 3 ರಂದು ದೇಶಾದ್ಯಂತ ಸಂಗ್ರಹಿಸಲಾಗುತ್ತಿರುವ 2 ಕೋಟಿ ಸಹಿಸಂಗ್ರಹದೊಂದಿಗೆ ಯುವಜನತೆಯ ಶಿಕ್ಷಣ-ಉದ್ಯೋಗದ ಪ್ರಶ್ನೆಗಳಾಧಾರಿತ ಬೇಡಿಕೆಗಳನ್ನು ರಾಷ್ಟ್ರದ ಪ್ರಧಾನಿಗಳಿಗೆ ಸಲ್ಲಿಸುವ 1 ಲಕ್ಷ ಯುವಜನರ ಬೃಹತ್ ದೆಹಲಿ ಚಲೋ ಕಾರ್ಯಕ್ರಮವನ್ನು ಡಿವೈಎಫ್‌ಐ ಕೇಂದ್ರ ಕಾರ್ಯಕಾರಿ ಸಮಿತಿ ಹಮ್ಮಿಕೊಂಡಿದೆ. ರಾಜ್ಯದಿಂದ ಸುಮಾರು 2000 ಯುವಜನರನ್ನು ಈ ಚಲೋನಲ್ಲಿ ಪಾಲ್ಗೊಳಿಸುವ ತಯಾರಿ ನಡೆದಿದೆ.

ಈ ಚಳುವಳಿಯ ಭಾಗವಾಗಿ ರಾಜ್ಯದಲ್ಲಿ 5 ಲಕ್ಷ ಸಹಿಗಳನ್ನು ಸಂಗ್ರಹಿಸುವ ಕಾರ್ಯ ರಾಜ್ಯಾದ್ಯಂತ ನಡೆದಿದೆ. ದೆಹಲಿ ಚಲೋ ಪೂರ್ವಭಾವಿಯಾಗಿ ಅಕ್ಟೋಬರ್ 15 ರಂದು ಬೆಂಗಳೂರಿನಲ್ಲಿ ಬೃಹತ್ ವಿಧಾನಸೌಧ ಚಲೋ ಹಮ್ಮಿಕೊಳ್ಳಲಾಗಿದೆ. ರಾಜ್ಯಾದ್ಯಂತ ತಯಾರಿ ಭರದಿಂದ ನಡೆದಿದೆ, ವ್ಯಾಪಕ ಪ್ರತಿಕ್ರಿಯೆಯು ಉಂಟಾಗಿದೆ. ಈಗಾಗಲೇ ವಿವಿಧ ಜಿಲ್ಲೆಗಳಲ್ಲಿ ಧರಣಿ, ಮೆರವಣಿಗೆ, ಪಂಜಿನ ಮೆರವಣಿಗೆ, ಬಹಿರಂಗ ಸಹಿಸಂಗ್ರಹ ಚಳುವಳಿ ಉದ್ಘಾಟನೆ, ಮನೆ-ಮನೆಗೆ ತೆರಳಿ ಸಹಿ ಸಂಗ್ರಹ, 24 ತಾಸಿನ ಧರಣಿ ರ್‍ಯಾಲಿಗಳು ವಿಧಾನಸೌಧ ಚಲೋಗೆ ಪೂರ್ವಭಾವಿಯಾಗಿ ಜಿಲ್ಲೆಗಳಲ್ಲಿ ನಡೆದಿದೆ.

ನಿರುದ್ಯೋಗ ಭತ್ಯೆ, ಪೋಸ್ಟಲ್ ಆರ್ಡರ್ - ಡಿ.ಡಿ.ರದ್ಧತಿ

ನಿರುದ್ಯೋಗ ಭತ್ಯೆಗಾಗಿ ಅರ್ಜಿ ಶುಲ್ಕ-ಪೋಸ್ಟಲ್ ಆರ್ಡರ್-ಡಿ.ಡಿ ರದ್ಧತಿ, ಖಾಲಿ ಹುದ್ದೆಗಳ ಭರ್ತಿ, ನೇಮಕಾತಿ ಮೇಲಿನ ನಿರ್ಬಂಧ ರದ್ಧತಿ, ಖಾಲಿ ಹುದ್ದೆಗಳ ರದ್ದತಿಯ ವಾಪಸ್ಸಾತಿ, ಪ್ರೇರಕರ ಬೇಡಿಕೆಗಳು ಹಾಗೂ ಕೃಪಾಂಕ ನೌಕರರ ರಕ್ಷಣೆ ಬೇಡಿಕೆಗಳನ್ನು ಆಧರಿಸಿ ವಿಧಾನಸೌಧ ಚಲೋವನ್ನು ರಾಜ್ಯದಲ್ಲಿ ಡಿವೈಎಫ್‌ಐ ಹಮ್ಮಿಕೊಂಡಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 17,43092 ವಿದ್ಯಾವಂತ ನಿರುದ್ಯೋಗಿಗಳು, ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿದ್ದಾರೆ. ಆದರೆ 2003-04 ರಲ್ಲಿ ಈ ಕೇಂದ್ರಗಳು ಉದ್ಯೋಗಕ್ಕೆ ನಿಯೋಜಿಸಿದ ನಿರುದ್ಯೋಗಿಗಳ ಸಂಖ್ಯೆ ಕೇವಲ 2093 ಮಾತ್ರ ನೊಂದಾಯಿಸಿಕೊಂಡರೂ ಕೆಲಸ ಸಿಗುವ ಖಾತ್ರಿ ಇರದ ಕಾರಣ ನೊಂದಾಯಿಸಿಕೊಳ್ಳದ ನಿರುದ್ಯೋಗಿಗಳ ಸಂಖ್ಯೆ ಇನ್ನು ಬಹಳಷ್ಟಿದೆ. ಗ್ರಾಮೀಣ ನಿರುದ್ಯೋಗ ಸರಿ ಸುಮಾರು ಈ ಸಂಖ್ಯೆಗಿಂತ ಹೆಚ್ಚಿದೆ. ಆದರೆ ರಾಜ್ಯ-ಕೇಂದ್ರ ಸರ್ಕಾರದ ಆರ್ಥಿಕ, ಕೈಗಾರಿಕಾ ಹಾಗೂ ಕೃಷಿ ನೀತಿಗಳು ಮಾತ್ರ ಇದ್ದ ಉದ್ಯೋಗಗಳನ್ನೆ ಇಲ್ಲದಾಗಿಸುವುದರಲ್ಲಿ ನಿರತವಾಗಿವೆ. ಎಲ್ಲಾ ನೇಮಕಾತಿಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ಮಾಡಿಕೊಳ್ಳಬೇಕೆಂಬ ತಾಕೀತು ಮಾಡುವ ಧೈರ್ಯವನ್ನು ಕೇಂದ್ರ-ರಾಜ್ಯ ಸರ್ಕಾರ ತೋರುತ್ತಿಲ್ಲ. ಬದಲಾಗಿ ಉದ್ಯೋಗ ವಿನಿಮಯ ಕೇಂದ್ರಗಳನ್ನು ನಿರುಪಯುಕ್ತವೆನ್ನುವಂತೆ ಮಾಡಿ, ಆಡಳಿತ ಸುಧಾರಣೆ ಹೆಸರಿನಲ್ಲಿ ಅವುಗಳನ್ನು ಮುಚ್ಚಿಹಾಕುವ ಹುನ್ನಾರವನ್ನು ನಡೆಸಿವೆ. ಹಾರನಹಳ್ಳಿ ರಾಮಸ್ವಾಮಿ ವರದಿಯು ಇದೇ ಶಿಫಾರಸ್ಸನ್ನು ನೀಡಿದೆ.

ಹಿಂದಿನ ಕೃಷ್ಣರ ಸರ್ಕಾರವಂತು, e-governance ಹೆಸರಿನಲ್ಲಿ 'ಕಂಪು' ಯೋಜನೆ ಭಾಗವಾಗಿ, ಉದ್ಯೋಗ ವಿನಿಮಯ ಕೇಂದ್ರಗಳ ಕೆಲಸವನ್ನು ಪ್ರಾಯೋಗಿಕವಾಗಿ ಬೆಂಗಳೂರು, ಮಂಡ್ಯ, ಮೈಸೂರು, ಗುಲ್ಬರ್ಗಾ, ಹುಬ್ಬಳ್ಳಿ, ಮಂಗಳೂರುಗಳಲ್ಲಿ ಖಾಸಗಿ ಕಂಪನಿಯೊಂದಕ್ಕೆ ಗುತ್ತಿಗೆ ನೀಡಿದೆ. ಸದರಿ ಸರ್ಕಾರದ ಕಾರ್ಮಿಕ ಸಚಿವಾಲಯ "ಉದ್ಯೋಗ ಪಾರ್ಕ್"ಗಳನ್ನಾಗಿ ವಿನಿಮಯ ಕೇಂದ್ರಗಳನ್ನು ಮಾರ್ಪಡಿಸಲು ಮುಂದಾಗಿದೆ. ಎಲ್ಲಾ ನೇಮಕಾತಿಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ಮಾಡಿಕೊಳ್ಳಬೇಕೆಂದು ಪಶ್ಚಿಮ ಬಂಗಾಳ ಶಾಸನ ಸಭೆ (ಎಡರಂಗ ಸರ್ಕಾರ) ರೂಪಿಸಿದ ಶಾಸನವನ್ನು ಸುಪ್ರಿಂ ಕೋರ್ಟ್ ಅಸಿಂಧು ಎಂದು ಘೋಷಿಸಿದೆ. ಈ ಶಾಸನ ಉದಾರೀಕರಣ, ಖಾಸಗೀಕರಣ-ಜಾಗತೀಕರಣ ನೀತಿಗಳಿಗೆ ತೊಡಕುಂಟು ಮಾಡುತ್ತದಂತೆ. ಆದ ಕಾರಣ ಸಂವಿಧಾನ ಬಾಹಿರವಂತೆ! ನೋಡಿ ಹೇಗಿದೆ ಸುಪ್ರಿಂ ಕೋರ್ಟ್‌ನ ಸಂವಿಧಾನದ ಅರ್ಥೈಸುವಿಕೆ.

ಈ ನೀತಿಗಳ ಭಾಗವಾಗಿ ರಾಜ್ಯ ಸಮ್ಮಿಶ್ರ ಸರ್ಕಾರ ತನ್ನ ಮಧ್ಯಂತರ ಹಣಕಾಸು ಯೋಜನೆಯಡಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಶೇ.80 ರಷ್ಟು ಹುದ್ದೆಗಳನ್ನು ರದ್ದುಮಾಡಿದೆ. ನೇಮಕಾತಿ ಮೇಲಿನ ನಿರ್ಬಂಧವಂತು ದಶಕಗಳಿಂದ ಮುಂದುವರಿದಿದೆ.

ನವೆಂಬರ್ 3 ಕ್ಕೆ ಪಾರ್ಲಿಮೆಂಟ್ ಚಲೋ

ಇತ್ತೀಚೆಗೆ ರಾಜ್ಯ ಸರ್ಕಾರ ಸುಮಾರು 3800 ಪ್ರೌಢಶಾಲಾ ಹುದ್ದೆಗಳಿಗೆ ಸಿಇಟಿ ನಡೆಸಿದಾಗ, 87,000ಕ್ಕೂ ಹೆಚ್ಚು ಬಿ.ಎಡ್ ಪದವಿಧರರು ಪರೀಕ್ಷೆ ಬರೆದಿದ್ದಾರೆ. ಪ್ರತಿಯೊಬ್ಬರು ಅರ್ಜಿಯೊಂದಿಗೆ 200 ರೂ.ಡಿ.ಡಿ ತುಂಬಿದ್ದಾರೆ. ಪರೀಕ್ಷೆ ನಡೆಸುವುದರಿಂದಲೇ ರಾಜ್ಯ ಸರ್ಕಾರಕ್ಕೆ 1 ಕೋಟಿ 74 ಲಕ್ಷ ಹಣ ಸಂದಾಯವಾಗಿದೆ. ಅಂತೆಯೇ 5700 ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಹುದ್ದೆಗಳಿಗೆ ಪರೀಕ್ಷೆ ಬರೆದವರ ಸಂಖ್ಯೆ 1 ಲಕ್ಷದ 75 ಸಾವಿರ ನಿರುದ್ಯೋಗಿಗಳು. ಒಬ್ಬೊಬ್ಬರು 100 ರೂ. ಡಿ.ಡಿ ತುಂಬಿದ್ದಾರೆ ಇದರಿಂದ ಮತ್ತೆ 1 ಕೋಟಿ 75 ಲಕ್ಷ ಹಣ ರಾಜ್ಯ ಸರ್ಕಾರಕ್ಕೆ ಸಂದಾಯವಾಗಿದೆ. ನಾಲ್ಕು - ಐದು ವರ್ಷ ನಿರುದ್ಯೋಗಿಗಳಾಗಿ, ಅರ್ಜಿ ಮೇಲೆ ಅರ್ಜಿ ಹಾಕಿ, ಕೆಲಸ ಸಿಗದಿದ್ದರು ಇಂತಹ ಡಿ.ಡಿ. ಬೇರೆ ತುಂಬ ಬೇಕೆಂದಲ್ಲಿ ಎಂತಹ ಆರ್ಥಿಕ ಹೊರೆ ಹೊರಬೇಕಾಗಿದೆ ಈ ನಿರುದ್ಯೋಗಿಗಳು !

ಚುನಾವಣೆಗೆ ಮುನ್ನ ಯುವಜನರ ಮತಗಳನ್ನು ದೋಚುವ ಹುನ್ನಾರದ ಭಾಗವಾಗಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ 'ನಿರುದ್ಯೋಗ ಭತ್ಯೆ' ನೀಡುವ ಭರವಸೆಯನ್ನು ತನ್ನ ಪ್ರಣಾಳಿಕೆಯಲ್ಲಿ ನೀಡಿತ್ತು. ಆದರೆ ಅಧಿಕಾರಕ್ಕೆ ಮತ್ತೆ ಬಂದ ನಂತರ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಅದರ ಪ್ರಸ್ತಾಪವನ್ನು ಸಹಾ ಮಾಡಿಲ್ಲ. ಸಂಪನ್ಮೂಲದ ಕೊರತೆಯ ನೆಪವನ್ನು ನೀಡುತ್ತಿದೆ. ಚುನಾವಣೆಗೆ ಮುನ್ನ ಈ ಭರವಸೆ ನೀಡುವ ಈ ಪಕ್ಷಗಳು, ನಿರುದ್ಯೋಗ ಭತ್ಯೆ ನೀಡುವ ಕುರಿತು 2001 ರಲ್ಲಿ ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾದ ದೀಪಾಂಕರ್ ಮುಖರ್ಜಿಯವರು ಸಂಸತ್ತಿನಲ್ಲಿ ಮಂಡಿಸಿದ ಖಾಸಗಿ ಮಸೂದೆ - "ನಿರುದ್ಯೋಗ ಭತ್ಯೆ ಮಸೂದೆ"ಗೆಏಕೆ ಬೆಂಬಲ ನೀಡಲಿಲ್ಲ, ಸಂಸತ್ತು ಅದನ್ನು ಅಂಗೀಕರಿಸುವಂತೆ ಸಂಸತ್ತಿನಲ್ಲಿನ ಅಂದಿನ ಅಧಿಕೃತ ವಿರೋಧ ಪಕ್ಷವಾಗಿ ಏಕೆ ಒತ್ತಾಯಪಡಿಸಲಿಲ್ಲ ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಕಷ್ಟವೇನು ಅಲ್ಲ.

ಈ ಎಲ್ಲಾ ಹಿನ್ನಲೆಯಲ್ಲಿ ನಿರುದ್ಯೋಗಿ ಯುವಜನರ ಈ ಗಂಭೀರ ಪ್ರಶ್ನೆಗಳನ್ನು ಬೇಡಿಕೆಗಳನ್ನಾಗಿಸಿ ಡಿವೈಎಫ್‌ಐ ರಾಜ್ಯದಲ್ಲಿ ಸಹಿ-ಸಂಗ್ರಹ ಹಾಗೂ ವಿಧಾನಸೌಧ ಚಲೋ ಹಮ್ಮಿಕೊಂಡಿದೆ.

ಕೃಪಾಂಕ ನೌಕರರ ಮರುನೇಮಕ - ಶಾಶ್ವತ ಪರಿಹಾರಕ್ಕಾಗಿ

ಅವಿರತ ಹೋರಾಟದ ಪರಿಣಾಮವಾಗಿ ಮರು ನೇಮಕಾತಿಗೊಳ್ಳಲು ಕೃಪಾಂಕ ನೌಕರರು ಗಳಿಸಿದ 'ವಿಶೇಷ ನೇಮಕಾತಿ ನಿಯಮಾವಳಿಗಳಿಗೆ' ಸುಪ್ರಿಂ ಕೋರ್ಟ್ ತಡೆ ಆಜ್ಞೆ ನೀಡಿ ಬರುವ ಡಿಸೆಂಬರ್‌ಗೆ ಒಂದು ವರ್ಷವಾಗಲಿದೆ. ತಡೆ ಆಜ್ಞೆಯಿಂದಾಗಿ ಸುಮಾರು 1500 ನೌಕರರು ಮರುನೇಮಕಗೊಂಡಿಲ್ಲ. ತಡೆ ಆಜ್ಞೆ ತೆರವಿಗೆ ಕ್ರಮ ವಹಿಸಬೇಕಿದ್ದ ಸರ್ಕಾರ, ಅಗತ್ಯ ಕ್ರಮ ವಹಿಸುತ್ತಿಲ್ಲ. ಪರಿಣಾಮವಾಗಿ ವಿಚಾರಣೆ ದಿನದಿಂದ ದಿನಕ್ಕೆ ಮುಂದೂಡಲ್ಪಡುತ್ತಿದೆ. ಈ ನಡುವೆ ಆರೋಗ್ಯ ಇಲಾಖೆ ವಜಾಗೊಳ್ಳಬೇಕಾದವರ ಪಟ್ಟಿಯನ್ನು ತಡವಾಗಿ ಪ್ರಕಟಿಸಿ, ತಡೆ ಆಜ್ಞೆ ನಂತರ ವಜಾಗೊಳಿಸಿದ ಕಾರಣ ಸುಮಾರು 300 ಆರೋಗ್ಯ ಇಲಾಖೆ ಸಿಬ್ಬಂದಿ ಮರುನೇಮಕಗೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಅವರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ.

ಪುಟ 10 ಕ್ಕೆ

ಬೇಡಿಕೆಗಳು

- ಮುಂದುವರಿಕಾ ಶಿಕ್ಷಣ ಕೇಂದ್ರಗಳಿಗೆ ನಿರಂತರ ಅನುದಾನಕ್ಕಾಗಿ
- ಕೃಪಾಂಕ ನೌಕರರಿಗೆ ಸಂವಿಧಾನ ರಕ್ಷಣೆಗಾಗಿ
- ನೇಮಕಾತಿ ಮೇಲಿನ ನಿರ್ಬಂಧ ರದ್ಧತಿ - ಖಾಲಿ ಹುದ್ದೆಗಳ ಭರ್ತಿಗಾಗಿ
- ಉದ್ಯೋಗದ ಹಕ್ಕನ್ನು ಮೂಲಭೂತ ಸಂಸ್ಥೆಗಳ ಹಕ್ಕನ್ನಾಗಿಸಲು
- ರಾಷ್ಟ್ರೀಯ ಯುವಜನ ಹಾಗೂ ಕ್ರೀಡಾ ನೀತಿಗಾಗಿ
- ಸಾರ್ವಜನಿಕ ಉದ್ದಿಮೆಗಳ ಮಾರಾಟ ವಿರೋಧಿಸಿ
- ಖಾಸಗಿ ವೃತ್ತಿಪರ ಶಿಕ್ಷಣ ನಿಯಂತ್ರಣಕ್ಕೆ ಕೇಂದ್ರೀಯ ಶಾಸನಕ್ಕಾಗಿ
- ಸಮಗ್ರ ಭೂಸುಧಾರಣೆಗಾಗಿ
- ಸರ್ವರಿಗೂ ಶಿಕ್ಷಣ-ಸರ್ವರಿಗೂ ಉದ್ಯೋಗಕ್ಕಾಗಿ




ಬಾಕಿಯಿರುವ ಗೌರವಧನ ಬಿಡುಗಡೆಗೆ ಆಗ್ರಹಿಸಿ ಪ್ರೇರಕರು......

ರಾಜ್ಯದ 24 ಜಿಲ್ಲೆಗಳ 25 ನಿರಂತರ ಕಲಿಕಾ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ 31938 ಪ್ರೇರಕರು ಸಹ ಪ್ರೇರಕರು, ತಮ್ಮ ಅನೇಕ ತಿಂಗಳುಗಳ ಬಾಕಿಯಿರುವ ಗೌರವಧನ ಬಿಡುಗಡೆ ಗೌರವಧನ ಹೆಚ್ಚಳ, ವಾರದ ರಜೆ- ಹೆರಿಗೆ ರಜೆ, ಸ್ವಸಹಾಯ ಸಂಘಗಳ ರಚನೆಗೆ ಭತ್ಯೆ, ವಿಮಾ ಯೋಜನೆ, ಕೇಂದ್ರಗಳಿಗೆ ಅಗತ್ಯ ಪೀಠೋಪಕರಣ, ಪತ್ರ್ಯ, ಆಟೋಪಕರಣ ಮತ್ತು ಗ್ರಂಥಭಂಡಾರ, ಕಟ್ಟಡ, ಬಾಡಿಗೆ, ಬೆಳಕಿನ ವ್ಯವಸ್ಥೆ ಮುಂತಾದ ಬೇಡಿಕೆಗಳಿಗೆ ಆಗ್ರಹಿಸಿ ವರ್ಷದ ಹಿಂದೆಯೇ ವಿಧಾನಸೌಧ ಚಲೋ ನಡೆಸಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ರಾಜ್ಯ ಸರ್ಕಾರ ಅಗತ್ಯ ಕ್ರಮ ವಹಿಸಲಿಲ್ಲ. ನೂತನ ಸಮ್ಮಿಶ್ರ, ಸರ್ಕಾರದ ಗಮನ ಸೆಳೆಯಲು ಆಗಸ್ಟ್ ತಿಂಗಳಾದ್ಯಂತ ವಿವಿಧ ಜಿಲ್ಲೆಗಳಲ್ಲಿ ವಿವಿಧ ದಿನಗಳಂದು, ವಿವಿಧ ರೀತಿಯ ಹೋರಾಟಗಳನ್ನು ಕರ್ನಾಟಕ ರಾಜ್ಯ ಪ್ರೇರಕರ ಸಂಘ ಮತ್ತು ಡಿವೈಎಫ್‌ಐ ನೇತೃತ್ವದಲ್ಲಿ ಪ್ರೇರಕರು ನಡೆಸಿದ್ದರು. ಪರಿಣಾಮವಾಗಿ ಕೆಲವು ಜಿಲ್ಲೆಗಳಲ್ಲಿ ಕೆಲವು ತಿಂಗಳ ಗೌರವಧನ ಬಿಡುಗಡೆಯಾಗಿದೆ.

ತಮ್ಮ ಹೋರಾಟದ ಮುಂದುವರಿಕೆಯಾಗಿ ರಾಜ್ಯಾದ್ಯಂತ ಸೆಪ್ಟೆಂಬರ್ ತಿಂಗಳಲ್ಲಿ ಸಹಿಸಂಗ್ರಹ ಚಳುವಳಿ ನಡೆಸಿ, ಅಕ್ಟೋಬರ್ 15'ರ ವಿಧಾನಸೌಧ ಚಲೋನಲ್ಲಿ ಭಾಗವಹಿಸುತ್ತಿದ್ದಾರೆ. ಅಂತೆಯೇ ಅಕ್ಟೋಬರ್ 16 ರಂದು ಲೋಕಶಿಕ್ಷಣ ನಿರ್ದೇಶನಾಲಯ ಕಛೇರಿ ಎದುರು 'ಸಾಮೂಹಿಕ ಪ್ರತಿಭಟನಾ ಧರಣಿ' ಹಮ್ಮಿಕೊಂಡಿದ್ದಾರೆ. ನವೆಂಬರ್ 4 ರಂದು ನವದೆಹಲಿಯಲ್ಲಿನ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರ ಕಛೇರಿ ಎದುರು ಧರಣಿಗೂ ತಯಾರಿ ನಡೆಸಿದ್ದಾರೆ.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ 7ನೇ ಸಮ್ಮೇಳನ

ಉಡುಪಿಯಲ್ಲಿ ಜರುಗಿದ ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನ, ಕೈಗಾರಿಕಾ ಸ್ಥಿತಿ, ಕಾರ್ಮಿಕರ ಪರಿಸ್ಥಿತಿ ಮುಂತಾಗಿ ಚರ್ಚಿಸಿ, ಚಳುವಳಿ ವಿಶಾಲವಾಗಿ ಬೆಳೆಸುವ ಹುಮ್ಮಸ್ಸು ತೋರಿತು.



ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ ಜಾರಿಗೆ ಆಗ್ರಹ
ಕೋಮುವಾದ, ಮೂಲಭೂತವಾದ ವಿರೋಧಿಸಲು ಕರೆ

"ಬೀಡಿ ಕೈಗಾರಿಕೆಯಲ್ಲಿ ದುಡಿಯುವ ಕಾರ್ಮಿಕರಿಗೆ ದೇಶದಲ್ಲಿ ಒಂದೇ ರೀತಿಯ ಸಮಾನ ವೇತನ, ಕಾನೂನಿನ ಎಲ್ಲಾ ರೀತಿಯ ಸವಲತ್ತುಗಳನ್ನು ಜ್ಯಾರಿಗೊಳಿಸಬೇಕಾದ ಅಗತ್ಯವಿದೆ. ಬೀಡಿ ಕಾರ್ಮಿಕರ ಬಲಿಷ್ಠ ಸಂಘಟನೆ, ಚಳುವಳಿ ಹೋರಾಟವನ್ನು ಬೆಳೆಸುವ ಮೂಲಕವೇ ಕಾರ್ಮಿಕ ಸಂಘಟನೆಗಳು ಮುಂದುವರಿಯಬೇಕು ಎಂದು ಕರ್ನಾಟಕ ರಾಜ್ಯ ಬೀಡಿ ಫೆಡರೇಷನ್ ಅಧ್ಯಕ್ಷರಾದ ಕಾಂ.ವಿ.ಜೆ.ಕೆ. ನಾಯರ್ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ತಿಳಿಸಿದರು.

ಅವರು ದಿನಾಂಕ 1.10.2004 ರಂದು ಉಡುಪಿಯ ಬಿಲ್ಲವರ ಸೇವಾಸಂಘದ "ಶಿವಗಿರಿ" ಸಭಾಗೃಹದಲ್ಲಿ ಜರುಗಿದ ಕರ್ನಾಟಕ ರಾಜ್ಯ ಬೀಡಿ ಫೆಡರೇಷನ್ನಿನ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಸಮ್ಮೇಳನವನ್ನು ಉದ್ಘಾಟನೆ ಮಾಡಿದ ಸಿ.ಐ.ಟಿ.ಯು ರಾಜ್ಯಸಮಿತಿಯ ಅಧ್ಯಕ್ಷರಾದ ಕಾಂ.ಬಿ.ಮಾಧವ ಅವರು 1940 ರಿಂದಲೇ ಬೀಡಿ ಕಾರ್ಮಿಕರ ಸಂಘಟನೆ, ಚಳುವಳಿ, ಹೋರಾಟಗಳು

ಡೇವಿಡ್ ಕರ್ಕಡ / ಕೆ.ಶಂಕರ್

ಬೆಳೆದುಬರಲು ಅಂದಿನ ದಿನಗಳಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಧ್ಯಾಯ, ಜಿ.ಹರಿದಾಸ ಆಚಾರ್ಯ, ಸಿ.ಕಣ್ಣನ್ ಮೊದಲಾದ ನಾಯಕರ ಕೊಡುಗೆ ತ್ಯಾಗ ಅಪಾರವಾದುದು. ಅಂದಿನ ಕರಾಳ ದಿನಗಳಲ್ಲಿ ಕಾರ್ಮಿಕರು ಕೂಲಿ ಹೆಚ್ಚಳ, ಬೋನಸ್ ಮೊದಲಾದ ಸವಲತ್ತುಗಳನ್ನು ಪಡೆಯುವಲ್ಲಿ ಸಫಲರಾಗಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ನಡೆಸಲಾದ ಈ ಹೋರಾಟಗಳಲ್ಲಿ ಕಾರ್ಮಿಕರು ತೋರಿದ ಧೈರ್ಯ ಸಾಹಸಗಳನ್ನು ನಾವಿಂದು ಸ್ಮರಿಸಬೇಕು. ಸಂಘಟನೆ ಬಲಿಷ್ಠಗೊಳಿಸಲು ಮುಂದಾಗಬೇಕಾಗಿದೆ" ಎಂದರು.

ಮುಖ್ಯ ಅತಿಥಿಗಳಾಗಿ ಸಮ್ಮೇಳನದಲ್ಲಿ ಪ್ರಸನ್ನ ಕುಮಾರ್ ಮತ್ತು ದುಡಿಯುವ ಮಹಿಳೆಯರ ಸಂಘಟನೆ ಸಮಿತಿಯ ಸಂಚಾಲಕಿ ಕಾಂ.ವರಲಕ್ಷ್ಮಿ ಮಾತನಾಡುತ್ತಾ "ಕೋಮುವಾದದ ಅಪಾಯದ ಕುರಿತು ವಿವರಿಸಿ ಸಂಘಟಿತ ಕಾರ್ಮಿಕರು ವದಂತಿಗಳಿಗೆ ಬಲಿಯಾಗದೆ ಎಲ್ಲಾ ವಿಧದ ಬಹುಸಂಖ್ಯಾತ ಕೋಮುವಾದ ಮತ್ತು ಅಲ್ಪಸಂಖ್ಯಾತ ಮೂಲಭೂತವಾದದ ವಿರೋಧವಾಗಿ ಹೋರಾಡಲು ಮುಂದೆ ಬರಬೇಕಾಗಿದೆ. ಕೋಮುವಾದದ ಮೊದಲ ಬಲಿಪಶು ಮಹಿಳೆಯೇ ಆಗಿದ್ದಾರೆ ಎಂದರು. ಕಾರ್ಮಿಕರ ಸಮಸ್ಯೆಗಳಿಗೆ ವರ್ಗ ಹೋರಾಟದ ಮೂಲಕವೇ ಪರಿಹಾರ ಸಾಧ್ಯವಿದೆಯಲ್ಲದೆ ಕೋಮುವಾದದ ವಿಷ ಪ್ರಚಾರದಿಂದ ನಮ್ಮ ದೇಶ ಸರ್ವನಾಶವಾಗಿ ಅವನತಿಯತ್ತ ಸಾಗಬಹುದು ಎಂದರು.

ನಿರ್ಣಯಗಳು : ರಾಷ್ಟ್ರೀಯ ಕನಿಷ್ಠ ಕೂಲಿ ಸವಲತ್ತುಗಳಿಗಾಗಿ ಒತ್ತಾಯಿಸುವ ಮತ್ತು ಕೋಮುವಾದದ ಅಪಾಯವನ್ನು ಅರಿತು ಅದರ ವಿರೋದವಾಗಿ ಪ್ರಚಾರ ನಡೆಸುವಂತೆ ಕರೆ ನೀಡುವ ಇವೇ ಮೊದಲಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಪ್ರಾರಂಭದಲ್ಲಿ ಕಾಂ.ಮಹಾಬಲ ಒಡೇರ ಹೋಬಳಿ ಪ್ರಾಸ್ತಾವಿಕ ಭಾಷಣ ಮಾಡಿ ಅತಿಥಿಗಳನ್ನು ವೇದಿಕೆಗೆ ಆಮಂತ್ರಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಎನ್.ಸಂಜೀವ ಜತ್ತನ್ ಸ್ವಾಗತ ಭಾಷಣ ಮಾಡಿದರು. ಸ್ವಾಗತ ಸಮಿತಿಯ ಕಾರ್ಯದರ್ಶಿ ಎನ್.ಸಾಧು ಅಮೀನ್ ಉಪಸ್ಥಿತರಿದ್ದರು. ರಾಜ್ಯ ಬೀಡಿ ಫೆಡರೇಷನ್ ಕಾರ್ಯದರ್ಶಿ ಕಾಂ.ಕೆ.ಶಂಕರ ಮೊದಲಾದವರು ಉಪಸ್ಥಿತರಿದ್ದರು. ಕೊನೆಯಲ್ಲಿ ಕಾಂ.ಹೆಚ್.ವಿಠ್ಠಲ ಪೂಜಾರಿಯವರು ವಂದನಾರ್ಪಣೆ ಮಾಡಿದರು.

ಅಧಿವೇಶನ ಹಾಗೂ ನೂತನ ಸಮಿತಿ

2004 ಅಕ್ಟೋಬರ್ 1 ರಂದು ಕರ್ನಾಟಕ ಸ್ಟೇಟ್ ಬೀಡಿ ವರ್ಕರ್ಸ್ ಫೆಡರೇಷನ್ (ಸಿಐಟಿಯು) 7ನೇ ಸಮ್ಮೇಳನದ ಉದ್ಘಾಟನೆ ಕಾರ್ಯಕ್ರಮ ನಡೆದ ಬಳಿಕ ಕಾಂ.ವಿ.ಜೆ.ಕೆ. ನಾಯರ್‌ರವರ ಅಧ್ಯಕ್ಷತೆಯಲ್ಲಿ ಪ್ರತಿನಿಧಿ ಸಮ್ಮೇಳನ ನಡೆಯಿತು. 46,000 ಸದಸ್ಯರನ್ನು ಪ್ರತಿನಿಧಿಸಿ 123 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಆರಂಭದಲ್ಲಿ ಅಗಲಿದ ಕಾರ್ಮಿಕ ಮುಂದಾಳುಗಳಿಗೆ ಹಾಗೂ ಕಾರ್ಯಕರ್ತ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಬಳಿಕ ಕರಡು ವರದಿಯನ್ನು ಕಾರ್ಯದರ್ಶಿ ಕೆ.ಶಂಕರ್ ಮಂಡಿಸಿದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಬೀಡಿ ಕಾರ್ಮಿಕರ ಸಂಘಟನೆ ಮತ್ತು ಹೋರಾಟದ ಮಹತ್ವದ ಕುರಿತು ವಿವರಿಸಿದರು.

36 ಮಂದಿ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಚರ್ಚೆಯ ಬಳಿಕ ತಿದ್ದುಪಡಿಗಳನ್ನು ಒಳಗೊಂಡು ವರದಿಯು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಮ್ಮೇಳನದಲ್ಲಿ ನೂತನ ಸಮಿತಿಯನ್ನು ಆರಿಸಲಾಯಿತು.

ಪ್ರಧಾನ ಕಾರ್ಯದರ್ಶಿಯಾಗಿ ಸಯ್ಯದ್ ಮುಜೀಬರನ್ನು ಆಯ್ಕೆ ಮಾಡಲಾಯಿತು. ಕಾಂ.ಕೆ.ಶಂಕರ್, ಬಾಲಕೃಷ್ಣಶೆಟ್ಟಿ, ಮಹ್ಮದ್ ದಸ್ತಗೀರ್, ಉಪಾಧ್ಯಕ್ಷರಾಗಿ ಮಹಾಬಲ ಒಡೇರಹೋಬಳಿ, ವರಲಕ್ಷ್ಮಿ ಎಸ್, ಪದ್ಮಾವತಿಯವರನ್ನು ಕಾರ್ಯದರ್ಶಿಗಳಾಗಿ, ಕಾಂ.ಸುಕುಮಾರ್ ಖಜಾಂಚಿಯಾಗಿ ಆಯ್ಕೆಯಾದರು.

ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಸಮಾನ ಕೂಲಿ ಮತ್ತು ಕಾಯಿದೆಬದ್ಧ ಸವಲತ್ತುಗಳಿಗೆ ಆಗ್ರಹ

ರಾಜ್ಯವ್ಯಾಪಿ ಐಕ್ಯಹೋರಾಟಕ್ಕೆ ಬೀಡಿ ಕಾರ್ಮಿಕರ ಸಮ್ಮೇಳನದ ಕರೆ. ಉಡುಪಿ 2.10.2004. ಕರ್ನಾಟಕ ಸ್ಟೇಟ್ ಬೀಡಿ ವರ್ಕರ್ಸ್ ಫೆಡರೇಶನ್ನಿನ 7ನೇ ಸಮ್ಮೇಳನವು ಅಕ್ಟೋಬರ್ 1 ಮತ್ತು 2 ರಂದು ಬನ್ನಂಜೆ ಬಿಲ್ಲವರ ಸೇವಾ ಸಂಘದ "ಶಿವಗಿರಿ" ಸಭಾ ಗೃಹದಲ್ಲಿ ನಡೆಯಿತು.

ಬಹಿರಂಗ ಅಧಿವೇಶನವು ಶ್ರೀ ನಾರಾಯಣ ಗುರು ಸಭಾಭವನದಲ್ಲಿ ಶ್ರೀ ಎನ್.ಸಾಧು ಅಮೀನರ ಅಧ್ಯಕ್ಷತೆಯಲ್ಲಿ ಜರುಗಿತು.

ವಾರದಲ್ಲಿ 6 ದಿನಗಳ ಕೆಲಸ, ಕನಿಷ್ಠ ಕೂಲಿ, ತುಟ್ಟಿಭತ್ಯೆ ಸೇರಿದಂತೆ ಜ್ಯಾರಿಗೊಳಿಸಬೇಕು. ರಾಷ್ಟ್ರೀಯ ಸಮಾನ ಕೂಲಿಯನ್ನು ನಿರ್ಧರಿಸಬೇಕು ಎನ್ನುವ ಘೋಷಣೆಗಳೊಂದಿಗೆ ನೂರಾರು ಮಂದಿ ಮಹಿಳಾ ಬೀಡಿ ಕಾರ್ಮಿಕರು ಉಡುಪಿಯ ಪುರಭವನದ ಬಳಿಯಿಂದ ನಗರದಲ್ಲಿ ಸಾಗಿಬಂದ ನಂತರ ಅಧಿವೇಶನದ ಕಲಾಪಗಳು ಸಂಜೆಗೆ ಆರಂಭವಾಯಿತು.

ಪ್ರತಿನಿಧಿ ಸಮ್ಮೇಳನದಲ್ಲಿ ಕೈಗೊಳ್ಳಲಾದ ನಿರ್ಣಯಗಳನ್ನು ನೂತನ(ರಾಜ್ಯ) ಕಾರ್ಯದರ್ಶಿ ಶ್ರೀ ಸಯ್ಯದ್ ಮುಜಿಬ್‌ರವರು ವಿವರಿಸಿ ಮುಂದಕ್ಕೆ ರಾಜ್ಯವ್ಯಾಪಿಯಾದ ಐಕ್ಯ ಹೋರಾಟದ ಮೂಲಕವೇ ನ್ಯಾಯ ಪಡೆಯಲು ಅಣಿಯಾಗುವಂತೆ ಕಾರ್ಮಿಕರಿಗೆ ಕರೆ ನೀಡಿದರು.

ಕರ್ನಾಟಕ ರಾಜ್ಯದ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಎಸ್.ವರಲಕ್ಷ್ಮಿಯವರು ಮಹಿಳಾ ಕಾರ್ಮಿಕರು ದುಡಿಯುವ ಕೈಗಾರಿಕೆಗಳಲ್ಲಿ ಮಹಿಳಾ ಕಾರ್ಮಿಕರ ಸುಲಿಗೆ, ಶೋಷಣೆ ನಡೆಯುತ್ತಲೇ ಇದೆ. ಮಹಿಳೆಯರನ್ನು ಗೌರವದಿಂದ ನಡೆಸಿಕೊಳ್ಳುವುದಿಲ್ಲ ಬದಲಾಗಿ ಅವರಿಗೆ ಕಿರುಕುಳಗಳನ್ನು ನೀಡಲಾಗುತ್ತಿದೆ. ಅವಮಾನಗಳನ್ನು ಸಹಿಸಿಕೊಳ್ಳಬೇಕಾಗಿದೆ. ದೌರ್ಜನ್ಯ, ಶೋಷಣೆ, ಅತ್ಯಾಚಾರಗಳಂತಹ ಸಮಸ್ಯೆಗಳಲ್ಲಿ ವಿಮುಕ್ತಿ ಪಡೆಯಲು ಮಹಿಳೆಯರಲ್ಲಿ ಸಂಘಟನಾ ಜಾಗೃತಿ ಮೂಡಿ ತಿಳುವಳಿಕೆ ಪಡೆಯುವಂತಾಗಬೇಕು ಎಂದರು. "ಎಲ್ಲಾ ವಿಭಾಗದ ದುಡಿಯುವ ಮಹಿಳೆಯರನ್ನು ಸಮಾಜ ಗೌರವದಿಂದ ಕಾಣುವಂತಾಗಬೇಕು. ಇದಕ್ಕೆ ನಿರಂತರವಾದ ಪ್ರಚಾರ ಮತ್ತು ಹೋರಾಟದ ಅಗತ್ಯವಿದೆ ಎಂದರು.

ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಬಿ.ಮಾಧವ ಅವರು "ದೇಶದಲ್ಲಿ ಒಂದೇ ರೀತಿಯ ಸಮಾನ ಕೂಲಿ ಬೀಡಿ ಕಾರ್ಮಿಕರಿಗೆ ನಿಗದಿಪಡಿಸಿ ಜಾರಿಗೊಳಿಸುವಂತೆ ಕಾರ್ಮಿಕರು ಶಿಸ್ತಿನ ಸಂಘಟನೆ, ಪ್ರಜ್ಞೆಯನ್ನು ಹೆಚ್ಚಿಸಲು ಬೀಡಿ ಕಾರ್ಮಿಕರ ಸಂಘಗಳು ಗಮನ ವಹಿಸಬೇಕು. ಕೋಮುವಾದಿಗಳ ಅಟ್ಟಹಾಸಕ್ಕೆ ಬಲಿಯಾಗದೆ ವರ್ಗವಾಗಿ ಎಚ್ಚೆತ್ತು ಕಾರ್ಮಿಕರಲ್ಲಿ ಜಾಗೃತಿ ಮೂಡಿಸುವ ಮೂಲಕ ನಮ್ಮ ಗುರಿಯತ್ತ ಮುಂದೆ ಸಾಗೋಣ" ಎಂದರು.

ವೇದಿಕೆಯಲ್ಲಿ ಕೆ.ಶಂಕರ, ಪಿ.ವಿಶ್ವನಾಥ ರೈ, ಎನ್.ಸಂಜೀವ ಜತ್ತನ್ ಮೊದಲಾದವರಿದ್ದರು.

ಅಗಲಿದ ನಾಯಕರೆಲ್ಲರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪ್ರಾರಂಭದಲ್ಲಿ ರಮೇಶ ಮೆಂಡನ್ನರು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಮಹಾಬಲ ಒಡೇರ ಹೋಬಳಿ ಧನ್ಯವಾದ ಸಲ್ಲಿಸಿದರು.



ಅಖಿಲ ಭಾರತ ಬೀಡಿ ಸಮ್ಮೇಳನದ 'ಮಾಧ್ಯಮ ಸಮಿತಿ' ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ


ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ ಭರದಿಂದ ಸಿದ್ಧತೆ ನಡೆದಿದೆ. ವಿವಿಧ ಕೆಲಸಗಳನ್ನು ಸಮರ್ಥವಾಗಿ ನಡೆಸಲು ಕೆಲಸ ಹಂಚಿಕೆಯಾಗಿ ಅದಕ್ಕಾಗಿ ಹಲವು ಸಮಿತಿಗಳ ರಚನೆಯಾಗಿದೆ.

4ನೇ ಅಖಿಲ ಭಾರತ ಬೀಡಿ ಸಮ್ಮೇಳನದ ಅಂಗವಾಗಿ ರೂಪಿಸಿರುವ ಮಾಧ್ಯಮ ಸಮಿತಿಯು ಸಂಚಾಲಕರಾದ ವಸಂತ ಆಚಾರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ನಡೆಸಲು ಉದ್ದೇಶಸಲಾಗಿದೆ.

ಸುಮಾರು 34 ಪ್ರಿಂಟ್ ಮತ್ತು ದೃಶ್ಯ ಶ್ರವ್ಯ ಮಾಧ್ಯಮಗಳನ್ನು ಗುರುತಿಸಿ ಪ್ರತಿನಿತ್ಯ ವರದಿಗಳನ್ನು ವಿತರಿಸಲು ತೀರ್ಮಾನಿಸಲಾಗಿದೆ. ಹೊರ ರಾಜ್ಯಗಳ ಕನ್ನಡ ಪತ್ರಿಕೆಗಳಿಗೆ ಮಾತ್ರವಲ್ಲದೆ ಪಕ್ಷದ ಮುಖವಾಣಿಗಳಿಗೂ ವರದಿ ನೀಡಲು ಉದ್ದೇಶಿಸಲಾಗಿದೆ. ಸಮ್ಮೇಳನದ ಪೂರ್ವದಲ್ಲಿ ಮೂರು ಪತ್ರಿಕಾಗೋಷ್ಠಿ ಹಾಗೂ ರಾಷ್ಟ್ರೀಯ ನಾಯಕರುಗಳಿಂದ ಮತ್ತು ಮೂರು ಪ್ರತ್ಯೇಕ ವಿಚಾರಗೋಷ್ಠಿಗಳ ವ್ಯವಸ್ಥೆ ಮಾಡಲಾಗಿದೆ. ಮಾಧ್ಯಮ ರಂಗದೊಂದಿಗೆ ದುಡಿದು ಅನುಭವವಿರುವ ನಾಲ್ಕು ಸಂಗಾತಿಗಳು ನಿರಂತರವಾಗಿ ಪ್ರತಿದಿನದ ಬೆಳವಣಿಗೆಗಳನ್ನು ವರದಿ ಮಾಡುವ ಜವಾಬ್ದಾರಿ ವಹಿಸಲಾಗಿದೆ. ಲೇಖನಗಳು ಹಾಗೂ ಸಂದರ್ಶನಗಳಿಗೂ ವ್ಯವಸ್ಥೆ ಕಲ್ಪಿಸಲಾಗಿದ್ದು ಇಬ್ಬರು ಸಂಗಾತಿಗಳು ವರದಿ ವಿತರಣೆಗೆ ಪೂರ್ಣಕಾಲಿಕವಾಗಿ ದುಡಿಯಲಿದ್ದಾರೆ.

ನವೆಂಬರ್‌ದಿಂದ 4 ರ ತನಕ ಮಾಧ್ಯಮ ಕೇಂದ್ರವನ್ನು ಸಮ್ಮೇಳನದ ಸಭಾಂಗಣದಲ್ಲಿ ಪೂರ್ಣ ಪ್ರಮಾಣದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇಂದಿನ ಸಭೆಯಲ್ಲಿ ಕೃಷ್ಣಪ್ಪ ಕೊಂಚಾಡಿ, ಕೆ.ಯಾದವಶೆಟ್ಟಿ, ನಾಗೇಶ್ ಕುಮಾರ್, ಸುನೀಲ್ ಕುಮಾರ ಬಜಾಲ್, ಅಶೋಕ ಕೊಂಚಾಡಿ, ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಸುಕುಮಾರ್, ಪತ್ರಕರ್ತ ಟಿ.ಕೆ.ಕುಮಾರ್ ಭಾಗವಹಿಸಿದರು.

ಮುಖ್ಯಮಂತ್ರಿಗಳೇ ನಮ್ಮ ಸಂಕಟದ ಧ್ವನಿ ಕೇಳಿಸಿತೇ ?



ರ್‍ಯಾಲಿ ಆಗ್ರಹ

ರಾಜಧಾನಿಗೆ ಲಗ್ಗೆ ಹಾಕಿದ ಸಹಸ್ರಾರು ರೈತರು-ಕೂಲಿಕಾರರು ತಾವು ಸಂಕಷ್ಟದಿಂದ ಬಳಲುತ್ತಿರುವಾಗ ಈ ಸರ್ಕಾರ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದರು, ಎಚ್ಚರಿಸಿದರು. ಸಂಕಟಗಳ ಸಾಗರವೇ ನೆರೆದಿದ್ದ ಇಲ್ಲಿ ಕೃಷಿ ಬಿಕ್ಕಟ್ಟಿನ ಬಗ್ಗೆ ಚಿಂತನ-ಮಂಥನ ನಡೆಸಿ, ಹೋರಾಡುವ ಸಂಕಲ್ಪ ಮಾಡಿದರು. ಇದರ ವರದಿ ರೈತ ಸಂಘದ ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಯು.ಬಸವರಾಜ್‌ರವರಿಂದ

ಜಿನೆವಾದ WTO ಸಭೆಯ ನಿರ್ಣಯಗಳ ಜಾರಿಗೆ ಅಖಿಲ ಭಾರತ ರೈತ ಸಂಘ ವಿರೋಧ

- ಎಸ್.ರಾಮಚಂದ್ರನ್ ಪಿಳ್ಳೆ

ಈಚೆಗೆ ಜಿನೇವಾದಲ್ಲಿ ನಡೆದ ವಿಶ್ವವಾಣಿಜ್ಯ ಸಂಘಟನೆಯ ಸಚಿವ ಮಟ್ಟದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಭಾರತ ಜಾರಿಗೆ ತರುವುದೆಂದು ಹೇಳಿರುವ ವಾಣಿಜ್ಯ ಮಂತ್ರಿ ಕಮಲನಾಥ ತ್ರಿಪಾಟಿಯವರ ಹೇಳಿಕೆಯನ್ನು ಖಂಡಿಸಿರುವ ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರ ಅಧ್ಯಕ್ಷರಾದ ಶ್ರೀ ರಾಮಚಂದ್ರನ್ ಪಿಳ್ಳೆರವರು ಭಾರತ ಸರ್ಕಾರದ ಈ ಕ್ರಮವನ್ನು ಅಖಿಲ ಭಾರತ್ ಕಿಸಾನ್ ಸಭಾ ವಿರೋಧಿಸುತ್ತದೆಂದು ಪ್ರಕಟಿಸಿದರು. ಅದೇ ರೀತಿ ಕರ್ನಾಟಕ ರಾಜ್ಯದ ರೈತರು ಅದನ್ನು ಪ್ರತಿರೋಧಿಸಬೇಕೆಂದು ಬೃಹತ್ ಬಹಿರಂಗ ಸಭೆಯಲ್ಲಿ ಕರೆ ನೀಡಿದರು!

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಗಳು ಜಂಟಿಯಾಗಿ ಬೆಂಗಳೂರಿನ ಬನ್ನಪ್ಪ ಪಾರ್ಕ್‌ನಲ್ಲಿ ಸಂಘಟಿಸಿದ್ದ ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾಡನಾಡುತ್ತಿದ್ದರು.

ಈಗಲೂ ಮುಂದುವರೆದ ದೇಶಗಳು ಬೇರೆ ಬೇರೆ ಹೆಸರಿನಲ್ಲಿ ಭಾರಿ ಪ್ರಮಾಣದಲ್ಲಿ ಆ ದೇಶದ ಕೃಷಿ ಉತ್ಪನ್ನಗಳಿಗೆ ಭಾರಿ ಪ್ರಮಾಣದ ಸಬ್ಸಿಡಿ ನೀಡುವುದನ್ನು ಮುಂದುವರೆಸುತ್ತಿರುವುದರಿಂದ ಭಾರತದ ರೈತರು - ಕೂಲಿಕಾರರು ಅವುಗಳನ್ನು ಎದುರಿಸಲಾರರೆಂದು ತಿಳಿಸಿದರು! ಮುಂದುವರೆದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳು ಈ ಕುರಿತ ಪರಾಮರ್ಶೆಗೆ ಮುಂದಾಗಬೇಕೆಂದು ಅವರು ಒತ್ತಾಯಿಸಿದರು. ಪರಿಸ್ಥಿತಿ ಹೀಗಿರುವಾಗ ವಿದೇಶದಿಂದ ಆಮದಾಗುವ ಉತ್ಪನ್ನಗಳಿಗೆ ಮತ್ತಷ್ಟು ಆಮದು ಶುಲ್ಕ ಕಡಿತ ಮಾಡಲಾಗುವುದೆಂಬ ಭಾರತ ಸರ್ಕಾರದ ಕ್ರಮ ಇನ್ನಷ್ಟು ಭಾರತದ ಕೃಷಿಗೆ ಹಾನಿ ಉಂಟು ಮಾಡುವಂತಹದ್ದಾಗಿದೆಯೆಂದು ರಾಮಚಂದ್ರನ್ ಪಿಳ್ಳೆ ವಿವರಿಸಿದರು. ಕೂಡಲೇ ಭಾರತ ಸರ್ಕಾರ ಜಿನೆವಾ ಒಪ್ಪಂದದ ಜಾರಿಯನ್ನು ಹಾಗೂ ಆಮದು ಶುಲ್ಕ ಕಡಿತವನ್ನು ನಿಲ್ಲಿಸಬೇಕೆಂದು ಬೃಹತ್ ಬಹಿರಂಗ ಸಭೆ ಮೂಲಕ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಈ ಹಿಂದಿನ ಕಾಂಕೂನ್ ಸಭೆಯಲ್ಲಿ ಭಾರತ ಅಭಿವೃದ್ಧಿ ಹೊಂದುತ್ತಿರುವ 3ನೇ ಜಗತ್ತಿನ ರಾಷ್ಟ್ರಗಳ ಜೊತೆ ಸೇರಿ, ಅಮೆರಿಕಾ ನೇತೃತ್ವದ ಮುಂದುವರೆದ ದೇಶಗಳು ಹೇರುತ್ತಿರುವ ಅಸಮಾನ ಒಪ್ಪಂದಗಳನ್ನು ತೀವ್ರವಾಗಿ ಪ್ರತಿರೋಧಿಸಿದ ಕ್ರಮ ಪ್ರಗತಿಯ ಹಾದಿಯಲ್ಲಿತ್ತೆಂದ ಅವರು, ಆದರೆ ಈ ಬಾರಿ ಅಮರಿಕ ಹಾಗೂ ಮತ್ತಿತರೆ ಮುಂದುವರೆದ ದೇಶಗಳ ಜೊತೆ ಕೈಜೋಡಿಸಿ ಈ ಅಸಮಾನ ಒಪ್ಪಂದದ ಜಾರಿಗೆ ಹಾದಿ ಮಾಡಿಕೊಟ್ಟಿದ್ದನ್ನು ತೀವ್ರವಾಗಿ ಖಂಡಿಸಿದರು. ಈ ರೀತಿ ಮುಂದುವರೆದ ದೇಶಗಳ ಜೊತೆ



ಕೈಜೋಡಿಸುವುದು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹಾನಿಕಾರವಾಗಿದೆ ಎಂದು ತಿಳಿಸಿದ ಎಐಕೆಎಸ್ ನ ರಾಷ್ಟ್ರಾಧ್ಯಕ್ಷರು ಭಾರತವು ಅಭಿವೃದ್ಧಿಶೀಲ ಮೂರನೇ ಜಗತ್ತಿನ ರಾಷ್ಟ್ರಗಳ ಜೊತೆ ನಿಲ್ಲಬೇಕು ಹಾಗೂ ಮುಂದುವರೆದ ರಾಷ್ಟ್ರಗಳ ಒತ್ತಡಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಮುಂದಾಗಬೇಕೆಂದು ಒತ್ತಾಯಿಸಿದರು.

ಬ್ರಿಟಿಷ್ ಕಾಲದ ಮಾರುಕಟ್ಟೆ ವ್ಯವಸ್ಥೆ

ಒಂದೆಡೆ ಈ ರೀತಿಯಲ್ಲಿ ವಿದೇಶಿ ಕೃಷಿ ಉತ್ಪನ್ನಗಳನ್ನು ಎದುರಿಸಲಾಗದ ಸ್ಥಿತಿಯಿರುವಾಗ, ಭಾರತದ ಆಂತರಿಕ ಮಾರುಕಟ್ಟೆ ವ್ಯವಸ್ಥೆಯು ರೈತರ ಹಿತಗಳನ್ನು ಕಾಪಾಡುವ ಬದಲಿಗೆ ವ್ಯಾಪಾರಿಗರ ಹಿತಗಳನ್ನು ಕಾಪಾಡುವಂತದ್ದಾಗಿದೆಯೆಂದು ಪಿಳ್ಳೆ ಹೇಳಿದರು. ಬ್ರಿಟಿಷರು ಭಾರತದ ರೈತರನ್ನು ವಂಚಿಸಲು ತಮ್ಮ ವ್ಯಾಪಾರದ ಲಾಭವನ್ನು ಹೆಚ್ಚಿಸಿಕೊಳ್ಳಲು ರೂಪಿಸಲಾಗಿದ್ದ ಮಾರುಕಟ್ಟೆ ವ್ಯವಸ್ಥೆಯನ್ನೇ ಈಗಲೂ ಭಾರತದ ಸರ್ಕಾರಗಳು ಮುಂದುವರೆಸುತ್ತಿವೆಯೆಂದು ಟೀಕಿಸಿದರು. ಈ ಕೂಡಲೇ ರೈತರ ಹಿತ ಕಾಯುವಂತೆ ಮಾರುಕಟ್ಟೆ ವ್ಯವಸ್ಥೆಯನ್ನು ಸರಿಪಡಿಸಲು ರೈತರು ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಬೆಲೆಗಳ ಏರಿಳಿತದಿಂದ ರೈತರನ್ನು, ನಾಗರಿಕರನ್ನು ಸಂರಕ್ಷಿಸುವುದು ಎಂದಿಗಿಂತ ಹೆಚ್ಚಿನ ಅವಶ್ಯಕತೆ ಈಗಿನದಾಗಿದೆಯೆಂದು ತಿಳಿಸಿದರು.

ದೇಶ ಹಾಗೂ ಕೃಷಿಯು ಅತ್ಯಂತ ಆಳವಾದ ಬಿಕ್ಕಟ್ಟಿನಲ್ಲಿ ಸಿಲುಕಿದೆಯೆಂದು ಆತಂಕ ವ್ಯಕ್ತಪಡಿಸಿದ ಪಿಳ್ಳೆಯವರು ಕೇಂದ್ರ ಹಾಗೂ ಬಹಳಷ್ಟು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ರೈತ ವಿರೋಧಿ ನೀತಿಗಳೇ ಇದರ ಕಾರಣಗಳಾಗಿವೆಯೆಂದರು. ಪರಿಣಾಮವಾಗಿ ದೇಶದ ಉದ್ದಗಲಕ್ಕೆ ರೈತರ ಆತ್ಮಹತ್ಯೆಗಳು ಈಗಲೂ ಮುಂದುವರೆದಿವೆ, ಬೆಳೆಯುತ್ತಿವೆ. ಕೂಲಿಕಾರರ ಹಸಿವಿನ ಸಾವುಗಳು ಬೆಳೆಯುತ್ತಿವೆ. ನಿರುದ್ಯೋಗ, ಬಡತನಗಳು ಹೊಸ - ಹೊಸ ವಿಭಾಗಗಳಿಗೆ ಹರಡುತ್ತಿವೆ - ವ್ಯಾಪಕಗೊಳ್ಳುತ್ತಿವೆ. ಕೃಷಿ ಉತ್ಪಾದನೆ ದಿನೇದಿನೇ ಕುಸಿಯುತ್ತಿದೆ. ಕೂಲಿ ಹಾಗೂ ಕೂಲಿ ಕೆಲಸದ ಅಭಾವ ಪ್ರತಿನಿತ್ಯ ಹೆಚ್ಚಾಗುತ್ತಿದೆ. ನಾವಿಂದು ಗಂಭೀರವಾದ ಬಿಕ್ಕಟ್ಟಿನಲ್ಲಿದ್ದೇವೆಂದು ನೋವಿನಿಂದ ನುಡಿದರು.

ಈ ಕೂಡಲೇ ಬಿಕ್ಕಟ್ಟಿನಿಂದ ಹೊರಬರಲು ಕೇಂದ್ರ - ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಡಬ್ಲ್ಯುಟಿಓ ಅಸಮಾನ ಒಪ್ಪಂದದ ಹಾಗೂ ಹೊಸ ಕೃಷಿ ನೀತಿಯ ಮಾರ್ಗಗಳಿಂದ ಹೊರಬರಬೇಕೆಂದ ಪಿಳ್ಳೆ ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿಕೂಲಿಕಾರರ ಸಂಘ ರೂಪಿಸಿದ ಪರ್ಯಾಯ ಕೃಷಿ ನೀತಿಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದರು. ದೇಶದ ತುಂಬಾ ದೊಡ್ಡ ಸಂಖ್ಯೆಯಲ್ಲಿ ಬಡ ರೈತರು - ಕೂಲಿಕಾರರಿರುವಾಗ ಸಾರ್ವಜನಿಕ ಹೂಡಿಕೆ ಹೆಚ್ಚಿಸಬೇಕೇ ಹೊರತು ಕಡಿಮೆ ಮಾಡಬಾರದೆಂದ ಅವರು; ಎಲ್ಲ ಬಡವರಿಗೂ, ಕೂಲಿಕಾರರಿಗೂ ಸೇರಿದಂತೆ ಎಲ್ಲಾ ಕೃಷಿಕರಿಗೆ ಕಡಿಮೆ ಬಡ್ಡಿ ದರದ ಸಾಲ ಒದಗಿಸುವ ಕ್ರಮಗಳಾಗಬೇಕೆಂದು; ಇದಕ್ಕಾಗಿ ನಮ್ಮೆರೆಡು ಸಂಘಗಳು ದೇಶವ್ಯಾಪಿ ಆಂದೋಲನ ನಡೆಸಲಿವೆಯೆಂದು; ಕರ್ನಾಟಕ ರೈತರು ಮುನ್ನಡೆಸಬೇಕೆಂದು ಕರೆ ನೀಡಿದರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಯವರು ವಹಿಸಿದ್ದರು. ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿಗಳಾದ ಜಿ.ಎನ್.ನಾಗರಾಜ್, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ, ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಪ್ರಾಂತ ರೈತ ಸಂಘಧ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಜಿ.ಸಿ.ಬಯ್ಯಾರೆಡ್ಡಿ ಮತ್ತು ರೈತ ಮುಖಂಡರಾದ ಭೀಮಸಿ ಕಲಾದಗಿ ಮುಂತಾದವರು ಮಾತನಾಡಿದರು.

ಎರಡು ಸಂಘಗಳ ಪದಾಧಿಕಾರಿಗಳು ವೇದಿಕೆ ಮೇಲಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ವೆಂಕಟಾಚಲಯ್ಯ ಸ್ವಾಗತಿಸಿದರೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರ.ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ವಂದಿಸಿದರು.

ರೈತ-ಕೂಲಿಕಾರರ ಬೃಹತ್ ರ್‍ಯಾಲಿ

ರಾಜ್ಯದ ಮೂಲೆ-ಮೂಲೆಗಳಿಂದ ಬಂದಿದ್ದ ಸುಮಾರು 10 ಸಾವಿರ ರೈತ-ಕೂಲಿಕಾರರು ಬೆಂಗಳೂರು ನಗರದಲ್ಲಿಂದು ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ಮೆರವಣಿಗೆಯು ನಗರದ ಚಿಕ್ಕಲಾಲ್ ಬಾಗ್‌ನಿಂದ ಆರಂಭಗೊಂಡು ರೈಲ್ವೆ ಸ್ಟೇಷನ್ ರಸ್ತೆ, ನೃಪತುಂಗ ರಸ್ತೆಯ ಮೂಲಕ ಹಾಗೂ ಬನ್ನಪ್ಪ ಪಾರ್ಕ್‌ನಲ್ಲಿ ಬಹಿರಂಗ ಸಭೆಯಾಗಿ ಮಾರ್ಪಾಡುಗೊಂಡಿತು. ಈ ಪ್ರತಿಭಟನಾ ಮೆರವಣಿಗೆಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಜಂಟಿಯಾಗಿ ಹಮ್ಮಿಕೊಂಡಿದ್ದವು. ರೈತ-ಕೂಲಿಕಾರರ ಬೇಡಿಕೆಗಳು ಈಡೇರಲಿ, ಅರಣ್ಯ ಭೂಮಿ ಸಕ್ರಮಗೊಳಿಸಿರಿ, ಭೂಸುಧಾರಣೆ ಜಾರಿಗೆ ಬರಲಿ, ಬಡರೈತ-ಕೂಲಿಕಾರರ ಸಾಲ ಮನ್ನಾ ಆಗಲೇಬೇಕು. ರೈತ-ಕೂಲಿಕಾರ ವಿರೋಧಿ ಸರ್ಕಾರದ ನೀತಿಗಳಿಗೆ ಧಿಕ್ಕಾರ ಮುಂತಾಗಿ ಘೋಷಣೆಗಳನ್ನು ದಾರಿಯುದ್ದಕ್ಕೂ ಪ್ರತಿಭಟನಾಕಾರರು ಘೋಷಣೆ ಕೂಗುತ್ತಿದ್ದರು. ನೂರಾರು ಕೆಂಬಾವುಟಗಳನ್ನಿಡಿದ ವರ್ಣರಂಜಿತ ಮೆರವಣಿಗೆಯನ್ನು ರೈತ-ಕೂಲಿಕಾರರ ವಿಧಾನಸೌಧ ಚಲೋ ಕಾರ್ಯಕ್ರಮದ ಭಾಗವಾಗಿ ಸಂಘಟಿಸಲಾಗಿತ್ತು. ಸಾವಿರಾರು ಸಂಖ್ಯೆಯಲ್ಲಿ ರೈತ-ಕೂಲಿಕಾರ ಮಹಿಳೆಯರು ಭಾಗಿಯಾಗಿದ್ದರು.

ಅಕ್ಟೋಬರ್ 8 ರ ಮುಂಜಾನೆಯ ದೂರದ ಗುಲ್ಬರ್ಗಾ, ಬೀದರ್, ಬಿಜಾಪುರ ಮುಂತಾದೆಡೆಗಳಿಂದ ರೈಲುಗಳಲ್ಲಿ ಸಾಗಿಬಂದ ರೈತ ಕೂಲಿಕಾರರು ತಾವು ತಂದ ಬುತ್ತಿ, ಗಂಟುಗಳನ್ನು ಬಿಚ್ಚಿ, ರೊಟ್ಟಿ ತಿನ್ನುತ್ತಿರುವ ಹಾಗೂ ನಗರದಲ್ಲಿ ಸಂಚರಿಸುತ್ತಿರುವ ದೃಶ್ಯ ಕಂಡುಬಂದವು.

ಪ್ರತಿಭಟನಾ ಮೆರವಣಿಗೆಯು ಬೆಳಿಗ್ಗೆ 12.30

ಅಕ್ಟೋಬರ್ 29 ರಂದು ರಾಜ್ಯದಾದ್ಯಂತ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತೀವ್ರ ಸಂಘರ್ಷಕ್ಕೆ ನಿರ್ಣಯ

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಗಳು ಜಂಟಿಯಾಗಿ ವಿಧಾನಸೌಧ ಚಲೋದ ಅಂಗವಾಗಿ ಸಂಘಟಿಸಲಾದ ಸುಮಾರು 10 ಸಾವಿರ ರೈತ-ಕೂಲಿಕಾರರ ಬೃಹತ್ ರ್‍ಯಾಲಿಯು; ರಾಜ್ಯದಾದ್ಯಂತ ಅಕ್ಟೋಬರ್ 29 ರಂದು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ರಾಜ್ಯ ಸರ್ಕಾರದ ಜೊತೆ ತೀವ್ರ ಸಂಘರ್ಷ ನಡೆಸಲು ಸರ್ವಾನುಮತದ ನಿರ್ಣಯವನ್ನು ಕೈಗೊಂಡಿತು.

ಈ ಕುರಿತು ಗೊತ್ತುವಳಿಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿಮಾನ್ಪಡೆಯವರು ರೈತ-ಕೂಲಿಕಾರರ ಬೃಹತ್ ಅಧಿವೇಶನದಲ್ಲಿ ಮಂಡಿಸಿ ಸರ್ವಾನುಮತದ ನಿರ್ಣಯಕ್ಕಾಗಿ ಮತಕ್ಕೆ ಹಾಕಿದಾಗ ಸಮಾವೇಶ ಒಕ್ಕೊರಲಿನಿಂದ, ಹರ್ಷೋದ್ಗಾರಗಳೊಂದಿಗೆ ಕೈ ಎತ್ತುವ ಮೂಲಕ ಅನುಮೋದನೆ ನೀಡಿತು. ಸಮಾರಂಭದಲ್ಲಿ ಮಾತನಾಡಿದ ಎಲ್ಲಾ ಮುಖಂಡರು ತೀವ್ರ ಹೋರಾಟ ನಡೆಸಲು ಕರೆ ನೀಡಿದರು.


ರೈತ-ಕೂಲಿಕಾರರ ರ್ಯಾಲಿ.....

ಪುಟ 9 ರಿಂದ

ಕ್ಕೆ ಆರಂಭಗೊಂಡು ಮಧ್ಯಾಹ್ನ 2 ಗಂಟೆಗೆ ಬೃಹತ್ ಸಭೆಯಾಗಿ ಮಾರ್ಪಾಡುಗೊಂಡಿತು.

ಈ ಹಿಂದೆ ಜುಲೈ 20 ರಂದು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಪದಾಧಿಕಾರಿಗಳು ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ರಾಜ್ಯದ ರೈತ-ಕೂಲಿಕಾರರನ್ನು, ಗ್ರಾಮೀಣ ಪ್ರದೇಶವನ್ನು ಬಾಧಿಸುವ ಪ್ರಮುಖ ಬೇಡಿಕೆಗಳ ಪಟ್ಟಿಯನ್ನು ನೀಡಿದ್ದು, ಆ ಬೇಡಿಕೆಗಳ ಕುರಿತು ರಾಜ್ಯ ಸರ್ಕಾರ ಜಂಟಿ ಮಾತುಕತೆ ನಡೆಸುವುದಾಗಿ ಮುಖ್ಯಮಂತ್ರಿ ಹೇಳಿದ್ದು ಇಲ್ಲಿಯವರೆಗೂ ಆ ಮಾತುಕತೆ ನಡೆಯದೇ ಹೋಗಿದ್ದು ಮಾತ್ರವಲ್ಲ ರೈತ-ಕೂಲಿಕಾರರ ಪ್ರಶ್ನೆಗಳ ಕಡೆ ಸರ್ಕಾರ ಗಂಭೀರವಾಗಿ ಗಮನಹರಿಸದೇ ಇರುವ ನೀತಿಯನ್ನು ಪ್ರತಿಭಟಿಸಿ ಈ ವಿಧಾನಸೌಧ ಚಲೋ ರ್ಯಾಲಿಯನ್ನು ಸಂಘಟಿಸಲಾಗಿತ್ತು. ಈ ರ್ಯಾಲಿಯಲ್ಲಿ ಬೀದರ್, ಗುಲ್ಬರ್ಗಾ, ಬಿಜಾಪುರ,ಬೆಳಗಾಂ, ಧಾರವಾಡ, ಹಾವೇರಿ, ರಾಯಚೂರು, ಬಳ್ಳಾರಿ, ಕೊಪ್ಪಳ, ದ.ಕ., ಉಡುಪಿ, ಬೆಂಗಳೂರು, ಕೋಲಾರ, ಮಂಡ್ಯ, ತುಮಕೂರು ಮುಂತಾದ ಜಿಲ್ಲೆಗಳ ಸಾವಿರಾರು ರೈತ-ಕೂಲಿಕಾರರು ಪಾಲ್ಗೊಂಡ ಮೆರವಣಿಗೆಯ ನೇತೃತ್ವವನ್ನು ಶ್ರೀ ಜಿ.ಸಿ.ಬಯ್ಯಾರೆಡ್ಡಿ, ಶ್ರೀ ಮಾರುತಿ ಮಾನ್ಪಡೆ, ಶ್ರೀ ನಿತ್ಯಾನಂದ ಸ್ವಾಮಿ, ಶ್ರೀ ಚಂದ್ರಪ್ಪ ಹೊಸ್ಕೇರಾ ಮುಂತಾದವರು ವಹಿಸಿದ್ದರು.

ಜಿ.ಎನ್.ನಾಗರಾಜ್ : ಜನವಿರೋಧಿ ನೀತಿ ಅನುಸರಿಸುತ್ತಾ ಬಂದಿದ್ದರಿಂದ ನೀವು ಅಧಿಕಾರ ನಡೆಸಲು ನಾಲಾಯಕ್ಕಾಗಿದ್ದೀರೆಂದು ವಾಜಪೇಯಿ ಹಾಗೂ ಎಸ್.ಎಂ.ಕೃಷ್ಣ ಸರ್ಕಾರವನ್ನು ಜನ ಕಿತ್ತು ಹಾಕಿದುದನ್ನು ನೆನಪಿಸಿಕೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಎಚ್ಚರಿಸಿದರು. ರಾಜ್ಯದ



ರೈತ-ಕೂಲಿಕಾರರು ರಾಜಧಾನಿಗೆ ಧಾವಿಸಿಬಂದಿರುವುದು ಏಕೆಂದು ಮುಖ್ಯಮಂತ್ರಿಗಳು ಅರ್ಥೈಸಬೇಕೆಂದು ಒತ್ತಾಯಿಸಿದರು.

ಅಕ್ರಮ ಆಡಳಿತ ನಡೆಸಿದ್ದಕ್ಕೆ ಎಸ್.ಎಂ.ಕೃಷ್ಣರನ್ನು ಶಿಕ್ಷಿಸಿದ್ದೇವೆ. ನೀವೇನು ಮಾಡುತ್ತಿದ್ದೀರಿ? ಕಳೆದ 5 ತಿಂಗಳಿನಿಂದ ಕಾಲಹರಣವಾಯಿತಷ್ಟೇ. ಇನ್ನಾದರೂ ಸಕ್ರಮ ಆಡಳಿತ ಜಾರಿಗೆ ಬರಲಿ ಎಂದು ಕೇಳಲು ಸಾವಿರಾರು ಸಂಖ್ಯೆಯಲ್ಲಿ ರೈತ-ಕೂಲಿಕಾರರು ಬಂದಿದ್ದಾರೆಂಬ ಕಿವಿಮಾತನ್ನು ರಾಜ್ಯ ಸರ್ಕಾರಕ್ಕೆ ತಿಳಿಸಿದರು. ಬಿಜೆಪಿ ಸಂಘ ಪರಿವಾರದವರು ರಾಜ್ಯಾದ್ಯಂತ ಕೋಮುದಂಗೆಯ ಕಿಚ್ಚು ಹಚ್ಚಲು ಜನರ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿರುವಾಗ ಸಮರ್ಥವಾಗಿ ಮಧ್ಯಪ್ರವೇಶ ಮಾಡುತ್ತಿಲ್ಲ. ಯಾಕೆಂದು ಕೇಳಲು ಬಂದಿದ್ದಾರೆಂದು ಸರ್ಕಾರಕ್ಕೆ ಸೂಚಿಸಿದರು.

ರಾಜ್ಯದ ಭೂಮಾಲೀಕರು ದೌರ್ಜನ್ಯ, ಅಟ್ಟಹಾಸ ಅಡಗಿಸಲು ಭೂ ಸುಧಾರಣೆ ನಡೆಸಿ, ನಮ್ಮ ರಕ್ಷಣೆಗೆ ಬರಬೇಕು. ಕೂಲಿ ಕೆಲಸ ನೀಡಿ, ಕೆಲಸದ ಭದ್ರತೆ, ಸಾಮಾಜಿಕ ಸುರಕ್ಷತೆಗಾಗಿ ಸಮಗ್ರ ಕಾನೂನು ಮಾಡಿ ಎಂದು ಕೇಳಲು ಬಂದಿದ್ದೇವೆಂದು ವಿವರಿಸಿದರು.

ಜಿ.ವಿ.ಶ್ರೀರಾಮರೆಡ್ಡಿ: ಸಾಲದ ಬಾಧೆ ತಾಳಲಾಗದೆ, ಸಾಲ ಸಿಗದೇ ಅವಮಾನಿತರಾಗಿ ರೈತರ ಆತ್ಮಹತ್ಯೆಗಳು ನಡೆಯುತ್ತಿದ್ದರೆ, ಇದಕ್ಕೆ ರೈತರ ಬಡ್ಡಿಯನ್ನು ಮನ್ನಾ ಮಾಡುವ, ಹೊಸ ಸಾಲ ನೀಡುವ ಪರಿಹಾರ ನೀಡದೇ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಲಕ್ಷ ಪರಿಹಾರ ನೀಡುವುದಾಗಿ ಹೇಳಿ, ಅದನ್ನು ನೀಡದೇ ಬೇಕಾಬಿಟ್ಟಿ ವರ್ತಿಸಿದ್ದರಿಂದ ಎಸ್.ಎಂ.ಕೃಷ್ಣ ಸೋಲಬೇಕಾಯಿತೆಂಬು ದನ್ನು ಸರ್ಕಾರ ಅರಿಯಬೇಕೆಂದು ಸಿಪಿಐ(ಎಂ) ಶಾಸಕ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ವಿ.ಶ್ರೀರಾಮರೆಡ್ಡಿಯವರು ಬಹಿರಂಗ ಸಭೆಯಲ್ಲಿ ಒತ್ತಾಯಿಸಿದರು.

ನಿಮ್ಮ ವರ್ತನೆಯು ಸರಿಯಲ್ಲ. ಬಡರೈತರ ಸಾಲ ಮನ್ನಾ ಹಾಗೂ ಇತರೆಲ್ಲಾ ರೈತರ ಬಡ್ಡಿಯನ್ನು ಮನ್ನಾ ಮಾಡುವಲ್ಲಿ ಇಲ್ಲಿಯರೆಗೆ ಕ್ರಮವಹಿಸದೇ, ಜವಾಬ್ದಾರಿಯಿಂದ ವರ್ತಿಸುತ್ತಿಲ್ಲವೆಂದು ಛೇಡಿಸಿದ ಶಾಸಕರು ಅಬಕಾರಿ ದೊರೆಗಳಿಗೆ 280 ಕೋಟಿ ಬಡ್ಡಿ ಮನ್ನಾ ಮಾಡಲು ಹಣವಿದೆ. ಅದೇರೀತಿ ಮೈಸೂರು- ಬೆಂಗಳೂರು ಎಕ್ಸ್‌ಪ್ರೆಸ್ ಕಾರಿಡಾರ್ ರಸ್ತೆಗಾಗಿ ಕೊಟ್ಟ ಭೂಮಿಗೆ ನೈಸ್ ಕಂಪನಿಗೆ 575 ಕೋಟಿ ಸ್ಟಾಂಪ್ ಶುಲ್ಕ ಬಿಡಲು ಇವರ ಹತ್ತಿರ ಹಣವಿದೆ. ಅನ್ನ ನೀಡುವ ರೈತರಿಗೆ ಬಡ್ಡಿಯನ್ನು ಮನ್ನಾ ಮಾಡಲು ಹಣವಿಲ್ಲವೆಂದು ಟೀಕಿಸಿದರು. ರಾಜ್ಯ ಸರ್ಕಾರ ಕೂಡಲೇ ರೈತರ ಸಾಲದ ಪರಿಸ್ಥಿತಿ ಇತ್ಯರ್ಥ ಮಾಡಬೇಕೆಂದು ಒತ್ತಾಯಿಸಿದರು.

ನಿತ್ಯಾನಂದಸ್ವಾಮಿ : 40-50 ವರ್ಷಗಳಿಂದ ಸಾಗು ಮಾಡುತ್ತಿರುವ ಅರಣ್ಯ ಭೂಮಿಯನ್ನು ಸಕ್ರಮ ಮಾಡುವುದೊಂದೇ ಸರ್ಕಾರದ ದಾರಿಯೇ ಹೊರತು, ಒಕ್ಕಲೆಬ್ಬಿಸಲು ಕರ್ನಾಟಕ ಪ್ರಾಂತ ರೈತ ಸಂಘ-ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಬಿಡುವುದಿಲ್ಲವೆಂದು ಶ್ರೀ ನಿತ್ಯಾನಂದಸ್ವಾಮಿಯವರು ಗುಡುಗಿದರು. ಅರಣ್ಯಭೂಮಿ ಸಾಗುದಾರರಿಗೆ ಪಟ್ಟಿ ನೀಡಲು 1980 ರ ಅರಣ್ಯ ಕಾಯ್ದೆಗೆ ಕೇಂದ್ರ ಸರ್ಕಾರ ತಿದ್ದುಪಡಿ ತಂದು ರಕ್ಷಣೆಗೆ ಮುಂದಾಗುವಂತೆ ರಾಜ್ಯ ಸರ್ಕಾರ ಒತ್ತಾಯಿಸಬೇಕೆಂದು, ಮುಖ್ಯಮಂತ್ರಿ-ಉಪಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.

....ವಿಧಾನಸೌಧ ಚಲೋ

ಪುಟ 7 ರಿಂದ

ಉದಾರೀಕರಣ ನೀತಿಗಳ ಭಾಗವಾಗಿ ಸರ್ಕಾರಿ ಇಲಾಖೆಗಳನ್ನೇ ಮುಚ್ಚುವ, ನೌಕರರನ್ನು ವಿ.ಆರ್.ಎಸ್. ಕೊಟ್ಟು ಮನೆಗೆ ಕಳುಹಿಸುವ, ಖಾಲಿ ಹುದ್ದೆಗಳ ನೇಮಕಾತಿ ಮೇಲೆ ನಿರ್ಬಂಧ ಹೇರುವ, ಖಾಲಿ ಹುದ್ದೆಗಳನ್ನೇ ರದ್ದು ಮಾಡುವ ಕಾಯಕದಲ್ಲಿ ನಿರತವಾಗಿರುವ ರಾಜ್ಯ ಸರ್ಕಾರ ಸಿಕ್ಕಿದ ಅವಕಾಶವನ್ನೇ ಬಳಸಿ ಆರೋಗ್ಯ ಇಲಾಖೆಯಲ್ಲಿದ್ದ ಖಾಯಂ ನೌಕರರನ್ನು ಗುತ್ತಿಗೆ ನೌಕರರನ್ನಾಗಿಸಿತು. (ಆರೋಗ್ಯ ಇಲಾಖೆಯ ಸುಧಾರಣೆಗೆಂದು ಪಡೆಯಲಾಗಿದ್ದ ವಿಶ್ವಬ್ಯಾಂಕ್ ಸಾಲದ ಶರತ್ತಿನ ಜಾರಿಗೊಂದು - ಪರಿಣಾಮಕಾರಿ ಆಡಳಿತ ಸುಧಾರಣೆಗೊಂದು ಅವಕಾಶ!)

2004 ಜನವರಿ 8 ರಂದು ರಾಜ್ಯಾದ್ಯಂತ 1 ಲಕ್ಷ ಸಹಿ ಸಂಗ್ರಹ ನಡೆಸಿ, ಅಂದಿನ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿ ಕೋರ್ಟ್ ತಡೆಆಜ್ಞೆ ತೆರವುಗೊಳಿಸಲು, ಶಾಶ್ವತ ಪರಿಹಾರವಾದ ಸಂವಿಧಾನದ 31(ಬಿ) ಅಡಿ ಶಾಸನಕ್ಕಾಗಿ ಮತ್ತು ಸಂವಿಧಾನದ 9ನೇ ಶೆಡ್ಯೂಲಿಗೆ ಅದರ ಸೇರ್ಪಡೆಗೆ ಕ್ರಮ ವಹಿಸಬೇಕೆಂದು ಒತ್ತಾಯಿಸಲಾಯಿತು.

ಅಂತೆಯೇ 2004 ಜೂನ್ 29ರಂದು ನೂರಾರು ನೌಕರರ ಬೃಹತ್ ರ್ಯಾಲಿ ನಡೆಸಿ, ಮಾನ್ಯ ಉಪಮುಖ್ಯಮಂತ್ರಿಗಳ ಮೂಲಕ ನೂತನ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಪರಿಣಾಮವಾಗಿ ಕಾಂಗ್ರೆಸ್ - ಜನತಾದಳ(ಜಾತ್ಯತೀತ) ಸಮ್ಮಿಶ್ರ ಸರ್ಕಾರದ **ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ 'ಗ್ರಾಮೀಣ ಪ್ರದೇಶದ ಯುವ ಜನರಿಗೆ ಕೃಪಾಂಕ ನೀಡುವ ಮೂಲಕ ಸರ್ಕಾರವೇ ಉದ್ಯೋಗಗಳಲ್ಲಿ ಈ ಹಿಂದೆ ಮಾಡಲಾಗಿದ್ದ ಖಾಯಂ ನೇಮಕಾತಿಯನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಕೈಬಿಡಲಾಗಿದ್ದು, ಇದರಿಂದಾಗಿ ಸೌಲಭ್ಯ ವಂಚಿತ ಗ್ರಾಮೀಣ ಯುವ ಜನತೆಗೆ ಸೂಕ್ತ ಸಂವಿಧಾನ ತಿದ್ದುಪಡಿಯ ಮೂಲಕ ನ್ಯಾಯ ದೊರಕಿಸಿಕೊಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು'.** (ಪುಟ - 18; 24. ಗ್ರಾಮೀಣ ಕೃಪಾಂಕ) ಎಂದು ಘೋಷಿಸಲಾಗಿದೆ.

ಸುಪ್ರೀಂ ಕೋರ್ಟ್‌ನ ತಡೆ ಆಜ್ಞೆಯನ್ನು ತೆರವುಗೊಳಿಸಲು, ಮರುನೇಮಕಗೊಳ್ಳದೆ ಕಳೆದು 10 ತಿಂಗಳಿಂದ ಹೊರ ಉಳಿದಿರುವವರ ಮರುನೇಮಕಕ್ಕೆ ಅನುವುಗೊಳಿಸಲು ಅಗತ್ಯ ಮುತುವರ್ಜಿಯನ್ನು ರಾಜ್ಯ ಸರ್ಕಾರ ವಹಿಸಬೇಕು. ಅಂತೆಯೇ 'ವಿಶೇಷ ನೇಮಕಾತಿ ನಿಯಮಾವಳಿಗಳನ್ನು, ಸುಪ್ರೀಂಕೋರ್ಟ್ ಅಸಿಂಧುಗೊಳಿಸಿದಲ್ಲಿ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಘೋಷಿಸಿರುವಂತೆ ಕ್ರಮ ವಹಿಸಬೇಕೆಂದು ಕೃಪಾಂಕ ನೌಕರರು 'ವಿಧಾನಸೌಧ ಚಲೋ'ನಲ್ಲಿ ಭಾಗವಹಿಸುತ್ತಿದ್ದಾರೆ.

..ಕೇಸರೀಕರಣದಿಂದ ಮುಕ್ತಗೊಳಿಸಬೇಕಾಗಿದೆ

ಪುಟ 6 ರಿಂದ

ಪ್ರಮುಖ ಸ್ಥಾನಗಳಲ್ಲಿ ಮುಂದುವರೆಯುತ್ತಿದ್ದಾರೆ. ಈ ಪಟ್ಟಿ ಎಷ್ಟು ದೊಡ್ಡದಿದೆಯೆಂದರೆ ಬಿಜೆಪಿ ಆಡಳಿತದಲ್ಲಿ ಆರ್‌ಎಸ್‌ಎಸ್ ಯಾವುದೇ ಸಂಸ್ಥೆಯನ್ನು ಮುಟ್ಟದೆ ಬಿಟ್ಟಿದೆಯೇ ಎಂದು ಆಶ್ಚರ್ಯ ಪಡಬೇಕು.

ಸಂದೇಶ ಹೋಗಬೇಕಾಗಿತ್ತು

ಆಶ್ಚರ್ಯವೆಂದರೆ ಮೇ ತಿಂಗಳಲ್ಲಿ ಯುಪಿಎ ಅಧಿಕಾರ ವಹಿಸಿಕೊಂಡ ನಂತರ ನೀಡಿದ ವಚನಗಳಿಗೆ ವ್ಯತಿರಿಕ್ತವಾಗಿ ಇಂತಹ ವಿಷಯಗಳಲ್ಲಿ ಸರ್ಕಾರ ದೃಢತೆಯಿಂದ ಕಾರ್ಯ ನಡೆಸುವಲ್ಲಿ ವಿಫಲವಾಗದೆ. ರಜಪೂತ್ ಪ್ರಕರಣವೇ ಉದಾಹರಣೆ. ಈ ವ್ಯಕ್ತಿ ಶಿಕ್ಷಣ ರಂಗದಲ್ಲಿ ಆರ್‌ಎಸ್‌ಎಸ್ ಅಜೆಂಡಾವನ್ನು ಮುಂದೊತ್ತಲು ಏನು ಸಾಧ್ಯವೋ ಅದನ್ನೆಲ್ಲಾ ಮಾಡುತ್ತಿದ್ದರೂ ಯುಪಿಎ ಯ ಮಾನವ ಸಂಪನ್ಮೂಲ ಮಂತ್ರಿಗೆ ಜುಲೈ 13 ರಂದು ಆತನ ಕಾರ್ಯಾವಧಿ ಕೊನೆಯಾಗುವವರೆಗೂ ಕಾಯುವುದೇ ಲೇಸೆನಿಸಿತು. ಆತನನ್ನು ತಕ್ಷಣವೇ ತೆಗೆದುಹಾಕಬೇಕಿತ್ತು. ಈ ಮೂಲಕ ಯುಪಿಎ ಸರ್ಕಾರ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ತುಂಬಿಸಿದ ಕೋಮು ವಿಷವನ್ನು ತೆಗೆಯುವ ಬಗ್ಗೆ ಗಂಭೀರವಾಗಿದೆ ಎಂಬ ಸಂದೇಶ ದೇಶದ ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಹೋಗುತ್ತಿತ್ತು.

ಇತ್ತೀಚೆಗೆ ಜನಗಣತಿ ಮಹಾ ರಿಜಿಸ್ಟ್ರಾರ್ ಜೆ.ಕೆ.ಬೈಂತಿಯಾರವರ ವಿಷಯದಲ್ಲೂ ಕೇಂದ್ರ ಗೃಹ ಮಂತ್ರಿಗಳೂ ಇದೇ ಕೂತು ಕಾಣುವ ನೀತಿ ಅನುಸರಿಸಿದರು. ಈ ವ್ಯಕ್ತಿಯನ್ನು ಹಿಂದಿನ ಬಿಜೆಪಿ ಆಡಳಿತ ನೇಮಿಸಿತ್ತು. ಆತನಿಗೂ ಮೊದಲು ಹೋಗುವಂತೆ ಹೇಳುವ ಬದಲು ಆತ ತನ್ನ ಅವಧಿ ಮುಗಿದು ತಾನಾಗಿಯೇ ಹೋಗುವವರೆಗೆ ಕಾಯಲಾಯಿತು. ನಿಜ ಸಂಗತಿಯೆಂದರೆ ಈ ವ್ಯಕ್ತಿ ಜನಗಣತಿ ಅಂಕಿ-ಸಂಖ್ಯೆಗಳನ್ನು ಪ್ರಕಟಿಸುವಲ್ಲಿ ಉದ್ದೇಶಪೂರ್ವಕವಾಗಿಯೇ ಕಿಡಿಗೇಡಿತನ ಮಾಡಿದ್ದು. 1991-2001 ರ ದಶಕದಲ್ಲಿ ಮುಸ್ಲಿಂ ಜನಸಂಖ್ಯೆ ಶೇ 36 ಹೆಚ್ಚಿದೆ ಎಂದು ವಿಕೃತಗೊಳಿಸಿ ಅಂಕಿ-ಸಂಖ್ಯೆಗಳನ್ನು ತೋರಿಸಲಾಯಿತು. 1981-91 ರಲ್ಲಿ ಇದು 32.9 ಇತ್ತು. 1991 ರಲ್ಲಿ ಕಾಶ್ಮೀರದಲ್ಲಿನ ಆತಂಕದ ಪರಿಸ್ಥಿತಿಯಿಂದಾಗಿ ಅಲ್ಲಿ ಜನಗಣತಿ ನಡೆದಿರಲಿಲ್ಲ ಎಂಬುದನ್ನು ಉದ್ದೇಶಪೂರ್ವಕ ವಾಗಿಯೇ ನಿರ್ಲಕ್ಷಿಸಿ ಈ ಅಂಕಿ-ಸಂಖ್ಯೆಗಳನ್ನು ಪ್ರಕಟಿಸಲಾಯಿತು. ವಾಸ್ತವವಾಗಿ ಎರಡೂ ಅಂಕೆ-ಸಂಖ್ಯೆಗಳನ್ನು ಹೋಲಿಸಬೇಕಾದರೆ ಈ ಬಾರಿ ಜಮ್ಮು-ಕಾಶ್ಮೀರದ ಜನಸಂಖ್ಯೆಯನ್ನು ಬಿಟ್ಟು ಲೆಕ್ಕ ಹಾಕಬೇಕಾಗಿತ್ತು. ಆದರೆ ವಾಸ್ತವ ಸಂಗತಿ ಬೇಗನೆ ಬೆಳಕಿಗೆ ಬಂತು. ಜಮ್ಮು-ಕಾಶ್ಮೀರ 2001 ರ ಅಂಕೆ-ಸಂಖ್ಯೆಗಳನ್ನು ಗಮನಕ್ಕೆ ತಗೊಂಡ ನಂತರ ವಾಸ್ತವವಾಗಿ ಮುಸ್ಲಿಂ ಜನಸಂಖ್ಯೆಯ ನಿಜವಾದ ಹೆಚ್ಚಳ ದರ ಶೇ 29.3, ಅಂದರೆ 1981-91 ರ ದಶಕದ ವೃದ್ಧಿಗಿಂತ ಕಡಿಮೆ ಎಂದು ಸ್ಪಷ್ಟವಾಯಿತು.

ಬೈಂತಿಯಾರವರ ಅಡಿಯಲ್ಲಿ ಜನಗಣತಿ ವಿಭಾಗದ ದುರ್ವರ್ತನೆ ಕೋಮುವಾದಿ ಕೂಟಕ್ಕೆ ಮತ್ತೊಮ್ಮೆ ಮುಸ್ಲಿಮರು ಬೇಗನೆ ಹಿಂದೂಗಳನ್ನು ಅಲ್ಪಸಂಖ್ಯಾತರಾಗಿಸಿಬಿಡುತ್ತಾರೆ ಎಂದು ಸುಳ್ಳೇ ಗದ್ದಲ ಎಬ್ಬಿಸಲು ಅವಕಾಶ ಒದಗಿಸಿಕೊಟ್ಟಿತು. ಈ ಹಳಸಲು ಆರ್‌ಎಸ್‌ಎಸ್ ಅಪಪ್ರಚಾರ ಶುದ್ಧ ಸುಳ್ಳು ಎಂಬುದು ಎಂದೋ ಸ್ವಯಂವೇದ್ಯವಾಗಿತ್ತು. ಆದರೂ ಸಂಘ ಪರಿವಾರ ಈ ವಿಕೃತ ಅಂಕಿ ಸಂಖ್ಯೆಗಳನ್ನು ಅತ್ಯಾತುರದಿಂದ ಬಾಚಿಕೊಂಡಿತು. ಬಿಜೆಪಿ ಅಧ್ಯಕ್ಷ ವೆಂಕಯ್ಯ ನಾಯ್ಡು ಭಾರತಕ್ಕೆ ಮುಸ್ಲಿಮರಿಂದ ಇರುವ ಅಪಾಯದ ಬಗ್ಗೆ ಉಪದೇಶ ನೀಡಲು ಪತ್ರಿಕಾ ಸಮ್ಮೇಳನವನ್ನು ಕರೆದರು. ಸಾರಾಂಶವೆಂದರೆ, ಬೈಂತಿಯಾರವರು ವಜಾ ಆಗಲು ಅರ್ಹರಾಗಿದ್ದರು. ಅವರನ್ನು ವಜಾ ಮಾಡಿ ಒಂದು ಬಲಿಷ್ಠ ಸಂದೇಶವನ್ನು ಕಳಿಸಬಹುದಾಗಿತ್ತು. ಆದರೆ ಗೃಹಮಂತ್ರಿಗಳು ಇದನ್ನು ಮಾಡಲಿಲ್ಲ.

ರಾಷ್ಟ್ರೀಯ ಉರ್ದು ಭಾಷಾ ಪ್ರೋತ್ಸಾಹ ಮಂಡಳಿಯ ಉಪಾಧ್ಯಕ್ಷ ಪ್ರೊ. ಗೋಪಿಚಂದ ನಾರಂಗ್‌ರನ್ನು ವಜಾ ಮಾಡುವ ಬದಲು ರಾಜೀನಾಮೆ ಕೊಟ್ಟು ಹೋಗಿ ಎಂದಷ್ಟೇ ಹೇಳಲಾಯಿತು. ಈಗ ಸಾಹಿತ್ಯ ಅಕಾಡೆಮಿಯಲ್ಲಿ ಆತನ ಮೇಲೆ ಗೋಲ್‌ಮಾಲ್ ನಡೆಸಿದ ಆಪಾದನೆಯಿದೆ. ಆತ ಈ ಪ್ರಮುಖ ಸಂಸ್ಥೆಯ ಚುನಾಯಿತ ಅಧ್ಯಕ್ಷನಾಗಿದ್ದರೂ ಈ ಆಪಾದನೆಗಳ ಮೇಲೆ ತನಿಖೆ ನಡೆಸಲು ಏನು ಅಡ್ಡಿಯೋ ತಿಳಿಯದು. ಆದರೂ, ಬೈಂತಿಯಾ ವರ್ತನೆ ನೇರವಾಗಿ ತೋರಿಸುವಂತೆ ದೇಶಾದ್ಯಂತ ವಿವಿಧ ಸಂಸ್ಥೆಗಳಲ್ಲಿ ಕುಳಿತಿರುವ ಈ ಸಾವಿರಾರು ಆರ್‌ಎಸ್‌ಎಸ್ ಮಂದಿ ನಮ್ಮ ಜಾತ್ಯತೀತ ಹಂದರಕ್ಕೆ ಮತ್ತು ಸಮ್ಮಿಶ್ರ ಸಂಸ್ಕೃತಿಗೆ ಅಪಾರ ಕೇಡು ಉಂಟು ಮಾಡಲು ಸಮರ್ಥರು. ನಿಜ ಸಂಗತಿಯೆಂದರೆ ಇದು ಈಗ ದೇಶ ಎದುರಿ ಸುತ್ತಿರುವ ಅತ್ಯಂತ ಗಂಭೀರ ಅಪಾಯಗಳಲ್ಲಿ ಒಂದು. ಯುಪಿಎ ಸರಕಾರ ಈ ಅಪಾಯವನ್ನು ಎದುರಿಸಲು ದೃತ್ಯ ಹೆಜ್ಜೆಗಳನ್ನಿಡಬೇಕು. ಎಲ್.ಕೆ. ಅಡ್ವಾಣಿ 1977-79 ರ ಮೊರಾರ್ಜಿ ದೇಸಾಯಿ ಸರ್ಕಾರದಲ್ಲಿ ವಾರ್ತಾ ಮತ್ತು ಪ್ರಸಾರ ಮಂತ್ರಿಯಾಗಿದ್ದಾಗ ರೇಡಿಯೋ, ಟೆಲಿವಿಷನ್ ಹಾಗೂ ಇತರ ಮಾಧ್ಯಮಗಳಲ್ಲಿ ಸಾವಿರಾರು ಆರ್‌ಎಸ್‌ಎಸ್ ಮಂದಿಯನ್ನು ತೂರಿಸಿದರು ಎಂಬುದನ್ನುಇಲ್ಲಿ ನೆನಪಿಸಿ ಕೊಳ್ಳಬಹುದು. ಇವರೇ ನಂತರದ ದಶಕಗಳಲ್ಲಿ ಇಡೀ ಭಾರತೀಯ ಮಾಧ್ಯಮಕ್ಕೆ ಕೋಮುವಾದಿ ಬಣ್ಣ ನೀಡಲು ಕಾರಣರಾದರು. 1985-2003 ರ ಅವಧಿಯೂ ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತೆಂದರೆ ಹಲವಾರು ಪತ್ರಿಕೆಗಳು ಕೋಮುವಾದಿ ಉದ್ದೇಶದಿಂದಲೇ ವರದಿಗಳನ್ನು ಪ್ರಕಟಿಸುತ್ತಿದ್ದವು. ಇದಕ್ಕಾಗಿ ವಾಸ್ತವಾಂಶಗಳನ್ನು ತಿರುಚುತ್ತಿದ್ದವು. ಎಷ್ಟೆಂದರೆ ಭಾರತೀಯ ಪತ್ರಿಕಾ ಮಂಡಳಿ ಹಲವು ಇಂತಹ ಪತ್ರಿಕೆಗಳನ್ನು ಖಂಡಿಸಬೇಕಾಗಿ ಬಂತು. ಈಗ ಗಮನಿಸಬೇಕಾದ ಸಂಗತಿಯೆಂದರೆ **ಮಾಧ್ಯಮದಲ್ಲಷ್ಟೇ ಅಲ್ಲ ಹಲವು ಸಂಸ್ಥೆಗಳಲ್ಲಿ ಇನ್ನೂ ಎಷ್ಟೋ ಹೆಚ್ಚು ಆರ್‌ಎಸ್‌ಎಸ್ ಮಂದಿ ತೂರಿಕೊಂಡಿದ್ದಾರೆ . ಅವರು ಇನ್ನಷ್ಟು ಅಪಾಯ ಉಂಟುಮಾಡಲು ಸಮರ್ಥರು. ಈ ಮಂದಿ ತಮಗೆ ಮತ್ತು ನಮ್ಮ ಜಾತ್ಯತೀತ ರಾಜಕೀಯ ವ್ಯವಸ್ಥೆಗೆ ವಿಧೇಯರಾಗಿರುತ್ತಾರೆ ಎಂಬ ಯುಪಿಎ ಮಂತ್ರಿಗಳ ಭ್ರಮೆಗೆ ಭಾಂಬೆಲೆ ತೆರಬೇಕಾಗಿ ಬಂದೀತು.** ಅವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿದೆ. ಅತ್ಯಂತ ಚುರುಕಿನಿಂದ, ಕಸುವಿನಿಂದ ಮತ್ತು ದೃಢತೆಯಿಂದ ಕ್ರಮ ಕೈಗೊಳ್ಳಬೇಕಾಗಿದೆ.

ಜರ್ಮನಿಯಲ್ಲಿ ನಿರಂತರ 'ಸೋಮವಾರದ ರ್‍ಯಾಲಿಗಳು'

ಜರ್ಮನಿಯ 200 ಸಣ್ಣ-ದೊಡ್ಡ ನಗರಗಳಲ್ಲಿ ಕಳೆದ ಎಂಟು ವಾರಗಳಿಂದ ನಿರಂತರವಾಗಿ 'ಸೋಮವಾರ ರ್‍ಯಾಲಿ'ಗಳು ನಡೆಯುತ್ತಿವೆ. ಜರ್ಮನಿಯ ಸೋಶಲಿಸ್ಟ್-ಗ್ರೀನ್ ಸರ್ಕಾರದ - ನಿರುದ್ಯೋಗ ಭತ್ಯೆ, ಸಾಮಾಜಿಕ ಕಲ್ಯಾಣ ಕ್ರಮಗಳಲ್ಲಿ ಅಭೂತಪೂರ್ವ ಕಡಿತ ಮಾಡುವ -'ಹರ್ಟ್ಜ್-4' ಯೋಜನೆ ವಿರುದ್ಧ ಈ ರ್‍ಯಾಲಿಗಳು. ಪ್ರತಿ ನಗರದಲ್ಲೂ ಹತ್ತು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುತ್ತಿರುವ ಈ ರ್‍ಯಾಲಿಗಳು ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಜರ್ಮನಿ ಕಂಡ ಭಾರಿ ಸಾಮೂಹಿಕ ಚಳುವಳಿಗಳಲ್ಲಿ ಒಂದು ಇದು. ಜರ್ಮನಿಯ ಉಳಿದ ಎಲ್ಲಾ ಪಕ್ಷಗಳು ಸರ್ಕಾರ 'ಹರ್ಟ್ಜ್ 4' ಯೋಜನೆಗೆ ಬೆಂಬಲ ನೀಡಿದ್ದು, ಮಾಜಿ ಕಮ್ಯುನಿಸ್ಟ್ ಪಕ್ಷದ ವಾರಸುದಾರ ಪಿಡಿಎಸ್ ಮಾತ್ರ ಈ ಚಳುವಳಿಗೆ ಬೆಂಬಲವಾಗಿ ನಿಂತಿದೆ.

ಈ ಜುಲೈನಲ್ಲಿ ಜರ್ಮನ್ ಪಾರ್ಲಿಮೆಂಟು 'ಹರ್ಟ್ಜ್4' ಎಂಬ ಕಾನೂನು ಮಂಜೂರು ಮಾಡಿತ್ತು. ಈ ಕಾನೂನು ಪರವಾಗಿ ಎರಡೂ ಜರ್ಮನಿಗಳ ಮಾಜಿ ಕಮ್ಯುನಿಸ್ಟ್ ಪಕ್ಷಗಳ ವಾರಸುದಾರ ಪಿಡಿಎಸ್ ಬಿಟ್ಟರೆ, ಬೇರೆ ಎಲ್ಲಾ ಪಕ್ಷಗಳು ಬೆಂಬಲಿಸಿದ್ದವು. ಆದರೆ ನಿರುದ್ಯೋಗಿಗಳು, ಸಾಮಾನ್ಯ ಜನ, ಟ್ರೇಡ್ ಯೂನಿಯನ್‌ಗಳು, ನಾಗರಿಕ ಸಮಿತಿಗಳು, ಸಾಮಾಜಿಕ ಸಂಘಟನೆಗಳು - ಇದಕ್ಕೆ ಬಲವಾಗಿ ವಿರುದ್ಧವಾಗಿದ್ದವು. ಇವು ಸ್ವಯಂ-ಸ್ಫೂರ್ತವಾಗಿ ಆಗಸ್ಟ್ ಮೊದಲ ವಾರದಿಂದಲೇ 'ಸೋಮವಾರದ ರ್‍ಯಾಲಿ'ಗಳು ಆರಂಭಿಸಿದವು. ಇದು ದೇಶದ ತುಂಬಾ ಬೇಗ ಹಬ್ಬಿತು. ಎಂಟುವಾರಗಳಿಂದ ಈ ರ್‍ಯಾಲಿಗಳು ನಿರಂತರವಾಗಿ ನಡೆದು ಜರ್ಮನಿಯನ್ನು, ಸರ್ಕಾರವನ್ನು ನಡುಗಿಸಿವೆ. ಸರ್ಕಾರ ತಮ್ಮ ಅಹವಾಲು ಕೇಳಿ, ಈ ಯೋಜನೆಯನ್ನು ಕೈಬಿಡುವವರೆಗೆ ಈ ಹೋರಾಟ ಮುಂದುವರೆಯುತ್ತದೆ ಎಂದಿವೆ ಈ ಸಂಘಟನೆಗಳು.

'ಹರ್ಟ್ಜ್ 4' ಕಾನೂನು ಏನು? ಇದು 'ವೋಲ್ಕ್ಸ್‌ವ್ಯಾಗನ್' ಎಂಬ ಜರ್ಮನ್ ದೈತ್ಯ ಕಾರು ಕಂಪನಿಯ ಪರ್ಸನಲ್ ಮ್ಯಾನೇಜರ್ 'ಹರ್ಟ್ಜ್' ಅಧ್ಯಕ್ಷನಾಗಿದ್ದ ಸಮಿತಿಯೊಂದು ತಯಾರಿಸಿದ ಕಾನೂನು. ದಶಕಗಳ ಕಾಲ ಕಾರ್ಮಿಕ ವರ್ಗದ ಧೀರೋದಾತ್ತ ಸಮರದ ಫಲವಾಗಿ ಜರ್ಮನಿಯಲ್ಲಿ ಜಾರಿಗೆ ಬಂದಿದ್ದ ಉತ್ತಮ ಸಾಮಾಜಿಕ ಕಲ್ಯಾಣ ಯೋಜನೆಯಲ್ಲಿ ಅಭೂತಪೂರ್ವ ಭಾರಿ ಕಡಿತ ತರುವ ಯೋಜನೆ ಇದು. ಜರ್ಮನ್ ಆಳುವ ವರ್ಗಗಳ 'ಕಾರ್ಮಿಕ ಸುಧಾರಣೆ-1' ನಾಲ್ಕನೆ ಹಂತ ಇದು. ಈ ಕಾನೂನು 2005 ರ ಜನವರಿ 1 ರಿಂದ ಜಾರಿಗೆ ಬರಲಿದೆ.

ಈ ಕಾನೂನು ಪ್ರಕಾರ ಉದ್ಯೋಗ ಕಳೆದುಕೊಂಡಾಗ ಸಿಗುವ ಸಾಮಾಜಿಕ ಭದ್ರತಾ ವೇತನದಲ್ಲಿ ಭಾರಿ ಕಡಿತ ಮಾಡಿರುವುದು ಮಾತ್ರವಲ್ಲ, ತೀವ್ರ ಮಿತಿಗಳನ್ನು ಹೇರಲಾಗಿದೆ. ಈವರೆಗೆ ಇಂತಹ ವೇತನ ಅವರ ಕೊನೆಯ ವೇತನದ ಸುಮಾರು ಮೂರನೇ ಒಂದು ಭಾಗವಾಗಿತ್ತು. ಅವರು ಈ ವೇತನ ಪಡೆಯುವ ಅವಧಿ ಸಹ ಅವರ ಸೇವಾವಧಿ ಹಿಂದೆ ಇನ್ಶೂರೆನ್ಸ್ ಮಾಡಿದ ಕೊಡುಗೆ ಮೇಲೆ ಅವಲಂಬಿಸಿರುತ್ತಿತ್ತು. ಈಗ ಎಲ್ಲರಿಗೂ 12 ತಿಂಗಳವರೆಗೆ ಮಾತ್ರ, ಎಲ್ಲರಿಗೂ ಒಂದೇ ರೀತಿಯ ಮೊತ್ತವಿರುತ್ತದೆ.

12 ತಿಂಗಳ ನಂತರ ಎಲ್ಲರಿಗೂ ಒಂದೇ ಮೊತ್ತದ ನಿರುದ್ಯೋಗ ಭತ್ಯೆ ಇರುತ್ತವೆ. ಇದರಲ್ಲೂ ಪಶ್ಚಿಮ ಜರ್ಮನಿಯವರಿಗಿಂತ, ಪೂರ್ವ ಜರ್ಮನಿಯರವರ ಮೊತ್ತ ಕಡಿಮೆ ಇರುತ್ತದೆ. ಅದು ಕೇವಲ 345 ಯುರೋ ಇರುತ್ತದೆ. ಇದು ಬದುಕುಳಿಯಬಹುದಾದ ಕನಿಷ್ಟ ವೇತನವಷ್ಟೆ. ಇದಲ್ಲದೆ, ಈ ಭತ್ಯೆ ಪಡೆಯುವುದಕ್ಕೆ ಹಲವು ಷರತ್ತುಗಳು ಇರುತ್ತವೆ. ಗಂಡ ಅಥವಾ ಹೆಂಡತಿಗೆ ಕೆಲಸ ಇಲ್ಲದಿದ್ದರೆ ಸಿಗುವುದಿಲ್ಲ. ಯಾವುದೇ ರೀತಿಯ ಆಸ್ತಿ ಇದ್ದರೆ ಸಿಗುವುದಿಲ್ಲ. ಯಾವುದೇ ಉದ್ಯೋಗ (ಅದು ವ್ಯಕ್ತಿಯ ಅರ್ಹತೆಗೆ ಅನುಗುಣವಾಗಿರದೆ ಇರಬಹುದು - ಬಹಳ ಕಡಿಮೆ ವೇತನದ್ದು ಇರಬಹುದು, ಸಾಮಾನ್ಯ ವಾಸಕ್ಕಿಂತ ಎಷ್ಟು ದೂರದಲ್ಲಿರಬಹುದು) ಅವಕಾಶ ತೆಗೆದುಕೊಳ್ಳದಿದ್ದರೂ ಸಿಗುವುದಿಲ್ಲ.

ಸಾಮಾಜಿಕ ಕಲ್ಯಾಣದ ನಾಶ



'ಹರ್ಟ್ಜ್ 4' ಕಾನೂನು ಅದರ ಜನಕರು ಹೇಳಿದಂತೆ ಯಾವುದೇ ರೀತಿಯಲ್ಲಿ ಜರ್ಮನಿಯ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಆದರೆ ಜರ್ಮನಿಯ ಸಾಮಾಜಿಕ ಸ್ಥಿತಿಯನ್ನು, ಹಿಂದೆಂದೂ ಇಲ್ಲದ ಕೆಳಮಟ್ಟಕ್ಕೆ ಒಯ್ಯುತ್ತದೆ. ಇದು ಸಾಮಾಜಿಕ ವೆಚ್ಚವನ್ನು ಕಡಿತ ಮಾಡುವ ಆಳುವ ವರ್ಗಗಳ ಹೊಸ ಆಯುಧವಷ್ಟೆ. ಇದು ಹೊಸ ಉದ್ಯೋಗಗಳನ್ನು ಸೃಷ್ಟಿಸುವುದಿಲ್ಲ ಮಾತ್ರವಲ್ಲ, ಇರುವ ಉದ್ಯೋಗಗಳನ್ನು ನಾಶ ಮಾಡುತ್ತದೆ. ವೇತನದ ಮಟ್ಟವನ್ನು ಇಳಿಸುತ್ತಾ ಹೋಗುತ್ತದೆ. ದೊಡ್ಡ ಜನವಿಭಾಗದ ಕೊಳ್ಳುವ ಶಕ್ತಿಯ ಮೇಲೆ ದಾಳಿ ಮಾಡುವುದರಿಂದಾಗಿ, ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಶ್ರೀಮಂತ - ಬಡವರ ಅಂತರವನ್ನು ಅಗಾಧವಾಗಿ ಹೆಚ್ಚಿಸುತ್ತದೆ. ಬಡವರ ಸಂಖ್ಯೆ ಇಮ್ಮಡಿಯಾಗಬಹುದು- ಒಂದೇ ವರ್ಷದಲ್ಲಿ.

'ಸೋಮವಾರದರ್‍ಯಾಲಿ'ಗಳಿಗೆ ಭಾರಿ ಜನಬೆಂಬಲ ದೊರಕಿದ್ದು, ಇದು ವಿಶಿಷ್ಟ ಸಾಮೂಹಿಕ ಚಳುವಳಿಯಾಗಿ ರೂಪುಗೊಳ್ಳುತ್ತಿದೆ. ಪಶ್ಚಿಮ ಜರ್ಮನಿಯ ಶೇಕಡಾ 65 ಜನ 'ರ್‍ಯಾಲಿಗಳ ಬೇಡಿಕೆ' ಗಳಿಗೆ ಬೆಂಬಲ ನೀಡಿದ್ದಾರೆ. ಪೂರ್ವ ಜರ್ಮನಿಯಲ್ಲಿ, ಇನ್ನಷ್ಟು ಹೆಚ್ಚು ಶೇಕಡಾ 85. ಪೂರ್ವ ಜರ್ಮನಿಯಲ್ಲಿ ನಿರುದ್ಯೋಗ ದರ ಪಶ್ಚಿಮಕ್ಕಿಂತ ಇಮ್ಮಡಿ ಇದೆ. ಪ್ರತಿ ಹೊಸ ಉದ್ಯೋಗಕ್ಕೆ 55 ಜನ ನಿರುದ್ಯೋಗಿಗಳು ಕಾಯುತ್ತಿದ್ದಾರೆ. ಇಲ್ಲಿ ಸಾಮಾಜಿಕ ಸಮಾನತೆ, ನ್ಯಾಯದ ಪರಿಕಲ್ಪನೆ (ಹಿಂದಿನ ಸಮಾಜವಾದಿ ವ್ಯವಸ್ಥೆಯ ಅನುಭವದಿಂದಾಗಿ) ಬಲವಾಗಿರುವುದು ಕಾರಣವಿರಬಹುದು. ಮಾಜಿ ಕಮ್ಯುನಿಸ್ಟ್ ಪಕ್ಷಗಳ ವಾದದಿಂದಾಗಿ ಪಿಡಿಎಸ್ ಪಕ್ಷ ಮಾತ್ರ ರಾಜಕೀಯ ಪಕ್ಷಗಳಲ್ಲಿ ಈ ಚಳುವಳಿಗೆ ಬೆಂಬಲ ನೀಡಿದೆ. ಪಾರ್ಲಿಮೆಂಟಿನಲ್ಲೂ ಹೊರಗೂ ಸರ್ಕಾರದ ಮೇಲೆ ಇದನ್ನು ವಾಪಸು ಪಡೆಯುವಂತೆ ಒತ್ತಾಯಿಸುತ್ತಿದೆ.

ಶರತ್‌ಚಂದ್ರ

ಏಶ್ಯನ್ ರಾಜಕೀಯ ಪಕ್ಷಗಳ ಸಮ್ಮೇಳನ ಬೀಜಿಂಗ್‌ನಲ್ಲಿ

ಸೆಪ್ಟೆಂಬರ್ ಮೊದಲ ವಾರದಲ್ಲಿ ಬೀಜಿಂಗ್‌ನಲ್ಲಿ ಪಕ್ಷದ ರಾಜಕೀಯ ಪಕ್ಷಗಳ ಅಂತರ್ರಾಷ್ಟ್ರೀಯ ಸಮ್ಮೇಳನ ನಡೆಯಿತು. ಇದು ಇಂತಹ ಮೂರನೇ ಅಂತರ್ರಾಷ್ಟ್ರೀಯ ಸಮ್ಮೇಳನ. ಈ ಬಾರಿ ಚೀನಾದ ಕಮ್ಯುನಿಸ್ಟ್ ಪಕ್ಷ ಇದನ್ನು ಸಂಘಟಿಸಿತ್ತು. ಏಶ್ಯಾದ 84 ದೇಶಗಳಿಂದ 82 ರಾಜಕೀಯ ಪಕ್ಷಗಳು ಭಾಗವಹಿಸಿದ್ದವು. ಇದರಲ್ಲಿ 17 ದೇಶಗಳಿಂದ 18 ಕಮ್ಯುನಿಸ್ಟ್ - ಎಡ ಪಕ್ಷಗಳು ಸೇರಿದ್ದವು. ಸಿಪಿಐ(ಎಂ)ನಿಂದ ಸೀತಾರಾಂ ಯೆಚೂರಿ ಭಾಗವಹಿಸಿದ್ದರು.

ಸ್ವಾಭಾವಿಕವಾಗಿಯೇ ಎಲ್ಲಾ ಸಿದ್ಧಾಂತಗಳನ್ನು ಅನುಸರಿಸುವ ಎಡಬಲ,ಮಧ್ಯಮ ಆಳುವ ಮತ್ತು



ವಿರೋಧ - ಪಕ್ಷಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದವು. ಆದ್ದರಿಂದ ಸಮಾನ ಅಂಶಗಳನ್ನು ಕಾಣುವುದು, ಸಮಾನ ಧೋರಣೆ ರೂಪಿಸುವುದು ಕಷ್ಟಸಾಧ್ಯವೇ ಆಗಿತ್ತು. ಆದರೂ ಆರ್ಥಿಕ ಜಾಗತೀಕರಣದ ಹೊಡೆತದ ಹಿನ್ನೆಲೆಯಲ್ಲಿ ಇಡೀ ಏಶ್ಯಾದ ದೇಶಗಳ-ಜನಗಳ ಹಿತಾಸಕ್ತಿ ಎತ್ತಿ ಹಿಡಿಯಲು ಸಮಾನ ಧೋರಣೆ ರೂಪಿಸುವ ಆಶಯ ಸಮ್ಮೇಳನದಲ್ಲಿ ಬಲವಾಗಿ ಕಂಡುಬಂತು. ಡಬ್ಲ್ಯುಟಿಓ ಮುಂತಾದ ಬಹುಪಕ್ಷೀಯ ಅಂತರ್ರಾಷ್ಟ್ರೀಯ ವೇದಿಕೆಗಳಲ್ಲಿ ಒಂದು ಶಕ್ತಿಯಾಗಿ ಹೊರಹೊಮ್ಮಬೇಕು ಎಂಬ ಆಶಯ ವ್ಯಕ್ತವಾಯಿತು. 'ವಿನಿಮಯ ಸಹಕಾರ ಮತ್ತು ಬೆಳವಣಿಗೆ' ಸಮ್ಮೇಳನದ ವಿಷಯವಾಗಿದ್ದು, ಬೆಳವಣಿಗೆ ಪ್ರಾದೇಶಿಕ ಸಹಕಾರದ ಸಾಧ್ಯತೆಗಳನ್ನು ಹುಡುಕುವ ಪ್ರಯತ್ನ ನಡೆಯಿತು.

ಎರಡು ಜನಸಂಖ್ಯೆಯಲ್ಲಿ ಅತಿದೊಡ್ಡ ದೇಶಗಳು (ಭಾರತ, ಚೀನಾ) ಅತ್ಯಂತ ವೇಗವಾಗಿ ಬೆಳೆಯುತ್ತಿರುವ (ಚೀನಾ) ಮತ್ತು ಅಭಿವೃದ್ಧ (ಜಪಾನ್), ಮರಿ ಹುಲಿ ಆರ್ಥಿಕಗಳು - ಹೀಗೆ ಏಶ್ಯಾದ ಆರ್ಥಿಕ ಬಲವನ್ನು ರಾಜಕೀಯ ಶಕ್ತಿಯಾಗಿ ಪರಿವರ್ತಿಸಬೇಕು ಎಂಬ ಆಶಯ ಸಹ ವ್ಯಕ್ತವಾಯಿತು. ಸಮ್ಮೇಳನದ ಕೊನೆಯಲ್ಲಿ 'ಬೀಜಿಂಗ್ ಘೋಷಣೆ - 2004' ಎಂಬ ಹೇಳಿಕೆ ಬಿಡುಗಡೆ ಮಾಡಲಾಯಿತು. ಸಮ್ಮೇಳನದಲ್ಲಿ ಭಾಗವಹಿಸಿದ ಪಕ್ಷಗಳ ಧೋರಣೆಯಲ್ಲಿರುವ ವೈವಿಧ್ಯತೆಯ ಹಿನ್ನೆಲೆಯಲ್ಲಿ, ಈ ಹೇಳಿಕೆ ಹಲವು ತಾಕಲಾಟಗಳ ನಡುವಿನ ಹೊಂದಾಣಿಕೆಯನ್ನು ಪ್ರತಿಬಿಂಬಿಸುತ್ತದೆ.

ಈ ಸಮ್ಮೇಳನಕ್ಕೆ ಚೀನಾದ ಕಮ್ಯುನಿಸ್ಟ್ ಪಕ್ಷ ಮಹತ್ವದ ಸ್ಥಾನ ನೀಡಿತ್ತು. ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ದೇಶದ ಅಧ್ಯಕ್ಷ ಸ್ವತಃ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಸಮ್ಮೇಳನದ ಆಶಯ ಭಾಷಣವನ್ನು ಇನ್ನೊಬ್ಬ ಪಾಲಿಟ್‌ಬ್ಯೂರೋ ಸದಸ್ಯ ಮತ್ತು ದೇಶದ ಉಪಾಧ್ಯಕ್ಷ ಮಾಡಿದರು. ಸಮ್ಮೇಳನ ಎಡ ಕಮ್ಯುನಿಸ್ಟ್ ಪಕ್ಷಗಳ ನಡುವೆ ಮಾತುಕತೆ - ಅಭಿಪ್ರಾಯ ವಿನಿಮಯಕ್ಕೂ ವೇದಿಕೆ ಆಗಿತ್ತು. ಘೋಷಣೆಯ ಕೆಲವು ಹೇಳಿಕೆಗಳು ಬಾಕ್ಸ್‌ನಲ್ಲಿವೆ.

ಅಸಮಾನ ವ್ಯವಸ್ಥೆ

"........ ಪ್ರಸ್ತುತ ಅಂತರ್ರಾಷ್ಟ್ರೀಯ ವ್ಯವಸ್ಥೆಯಲ್ಲಿರುವ ಅಸಮಾನತೆ, ಅನ್ಯಾಯಗಳನ್ನು - ಸಮಾನತೆ, ಸಹಕಾರ, ಪರಸ್ಪರ ನಂಬಿಕೆ, ಪರಸ್ಪರ ಪ್ರಯೋಜನಗಳ ಆಧಾರದ ಮೇಲೆ - ಕ್ರಮೇಣ ಸುಧಾರಿಸುವತ್ತ ನಾವು ಕೆಲಸ ಮಾಡಬೇಕು......"

ಭಯೋತ್ಪಾದನೆ

"........... ಭಯೋತ್ಪಾದನೆಯ ಮೂಲ ಕಾರಣಗಳನ್ನು ಗುರುತಿಸಿ ಅದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವುದು, ಅದರ ವಿರುದ್ಧ ಹೋರಾಡಲು ಸಾರ್ವಭೌಮ ದೇಶಗಳ ಮತ್ತು ಪ್ರಾದೇಶಿಕ ಸಂಘಟನೆಗಳು ಸಹಕರಿಸುವುದು ಅಗತ್ಯ. ಇದರಲ್ಲಿ ವಿಶ್ವಸಂಸ್ಥೆಯ ಪಾತ್ರಕ್ಕೆ ವಿಶೇಷ ಮಹತ್ವ ನೀಡಬೇಕು. ಇಬ್ಬಗೆಯ ನೀತಿಗಳಿಗೆ ಇಲ್ಲಿ ಅವಕಾಶ ಇರಬಾರದು. ನಿರ್ದಿಷ್ಟ ಜನಾಂಗ ಅಥವಾ ಪ್ರದೇಶವನ್ನು ಭಯೋತ್ಪಾದನೆ ಜತೆ ಸಂಬಂಧ ಕಲ್ಪಿಸುವ ತಪ್ಪು ಮಾಡಬಾರದು..... ...."

- ಬೀಜಿಂಗ್ ಘೋಷಣೆ 2004 ರಿಂದ

"ಏಕಧ್ರುವೀಯತೆಗೆ ಪ್ರತಿರೋಧ ಒಡ್ಡಿ..." - ಯೆಚೂರಿ

ಶೀತಲಸಮರ ಮುಗಿದ ನಂತರ ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ದ್ವಿ-ಧ್ರುವೀಯತೆಯಿಂದ ಬಹು- ಧ್ರುವೀಯತೆಯತ್ತ ಸ್ವಾಭಾವಿಕ ಬೆಳವಣಿಗೆಯಾಗಬೇಕಿತ್ತು. ಈ ಸ್ವಾಭಾವಿಕ ಬೆಳವಣಿಗೆಯನ್ನು ತಡೆದು ಏಕ-ಧ್ರುವೀಯತ್ತ ತಳ್ಳುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಇಂತಹ ಪ್ರಯತ್ನಗಳಿಗೆ ತೀವ್ರ ಐಕ್ಯ ಪ್ರತಿರೋಧ ಒಡ್ಡಬೇಕು. ನಿಜವಾದ ಬಹು-ಧ್ರುವೀಯ ಜಗತ್ತು ನಿರ್ಮಾಣದಲ್ಲಿ ತೊಡಗಬೇಕು...... ಈ ಇಡೀ ಪ್ರದೇಶದಿಂದ ಎಲ್ಲಾ ವಿದೇಶಿ ಮಿಲಿಟರಿ ನೆಲೆಗಳನ್ನು ತೆರವು ಮಾಡಲು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ಇದು ಬಹು-ಧ್ರುವೀಯತೆ ಸ್ಥಾಪಿಸಲು, ಏಕ ಧ್ರುವೀಯತೆ ಹೇರಿಸುವುದನ್ನು ತಡೆಯಲು ಅಗತ್ಯ........... ನಮ್ಮ ಜನತೆಯ ಹಿತಾಸಕ್ತಿ ಕಾಪಾಡಲು ನಾವು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಬೇಕು. ಡಬ್ಲ್ಯುಟಿಓ ನಂತರ ಬಹು-ಪಕ್ಷೀಯ ಒಪ್ಪಂದಗಳು, ಇತರ ದ್ವಿ-ಪಕ್ಷೀಯ ಒಪ್ಪಂದಗಳು ನಮ್ಮ ಆರ್ಥಿಕ ಸಾರ್ವಭೌಮತೆಯನ್ನು ಗೌರವಿಸಬೇಕು..... ಇದು ಸಾಧ್ಯವಾಗುವಂತೆ ನಾವು ಐಕ್ಯ ಕ್ರಮಗಳನ್ನು ಕೈಗೊಳ್ಳಬೇಕು.

[illegible]



ಕಲೆ : ವಿವಂ ಸುಂದರಂ

ಎ.ಕೆ.ಜಿ. ನೆನಪು

ಪ್ರಿಯ ಸಂಗಾತಿಯೊಂದಿಗೆ ಒಡನಾಡಿದ ತಮ್ಮ ನೆನಪುಗಳ ಸುರಳಿಯನ್ನು ಇಲ್ಲಿ ಬಿಚ್ಚಿದ್ದಾರೆ ಕಾಂ. ಸುರ್ಜಿತ್, ಶತಮಾನೋತ್ಸವದ ಸಂದರ್ಭದಲ್ಲಿ

ಅಕ್ಟೋಬರ್ 1, 2004 ರಂದು ಬದುಕಿದ್ದರೆ ಎ.ಕೆ.ಗೋಪಾಲನ್ ರವರಿಗೆ ನೂರು ವರ್ಷಗಳು ತುಂಬಿರುತ್ತಿತ್ತು. ಅವರ ಜನ್ಮಶತಾಬ್ದಿಯನ್ನು ದೇಶಾದ್ಯಂತ, ವಿಶೇಷವಾಗಿ ಕೇರಳದಲ್ಲಿ ಸಿಪಿಐ(ಎಂ) ಪಕ್ಷ ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಿದೆ.

ನಾನು 40 ವರ್ಷಗಳಿಗೂ ಹೆಚ್ಚು ಕಾಲ ಎ.ಕೆ.ಜಿ. ಯವರೊಡನೆ ನಿಕಟ ಒಡನಾಟ ಹೊಂದಿದ್ದೆ. ಎ.ಕೆ.ಜಿ. ಸಂಸತ್ತಿನಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡರಾಗಿದ್ದಾಗ ನಾವು ನವದೆಹಲಿಯಲ್ಲಿ 4 ಅಶೋಕ ರಸ್ತೆಯ ನಿವಾಸದಲ್ಲಿ ಒಟ್ಟಿಗೇ ವಾಸಿಸುತ್ತಿದ್ದೆವು. ಆ ಬಂಗಲೆ ಸಂಸತ್ ಸದಸ್ಯರಾಗಿ ಅವರ ಹೆಸರಿಗೆ ಬಂದಿತ್ತು. ಆ ದಿನಗಳ ಸವಿನೆನಪುಗಳು ಈಗಲೂ ಇವೆ. ಅವರ ಪತ್ನಿ ಮತ್ತು ಸಂಗಾತಿ ಸುಶೀಲಾ ಗೋಪಾನ್ ಸ್ವತಃ ಒಬ್ಬ ಅತ್ಯುತ್ತಮ ಕಮ್ಯುನಿಸ್ಟರಾಗಿದ್ದು ಅವರೂ ಅಲ್ಲೇ ಇರುತ್ತಿದ್ದರು.

ಅವರು ಸ್ನೇಹಮಯ ಸಂಗಾತಿ, ತನ್ನ ಸಂಗಾತಿಗಳ ಬಗ್ಗೆ ಸದಾ ಕೇಳುವ, ಅವರ ಅಗತ್ಯಗಳನ್ನು ಪೂರೈಸುವ ಸಂಗಾತಿ. ಅತ್ಯುತ್ತಮ ಮುಖಂಡರಾಗಿದ್ದವರು. ಬಡವರು ಮತ್ತು ತುಳಿತಕ್ಕೊಳಗಾದವರ ಬಗ್ಗೆ ಅವರಲ್ಲಿ ಆಳವಾದ ಭಾವನೆಗಳಿದ್ದವು. ಅವರೂ ಎ.ಕೆ.ಜಿ.ಯೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಭಿನ್ನಾಭಿಪ್ರಾಯಗಳಿದ್ದರೂ ಇತರರ ಅಭಿಪ್ರಾಯಗಳನ್ನು ಗೌರವಿಸುವ ಸಹಯೋಗಿ ಅವರು. ಹಲವರಿಗೆ ಅವರು ಒಬ್ಬ ಸಂತನಂತೆ - ತನ್ನ ಬಳಿ ಯಾರೇ ಬಂದರೂ ಅವರ ಮಾತಿಗೆ ಕಿವಿಗೊಡುತ್ತಿದ್ದರು. ಕೇರಳದ ಲಕ್ಷಾಂತರ ಮಂದಿಗಂತೂ ಎ.ಕೆ.ಜಿ. ಒಬ್ಬ ಅರಾಧ್ಯ ದೈವ.

ಅವರ ಈ ಗುಣಗಳು ದೇಶದ ರಾಜಕೀಯ ಮುಖಂಡರಲ್ಲಿ ಅವರನ್ನು ಭಿನ್ನದಾಗಿಸಿದ್ದವು.

- ಜಾತಿಯ ದಮನದ ವಿರುದ್ಧ ಸಿಡಿದೆದ್ದ ಎಕೆಜಿ1

ಎ.ಕೆ.ಜಿ.ಯ ಜೀವನದ ಆರಂಭದ ರಾಜಕೀಯ ಘಟನೆಗಳಲ್ಲಿ ಗುರುವಾಯೂರು ದೇವಸ್ಥಾನ ಪ್ರವೇಶ ಆಂದೋಲನ ಪ್ರಮುಖವಾಗಿತ್ತು. 1931 ರಲ್ಲಿ ಅಮಾನವೀಯ ದಮನವನ್ನು ಎದುರಿಸಿ ಎಕೆಜಿಯವರು ಕೆಳ ಜಾತಿಯವರಿಗೆ ದೇವಸ್ಥಾನ ಪ್ರವೇಶದ ಹಕ್ಕನ್ನು ಕೊಡಬೇಕೆಂದು ಒತ್ತಾಯಿಸಿದ ಸತ್ಯಾಗ್ರಹಿಗಳ ತಂಡಗಳ ನೇತೃತ್ವ ವಹಿಸಿದರು. ಇದು ಸಾಮಾಜಿಕ ವ್ಯವಸ್ಥೆಗೆ ಸವಾಲು ಒಡ್ಡಿ ಗಮನಾರ್ಹ ಪರಿಣಾಮಗಳನ್ನುಂಟು ಮಾಡಿದ ಒಂದು ಆಂದೋಲನವಾಯಿತು.

ಜ್ಞಾನದಾಹಿ ಹೋರಾಟಗಾರ

ಕಾಯ್ದೆ ಭಂಗ ಚಳುವಳಿಯನ್ನು ಹಿಂತೆಗೆದುಕೊಂಡದ್ದರಿಂದ ಖಿನ್ನರಾಗಿ ಹಾಗೂ ಕಾಂಗ್ರೆಸ್ಸಿನಿಂದ ಭ್ರಮನಿರಸಗೊಂಡು ಎ.ಕೆ.ಜಿ. ಕೇರಳದಲ್ಲಿ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸ್ಥಾಪಿಸುವಲ್ಲಿ ಮುಂಚೂಣಿಯಲ್ಲಿದ್ದರು. ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟವನ್ನು ಸಾಮಾಜಿಕ ಕ್ರಾಂತಿಯ ಹೋರಾಟದೊಂದಿಗೆ ಬೆಸೆಯಲು ಈ ಪಕ್ಷವನ್ನು ಸ್ಥಾಪಿಸಲಾಯಿತು. **ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಯಶಸ್ಸು ಅವರಿಗೆ ಒಂದು ದೊಡ್ಡ ಸ್ಫೂರ್ತಿಯ ಸೆಲೆಯಾಗಿತ್ತು. ಅವರ ಅಪಾರ ಜ್ಞಾನದಾಹ ಅವರನ್ನು ವೈಜ್ಞಾನಿಕ ಸಮಾಜವಾದದ ಸಿದ್ಧಾಂತದತ್ತ ಒಯ್ಯಿತು.** ಈ ಅವಧಿಯಲ್ಲೇ 1938 ರಲ್ಲಿ ಎ.ಕೆ.ಜಿ.ಯವರು ಪಿ.ಕೃಷ್ಣಪಿಳ್ಳೈ ಮತ್ತು ಇ.ಎಂ.ಎಸ್. ನಂಬೂದರಿ ಪಾಡ್‌ರೊಂದಿಗೆ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿದರು. ಅದಾಗ ಕಾನೂನುಬಾಹಿರವಾಗಿತ್ತು.

ನಲ್ವತ್ತರ ದಶಕದಲ್ಲಿ ಅವರು ತಲೆಮರೆಸಿಕೊಳ್ಳಬೇಕಾಗಿ ಬಂದಾಗ ನಾನು ಅವರನ್ನು ಪಂಜಾಬಿನ ಭಟಿಂಡಾಕ್ಕೆ ಒಯ್ದು ನಮ್ಮ ಆಂದೋಲನದ ಹಿತೈಷಿ ಕುಟುಂಬವೊಂದರ ಆರೈಕೆಯಲ್ಲಿ ಇರಿಸಿದ್ದೆ.

ಸಂಸತ್ತಿನಲ್ಲಿ ಕ್ರಾಂತಿಕಾರಿ ಪಾತ್ರ

ಸಂಸತ್ತಿಗೆ ಚುನಾಯಿತರಾದಾಗ ಅವರು ತಾನೊಂದು ಬೇರೆಯೇ ರೀತಿಯ ಶಾಸಕ ಎಂದು ತೋರಿಸಿಕೊಟ್ಟರು. ಅವರೊಬ್ಬ ಕ್ರಾಂತಿಕಾರಿ ಸಂಸದೀಯರಾಗಿದ್ದರು. ಜನಗಳ, ವಿಶೇಷವಾಗಿ ಕಾರ್ಮಿಕವರ್ಗ ಮತ್ತು ರೈತಾಪಿ ಜನಗಳ ಪ್ರಶ್ನೆಗಳನ್ನು, ಬೇಡಿಕೆಗೆ ಸಂಸತ್ತಿನಲ್ಲಿ ದನಿ ನೀಡುತ್ತಿದ್ದರು. ಅವರ ಸಂಸದೀಯ 25 ವರ್ಷಗಳಲ್ಲಿ ಅವರು ಹಲವು ಮಂತ್ರಿಗಳನ್ನು, ಅಧಿಕಾರಿಗಳನ್ನು ನಿರ್ದಯವಾಗಿ ಬಯಲಿಗೆಳೆದರು. ಅವರ ರಾಜಕೀಯ ವಿರೋಧಿಗಳು ಕೂಡಾ ಭಿನ್ನಾಭಿಪ್ರಾಯಗಳಿದ್ದರೂ ಎ.ಕೆ.ಜಿ.ಯವರ ಭಾಷಣಗಳನ್ನು ಗಮನವಿಟ್ಟು ಕೇಳುತ್ತಿದ್ದರು. ಅವರು ಗಳಿಸಿದ್ದ ಗೌರವ, ... ಈ ರೀತಿಯದ್ದು.

ನಿಷ್ಠುರ ದೃಷ್ಟಿ : ತೆರೆದ ಮನಸ್ಸು

ತನ್ನ ದೃಷ್ಟಿಕೋನವನ್ನು ನೇರವಾಗಿ ಮುಂದಿಡುವ ಒಂದು ಆರೋಗ್ಯಕರ ಸ್ವಭಾವ ಅವರದಾಗಿತ್ತು. ತನ್ನ ಜೀವನದ ಕೊನೆಯವರೆಗೂ ಅವರು ಇದನ್ನು ಪಾಲಿಸಿದರು. ಒಂದು ಭಿನ್ನ ಅಭಿಪ್ರಾಯ ಎದುರಾದಾಗಲೂ ಅವರು ಅದನ್ನು ಕೇಳಲು ಹಾಗೂ ಇತರರ ದೃಷ್ಟಿಕೋನ ಸರಿಯೆನಿಸಿದರೆ ಅದನ್ನು ಸ್ವೀಕರಿಸಲು ಹಾಗೂ ತನ್ನನ್ನು ಸರಿಪಡಿಸಿಕೊಳ್ಳಲು ಸದಾ ಸಿದ್ಧರಿರುತ್ತಿದ್ದರು. ತನ್ನ ವಿರುದ್ಧ ಮಾಡುವ ಟೀಕೆಗಳಿಂದ ಅವರು ಕಲಿಯುತ್ತಿದ್ದರು. ಇತರರ ದೃಷ್ಟಿಕೋನಗಳನ್ನು ಟೀಕಿಸಲೂ ಅವರು ಹಿಂಜರಿಯುತ್ತಿರಲಿಲ್ಲ. ಹಲವು ಮುಖಂಡರಲ್ಲಿ ಸಾಮಾನ್ಯವಾಗಿ ಕಾಣುವ ಅಹಂನ ಛಾಯೆಯೂ ಅವರನ್ನು ತಟ್ಟಿರಲಿಲ್ಲ.

ಜನರ ನಡುವೆ ಸದಾ

ಈ ಮೇಲೆ ಹೇಳಿದಂತೆ ಅವರು ಜನತೆಯ ವ್ಯಕ್ತಿ. ಸದಾ ತನ್ನನ್ನು ಜನರ ಸಮಸ್ಯೆಗಳೊಂದಿಗೆ ಗುರುತಿಸಿಕೊಂಡು ಅವರ ನಡುವೆಯೇ ಇರುತ್ತಿದ್ದವರು. ಪ್ರತಿದಿನ ಬೆಳಿಗ್ಗೆ ಪತ್ರಿಕೆಗಳಲ್ಲಿ ಹೋರಾಟದ ಹಾಗೂ ಆಳುವ ವ್ಯವಸ್ಥೆಯೊಡನೆ ಸಂಘರ್ಷದ ಸುದ್ದಿ ಎಲ್ಲಿಯದೇ ಆಗಿರಲಿ, ಅಲ್ಲಿಗೆ ಧಾವಿಸುತ್ತಿದ್ದರು - ಕೆಲವೊಮ್ಮೆ ಇತರರೊಡನೆ ಸಮಾಲೋಚಿಸುತ್ತಲೂ ಇರಲಿಲ್ಲ. ಅದು ಪಂಜಾಬಿನ ಬೆಟರ್‌ಮೆಂಟ್ ಲೆವಿ ಹೋರಾಟವಾಗಿರಬಹುದು ಅಥವಾ ದೇಶದ ಇನ್ಯಾವುದೇ ಸ್ಥಳದಲ್ಲಿ ನಡೆಯುತ್ತಿದ್ದ ಹೋರಾಟವಾಗಿರಬಹುದು. ಇಂತಹ ಹೋರಾಟಗಳಲ್ಲಿ ಅವರು ಭಾಗವಹಿಸುತ್ತಿದ್ದನ್ನು ಆ ಪ್ರದೇಶಗಳ ಜನ ಇನ್ನೂ ನೆನಪಿಸಿಕೊಳ್ಳುತ್ತಿದ್ದಾರೆ. ಜನಗಳ ಬಗೆಗಿದ್ದ ಅವರ ಪ್ರೀತಿ ಅಂತಹದ್ದು. ಈ ಗುಣ ಇಂದು ಕಂಡುಬರುತ್ತಿಲ್ಲ.

ಪಥ ಪ್ರದಶಕರು

ಪಿ.ಕೃಷ್ಣ ಪಿಳ್ಳೆ, ಇ.ಎಂ.ಎಸ್. ನಂಬೂದರಿ ಪಾಡ್ ಮತ್ತು ಎ.ಕೆ.ಗೋಪಾಲನ್ ಕೇರಳದಲ್ಲಿ ಕಮ್ಯುನಿಸ್ಟ್ ಆಂದೋಲನದ ಮೂರು ಕಂಬಗಳು. ಗುರುವಾಯೂರು ದೇವಸ್ಥಾನ ಪ್ರವೇಶ ಆಂದೋಲನದಲ್ಲಿ ಅವರ ಪಥ ಪ್ರದರ್ಶಕ ಪಾತ್ರ, ಒಬ್ಬ ಕಾಂಗ್ರೆಸ್ಸಿನಿಂದ ಒಬ್ಬ ಕಮ್ಯುನಿಸ್ಟನಾಗಿ ಅವರ ಪರಿವರ್ತನೆ, ಸಾಮಾಜಿಕ ದಮನದ ಪ್ರಶ್ನೆಗಳನ್ನು ಅವರು ಕೈಗೆತ್ತಿಕೊಂಡಿದ್ದು ಇವೆಲ್ಲಾ ಇಂದೂ ನಮ್ಮಲ್ಲಿ ಸ್ಫೂರ್ತಿ ತುಂಬು ಅನುಭವಗಳು.

ಮಾರ್ಗದರ್ಶಿ

ಎಕೆಜಿ ಕೇವಲ ಸ್ಫೂರ್ತಿಯಷ್ಟೇ ಅಲ್ಲ. ಅವರ ಬದುಕು, ಕೆಲಸ ಮುಂದಿನ ತಲೆಮಾರುಗಳಿಗೆ ಒಂದು ಮಾರ್ಗದರ್ಶಿ. ಸರಳ ಜೀವನ, ಜನಗಳಿಗಾಗಿ ಸಂಪೂರ್ಣ ಸಮರ್ಪಣೆ, ಸ್ವಾರ್ಥ ತ್ಯಾಗ, ಸದಾ ಜನತೆಯ ಸೇವೆಯಲ್ಲಿ ತಪ್ಪದ ಕಾಮ್ರೇಡ್ ಎಕೆಜಿ ದೇಶದ ರಾಜಕಾರಣಿಗಳಲ್ಲೇ ಸಂಪೂರ್ಣವಾಗಿ ಭಿನ್ನವಾದ ವ್ಯಕ್ತಿತ್ವ. ಅವರಿನ್ನು ಮುಂದೆಯೂ ಸ್ಫೂರ್ತಿದಾತರು, ಪ್ರೀತಿಪಾತ್ರರು. ○



'ವೈಜ್ಞಾನಿಕ ಸಮಾಜವಾದ' ಪರಿಚಯಿಸುವ ಕೈಪಿಡಿ

'ವೈಜ್ಞಾನಿಕ ಸಮಾಜವಾದ' ಎಂಬ ಕಿರುಹೊತ್ತಿಗೆಯನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷದ ನಾಯಕರಾದ ಸಂಗಾತಿ ಬಿ.ವಿ.ಕಕ್ಕಿಲಾಯರು ಬರೆದಿದ್ದು ಅದು ಇತ್ತೀಚಿಗೆ ಮಂಗಳೂರಿನಲ್ಲಿ ಬಿಡುಗಡೆಗೊಂಡಿತು. ಅವರ ಆರೋಗ್ಯ ಮತ್ತು ಕಣ್ಣಿನ ದೃಷ್ಟಿಯ ಸಮಸ್ಯೆಗಳನ್ನು ಅವರೇ ಉದ್ಘಾಟನಾ ಸಮಾರಂಭದಲ್ಲಿ ಹೇಳಿದಂತೆ ಗ್ರಹಿಸುವುದಾದರೆ ಅವರ ಪ್ರಯತ್ನ ಸರ್ವದಾ ಪ್ರಶಂಸಾರ್ಹವೇ ಆಗಿದೆ. ಓರ್ವ ಸಹಾಯಕಿಯವರಿಂದ ಓದಿಸಿ ಅನಂತರ ಬರೆಸಿ ಪುನಃ ಓದಿಸಿ ಎಂದು ಸುಮಾರು ಒಂದು ವರ್ಷದೀರ್ಘ ಅವಧಿಯನ್ನು ಈ ಪುಸ್ತಕಕ್ಕಾಗಿ ವ್ಯಯಿಸಿದ್ದಾರೆ.

ವೈಜ್ಞಾನಿಕ ಸಮಾಜವಾದದ ವಸ್ತು ವಿಶ್ಲೇಷಣೆಯು ಒಳಗೊಂಡಿರುವ ಪಠ್ಯ ಸುಮಾರು 73 ಪುಟಗಳ ವರೆಗೆ ಸಾಕಷ್ಟು ಸರಳ ನಿರೂಪಣೆಯಿಂದ ಮತ್ತು ಉತ್ತಮವಾದ ಸರಳ ಉದಾಹರಣೆಗಳೊಂದಿಗೆ ಓದುಗರನ್ನು ತಲುಪುತ್ತದೆ. ಇದು ಉಪಯುಕ್ತವಾಗಿದೆ. ಆದರೆ ಪುಟಸಂಖ್ಯೆ 73 ರನಂತರ ಅವರು ಸೇರಿಸಿರುವ 'ಸ್ವಾತಂತ್ರ್ಯದ ಹೋರಾಟದ ಜತೆಗೆ' ಎಂಬ ಶೀರ್ಷಿಕೆಯಡಿಯಲ್ಲಿನ ವಿಷಯ ಅಪ್ರಸ್ತುತವೆಂದು ಕಾಣುತ್ತದೆ. ಏಕೆಂದರೆ ಈ ವಿಭಾಗದಲ್ಲಿ ಬರುವ ಸಾಕಷ್ಟು ವಿಷಯಗಳು ಟ್ರೇಡ್ ಯೂನಿಯನ್ ವಿವರಗಳೊಂದಿಗೆ ಅವುಗಳ ಸಫಲತೆ ವಿಫಲತೆಗಳನ್ನು ಒಳಗೊಂಡಿದೆ. ಇದು 'ಪ್ಲಿನಂ'ನ ವರದಿಯಂತಾಗಿದೆ. ಎಡಪಂಥೀಯ ಚಳುವಳಿಗೆ ಏನೊಂದೂ ಸಂಬಂಧವಿಲ್ಲದ ಹೊಸ ಓದುಗರಿಗೆ ಇದರ ಅವಶ್ಯಕತೆಯೇ ಇಲ್ಲ. ಮಾತ್ರವಲ್ಲ ನಮ್ಮ ಪ್ರಾಯೋಗಿಕ ವೈಫಲ್ಯಗಳು ಸಮಾಜವಾದದ ತಾತ್ವಿಕತೆಗೆ ಯಾಕೆ ತಡೆಯೊಡ್ಡಬೇಕು?

ಎರಡನೆಯದಾಗಿ ಚೀನಾ ದೇಶದ ಕಮ್ಯುನಿಸ್ಟ್ ಪಕ್ಷದ ಬಗ್ಗೆ, ಸಿಪಿಐ ಪಕ್ಷದ ಅಧಿಕೃತ ಧೋರಣೆಯನ್ನು ವಿಷದಪಡಿಸಿರುವುದು ವಿಷಾದಕರ ಸಂಗತಿ. 'ನಿರ್ದಿಷ್ಟ ಪರಿಸ್ಥಿತಿಯ ನಿರ್ದಿಷ್ಟ ವಿಶ್ಲೇಷಣೆ' ಎಂಬುದು ಮಾರ್ಕ್ಸ್‌ವಾದಿ ಚಿಂತನೆಯ ಪರಿಕಲ್ಪನೆಯಾದ ಕಾರಣ ಆಯಾಯ ಸ್ಥಿತಿಗತಿಗನುಗುಣವಾಗಿ ಆಯಾಯ ರಾಷ್ಟ್ರಗಳಲ್ಲಿ ಸಮಾಜವನ್ನು ವಿಶ್ಲೇಷಿಸಿ, ವೈಜ್ಞಾನಿಕ ಸಮಾಜವಾದಿ ಬದ್ಧತೆಯೊಂದಿಗೆ ಕಟ್ಟಿ ಬೆಳೆಸುವುದು ಅಗತ್ಯವಿದೆ. ಅದು ಆಯಾಯ ದೇಶಗಳ ಕಮ್ಯುನಿಸ್ಟ್ ನೇತೃತ್ವದ ವ್ಯಾಪ್ತಿಗೆ ಬಿಟ್ಟ ವಿಷಯವೂ ಹೌದು. ಆದುದರಿಂದ ಮಾರ್ಕ್ಸ್‌ವಾದದ ಮೂಲ ತತ್ವಗಳ ಅವರ ಈ ಪುಸ್ತಕದಲ್ಲಿ ಮೇಲ್ಕಂಡ ಚಿಂತನೆಯ ಅಗತ್ಯವಿರಲಿಲ್ಲ. ಮಾತ್ರವಲ್ಲ ಚೀನಾದ ಬಗ್ಗೆ ಉಲ್ಲೇಖಿತವಾದ ಸಂಗತಿಗಳು ಗಂಭೀರ ಆಕ್ಷೇಪಕ್ಕೆ ಎಡೆ ಮಾಡಿಕೊಡುತ್ತದೆ. ವಿಮರ್ಶಕ ಭಾವ ಅಗತ್ಯವಾದರೂ ಸಾಮಾನ್ಯ ಓದುಗರಲ್ಲಿ ಚೀನಾದ ಬಗ್ಗೆ ಅಪನಂಬಿಕೆ ಬೆಳೆಸಲು ಆಸ್ಪದ ನೀಡುತ್ತದೆ ಎನಿಸುತ್ತದೆ. ಇದು ಪ್ರಗತಿಪರ ಶಕ್ತಿಗಳಲ್ಲಿ ಮುಖ್ಯವಾಗಿ ಭಾರತದಲ್ಲಿ ವೈಜ್ಞಾನಿಕ ಸಮಾಜವಾದದಲ್ಲಿ ನಂಬಿಕೆ ಇಟ್ಟಿರುವ ಮತ್ತು ಭವಿಷ್ಯದಲ್ಲಿ ಇಡಬಹುದಾದ ಸಂಗಾತಿಗಳಿಗೆ ಯಾವ ಸಂದೇಶ ನೀಡಿದಂತಾಗುತ್ತದೆ? ಸದ್ಯದ ಪರಿಸ್ಥಿತಿಯಲ್ಲಿ ಚೀನಾ ದೇಶದ ಅತ್ಯಮೋಘ ಸಾಧನೆಗೆ ಆ ದೇಶದ ನಾಯಕತ್ವ ವೈಜ್ಞಾನಿಕ ಸಮಾಜವಾದವೇ ಸ್ಫೂರ್ತಿ ಎಂದು ಹೇಳುವಾಗ ನಾವು ಅದನ್ನು ಅಲ್ಲಗಳೆಯುವುದು ಎಷ್ಟು ಸರಿ?

ಪ್ರಾರಂಭದ ಅಧ್ಯಾಯಗಳಲ್ಲಿ ಕೂಡಾ ಸಮಾಜವಾದಿ ರಾಷ್ಟ್ರಗಳನ್ನು ಉಲ್ಲೇಖಿಸುವಾಗ ಚೀನಾವನ್ನು ಪ್ರಸ್ತಾಪಿಸಲಾಗುವುದಿಲ್ಲ. ಬಹುಶಃ ಅದು ಉದ್ದೇಶಪೂರ್ವಕವಲ್ಲ ಎನಿಸಿದರೂ ಕೊನೆಯ ಅಧ್ಯಾಯದಲ್ಲಿ ಅದು ಉದ್ದೇಶಪೂರ್ವಕವಾಗಿ ಮಾಡಲಾಗಿದೆ ಎಂದು ಗೊತ್ತಾಗುತ್ತದೆ.

ಈ ಗ್ರಂಥದಲ್ಲಿ ಶುಷ್ಕವಾದ, ಅಜ್ಜ ನೆಟ್ಟ ಆಲದ ಮರವನ್ನೇ ಆಶ್ರಯಿಸಿ ಹೇಳುವ ಧಾರ್ಮಿಕ ಪರಿಭಾಷೆಯ ಶಬ್ದಗಳನ್ನು ಪ್ರಜ್ಞಾಪೂರ್ವಕವಾಗಿ ಉಪಯೋಗಿಸದಿರುವುದು ಸಂತೋಷದ ಸಂಗತಿ. ದುರಾದೃಷ್ಟ, ಆತ್ಮತೃಪ್ತಿ, ಆತ್ಮನಂಬಿಕೆ, ಅದೃಷ್ಟ, ಆತ್ಮಹತ್ಯೆ ಮೊದಲಾದವುಗಳನ್ನು ವಾಕ್ಯ ಪ್ರಯೋಗದಲ್ಲಿ ಉಪಯೋಗಿಸಲಾಗಿಲ್ಲ.

ಒಟ್ಟಿನಲ್ಲಿ ಮೇಲ್ಕಂಡ ಕೊನೆಯ ಅಧ್ಯಾಯಗಳ ಇತಿಮಿತಿಯಿದ್ದರೂ ವೈಜ್ಞಾನಿಕ ಸಮಾಜವಾದದ ಬಗ್ಗೆ ತಿಳಿದುಕೊಳ್ಳಲು ಈ ಪುಸ್ತಕ ಅತ್ಯುತ್ತಮ ಕೈಪಿಡಿ ಎಂಬುದರಲ್ಲಿ ಸಂದೇಹವೇ ಇಲ್ಲ.

- ಕೃಷ್ಣಪ್ಪ ಕೊಂಚಾಡಿ, ಮಂಗಳೂರು

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee, Editor: S.Y. GURUSHANTH